
UNIVERSAL LIBRARY
OU_200466
UNIVERSAL LIBRARY

# ಅಕ್ಕಾಜಿ

“ अक्काजि ”



ಲಲಿತ ಸಾಹಿತ್ಯ ಮಾಲೆ

— ಧಾರವಾಡ —

# ಮನೋಹರ ಗ್ರಂಥ ಭಾಂಡಾರ, ಧಾರವಾಡ.

## ಲಲಿತವಾಙ್ಮಯ

ಆರತಿ — ಕನ್ನಡತಿಯರು ೦-೧೨-೦
ಕಂಬನಿ — ಸೌ. ಗೌರಮ್ಮ ೧- ೦-೦
ಮೋಪಾಸಾನ ಕಥೆಗಳು — ಚುಳಕಿ ೦-೧೨-೦
ಚಿತ್ರ (ಶರಚ್ಚಂದ್ರ) — ಮಲ್ಲಾರಿ ೦-೧೦-೦
ಬೆಳಕಿನ ಕತ್ತಲೆ — ,, ೦-೧೨-೦
ಮುಳ್ಳುಬೇಲಿ — ಚಾಲುಕ್ಯ ೧- ೦-೦
ಲಹರಿ — ಕಲಮದಾನಿ ೦- ೬-೦
ದೂರ ಹೋದಳು — ಭಾರತೀಸುತ ೦- ೬-೦
ವೀಣಾನಾದ — ಕ್ಸ.ಪ.ಕು. ೦- ೮-೦
ಬೆಳ್ಳಿಯ ಹಬ್ಬ — ಎಸ್.ಕೆ.ಕು. ೦- ೮-೦
ಇಲೆಕ್ಶನ್ — ,, ೦- ೪-೦
ಕಲ್ಕಿ — ರಮಾಕಾಂತ ೦-೧೦-೦
ಕಣ್ಣಲ್ಲಿ ಬಟ್ಟು — ,, ೦- ೪-೦
ಹೆಣ್ಣಿನ ತೊಡಕು — ಟೇಂಗ್ಸೆ ೦- ೪-೦

## ಉದಾತ್ತವಾಙ್ಮಯ

ಭಕ್ತಿಯೋಗ (ವಿವೇಕಾನಂದ) — ಗೊರೂರ ೦-೧೦-೦
ಪರ್ಣಕುಟಿ — ಸಿದ್ದವನಹಳ್ಳಿ ೧- ೮-೦
ಯತಿರಾಮಾನುಜ — ,, ೦- ೩-೦
ಕಲೋಪಾಸಕ — ಗೋಕಾಕ ೧- ೦-೦
ಪಯಣ — ,, ೦-೧೨-೦
ಸಮುದ್ರದಾಚೆಯಿಂದ — ,, ೨- ೦-೦
ಕವಿಕಾವ್ಯ ಮಹೋನ್ನತಿ — ,, ೦-೧೨-೦
ಮೂರ್ತಿ — ಬೇಂದ್ರೆ ೦- ೮ ೦
ಚಂದ್ರಹಾಸ (ಲಕ್ಷ್ಮೀಶ) — ,, ೦- ೮ ೦
ಹರಿಹರದೇವ — ಕುಂದಣಗಾರ ೧-೧೨-೦
ಮಹಾದೇವಿಯಕ್ಕ — ,, ೧- ೦-೦

## ಬಾಲವಾಙ್ಮಯ

ಬೆಲ್ಲಾ ಹಿಟ್ಟು — ವಸಂತ ೦- ೨-೦
ಪೊನ್ನಮ್ಮ — ಗೌರಮ್ಮ ೦- ೧-೬

ಇದಲ್ಲದೆ

### ಲಲಿತ ಸಾಹಿತ್ಯ ಮಾಲೆ, ಗಾಂಧೀ ಸಾಹಿತ್ಯ, ಅರವಿಂದ ಗ್ರಂಥ ಮಾಲೆ, ಪ್ರೇಮ ಪ್ರಕಟನಾಲಯ.

ಇವೆಲ್ಲ ಪ್ರಕಟನೆಗಳ ಅಧಿಕೃತ ಮಾರಾಟಗಾರರು.

**ಶಾಖೆ :** ಕನ್ನಡ ಪುಸ್ತಕಾಲಯ, ಬೆಳಗಾವಿ

ಲಲಿತ ಸಾಹಿತ್ಯ ಮಾಲೆಯ ಎರಡನೆಯ ಹೊತ್ತಗೆ

# ಅಕ್ಕಾಜಿ

ಶರಚ್ಚಂದ್ರರ 'ಬಡ ದಿದಿ'

ಅನುವಾದಕರು :

ಮಲ್ಲಾರಿ



ಲಲಿತ ಸಾಹಿತ್ಯ ಮಾಲೆ
ಧಾರವಾಡ

ಅಗಸ್ಟ್ ೧೯೪೨ ● ಬೆಲೆ ೦-೧೦-೦

ಸಂಪಾದಕರು :

ಚುಳಿಕಿ ಗೋವಿಂದರಾಯರು

5

ಹಕ್ಕುಗಳು ಪ್ರಕಾಶಕರ ಸ್ವಾಧೀನ.

ಪ್ರಕಾಶಕರು :

**ದ. ಬಾ. ಕುಲಕರ್ಣಿ**

ಮನೋಹರ ಗ್ರಂಥ ಭಾಂಡಾರ

ಧಾರವಾಡ

ಮುದ್ರಕರು :

**ಭಾಲಚಂದ್ರ ಘಾಣೇಕರ**

ಪ್ರತಿಭಾ ಮುದ್ರಣಾಲಯ

ಧಾರವಾಡ

# ನಿವೇದನೆ

ಈ "ಅಕ್ಕಾಜಿ" ಕಾದಂಬರಿಯು ಶ್ರೀ. ಶರಚ್ಚಂದ್ರರ "ಬಡೋ ದಿದಿ" ಎಂಬುದರ ಅನುವಾದವು. ಲಲಿತ ಸಾಹಿತ್ಯ ಮಾಲೆಯ ೨ನೆಯ ಕುಡಿಯು. ಶರತ್-ಸಾಹಿತ್ಯವು ರವಿಯಂತೆ ಪ್ರಖರವೂ ಉಜ್ವಲವೂ ಆಗಿರುವುದು. ಅವರ ಈ "ಬಡೋ ದಿದಿ" ಯಿಂದಂತೂ ಬಂಗಾಲೀ ಸಾಹಿತ್ಯ-ಕ್ಷೇತ್ರದಲ್ಲಿ ವಿಲಕ್ಷಣ ಚಲ-ವಿಚಲವುಂಟಾಗಿ ಅವರ ಕೀರ್ತಿದುಂದುಭಿಯು ಮೊಳಗಲಾರಂಭಿಸಿತು; ಶರಚ್ಚಂದ್ರರ ಸ್ಥಾನವು ಪ್ರಥಮ ಶ್ರೇಣಿಯಲ್ಲಿ ಬಂದಿತು.

ಭಾರತೀಯ ಕಾದಂಬರಿಕಾರರಲ್ಲಿ ಶರಚ್ಚಂದ್ರರು ಅದ್ವಿತೀಯರು. ಅವರ ಕೃತಿಕುಸುಮಗಳು ಸರ್ವದಾ ಸುಗಂಧವನ್ನು ಬೀರತಕ್ಕವು. ವಿಶ್ವಸಾಹಿತ್ಯದಲ್ಲಿಯೂ ಶರಚ್ಚಂದ್ರರ ಕಲೆಯು ಎಂದಿಗೂ ಬೆಳಗ ತಕ್ಕುದೇ. ಮಾನವ ಪ್ರೇಮಪೂರಿತವಾದೀ ಕೃತಿರತ್ನಗಳು ಅಕ್ಷಯ ವಾಗಿ ಎಂದಿಗೂ ಎಲ್ಲಿಯೂ ಬಾಳುವವು. ಅಂಥ ಪ್ರತಿಭೆ ಅವುಗಳಲ್ಲಿ ತುಂಬಿ ತುಳುಕುತ್ತಿದೆ. ಸಮಸ್ಯಾಪ್ರಧಾನ, ಮನೋವಿಶ್ಲೇಷಣಾತ್ಮಕ ದೃಷ್ಟಿಯಿಂದ ಬರೆದ ಕಾದಂಬರಿಗಳಲ್ಲಿ ಕಥಾಸನ್ನಿವೇಶ ಸಂಕುಚಿತ; ಬುದ್ಧಿಯ ವೈಶಾಲ್ಯತೆಗೆ ಪ್ರಧಾನಪಟ್ಟವಾದರೂ ಶರಚ್ಚಂದ್ರರ ಕಾದಂಬರಿಗಳಲ್ಲಿ ವಿಚಾರ ಪ್ರಗಲ್ಭತೆಯ ಜೊತೆಯಲ್ಲಿ ಸರಸ ರಸಪಾಕ ವಿರುವದರಿಂದ ಹೃದಯವನ್ನು ಮಿಂಟದೆ ಬಿಡುವದಿಲ್ಲ.

ಇವರ ಕಾದಂಬರಿಗಳು ಎಲ್ಲ ಭಾರತೀಯ ಭಾಷೆಗಳಲ್ಲಿ ಅನು ವಾದಿತವಾಗಿವೆ. ಹಿಂದಿಯಲ್ಲಂತೂ ಸಮಗ್ರ ಶರತ್ ಗ್ರಂಥಗಳು

ಪ್ರಕಟವಾಗಿವೆ. ಕನ್ನಡದಲ್ಲಿಯೂ ಶರಚ್ಚಂದ್ರ ಚಟರ್ಜಿಯವರ ಅನೇಕ ಕಾದಂಬರಿಗಳು ಪ್ರಕಟವಾಗಿವೆ, ಆಗುತ್ತಲಿವೆ. ಇವರ ಕಾದಂಬರಿ ಭಕ್ತವೃಂದವು ಬೆಳೆದಂತೆ ಅನುವಾದಕರ ವೃಂದವೂ ಬೆಳೆದಿದೆ. ಈ "ಅಕ್ಕಾಜಿ" (ಬಡೋ ದಿದಿ) ಯನ್ನು ಅನುವಾದ ಮಾಡಿ ಪ್ರಕಟಿಸುವ ಸಾಹಸದಲ್ಲಿದ್ದ ಗ. ಮಲ್ಹಾರಿ ಮೋವುಂಡಿಯವರು ನಮ್ಮ ಲಲಿತ ಸಾಹಿತ್ಯ ಮಾಲೆಯಲ್ಲಿ ಪ್ರಕಟಿಸಲು ಅನುಮತಿಯನ್ನಿತ್ತುದಕ್ಕಾಗಿ ನಾವು ಅವರಿಗೆ ಕೃತಜ್ಞರಾಗಿದ್ದೇವೆ.

ವಂಗ ಭಾಷೆ ಬಾರದಿದ್ದವರು ಅನುವಾದಿತ ಕೃತಿಗಳನ್ನು ಓದಿ ಹರುಷಗೊಳ್ಳುವರೆಂದು ಆಶಿಸಿದ್ದೇವೆ. ಈ ಕಾದಂಬರಿಯು ವಾಕ್ಪಟುವೂ ಜನರ ಮನಾಕರ್ಷಣೆಗೆ ಪಾತ್ರವಾಗಿರುವದರಲ್ಲಿ ಸಂದೇಹವಿಲ್ಲ.

"ಕುಲದೀಪಕರು" ಎಂಬದನ್ನು ೨ನೆಯ ಕುಡಿಯನ್ನಾಗಿ ಪ್ರಕಟಿಸುವದರ ಬದಲು ೩ನೆಯದನ್ನಾಗಿ ಪ್ರಕಟಿಸಲಾಗುವದು. ಚಂದಾದಾರರು ಲಕ್ಷವಿಡಬೇಕಾಗಿ ಬಿನ್ನಹ.

—**ಸಂಪಾದಕ**

ಮೂರನೆಯ ಹೊತ್ತಿಗೆ

# ಕು ಲ ದೀ ಪ ಕ ರು

**ಕೆಲವು ವ್ಯಕ್ತಿಚಿತ್ರಗಳು**

ಸಿದ್ದವನಹಳ್ಳಿ ಕೃಷ್ಣಶರ್ಮರಿಂದ

— **ಅಕ್ಟೋಬರದಲ್ಲಿ** —

# ಅಕ್ಕಾಜಿ

## ೧. ಮಲತಾಯಿಯ ಮಗ ಸುರೇಂದ್ರ

ಹುಲ್ಲು ಬೆಂಕಿಯ ಹೋಲಿಕೆಗೆ ಸಲ್ಲುವ ಜನರದೊಂದು ವರ್ಗ ಈ ಲೋಕದಲ್ಲಿದೆ. ಆ ಬೆಂಕಿ ಹೊತ್ತಿ ಉರಿಯುವುದೂ ತಡವಿಲ್ಲ, ಮತ್ತೆ ಆರುವುದಕ್ಕೂ ತಡವಿಲ್ಲ. ಅದರ ಹತ್ತಿರ ಯಾರಾದರೂ ಒಬ್ಬರು ಇರಬೇಕು— ಹಿಡಿ ಹಿಡಿ ಹುಲ್ಲು ಹಾಕುತ್ತಿರಬೇಕು— ಎಂದರೆ ಅದು ಉರಿಯುತ್ತಿರುತ್ತದೆ.

ಹಣತೆಯ ದೀಪವನ್ನು ನೋಡಿರಬಹುದು ನೀವು. ಈ ಜನಕ್ಕೆ ಅದರ ಹೋಲಿಕೆಯನ್ನೂ ಕೊಡಬಹುದು. ಹಣತೆಯಲ್ಲಿ ಎಣ್ಣೆಯಿರುತ್ತದೆ, ಬತ್ತಿಯಿರುತ್ತದೆ, ದೀಪ ಉರಿಯುತ್ತಿರುತ್ತದೆ. ಮತ್ತದರೊಳಗೆ ಒಂದು ಕಡ್ಡಿಯೂ ಇಟ್ಟಿರುತ್ತದೆ; ದೀಪ ಉರಿಯುತ್ತಿರುವವರೆಗೂ ಅದು ಸುಮ್ಮನೆ ಇದ್ದಿರುತ್ತದೆ. ಆ ಕೀಳು ಕಡ್ಡಿಯ ಪ್ರಯೋಜನ ತಿಳಿದು ಬರುವುದು ದೀವಿಗೆ ಸಣ್ಣದಾದಾಗ. ಬತ್ತಿಯನ್ನು ಚಾಚುವುದಕ್ಕೆ ಕಡ್ಡಿಯೊಂದಿಲ್ಲದಿದ್ದರೆ ದೀಪ ಎಣ್ಣೆಬತ್ತಿಗಳಿದ್ದರೂ ಉರಿಯಲಾರದು.

ನಮ್ಮ ಸುರೇಂದ್ರನಾಥನ ಸ್ವಭಾವ ಇದೇ ಬಗೆಯದು. ಅವನಲ್ಲಿ ಶಕ್ತಿಯಿದೆ, ಬುದ್ಧಿಯಿದೆ, ಎಲ್ಲಾ ಇದೆ. ಆದರೂ ಅವನಿಂದ ಒಂದು ಕೆಲಸವೂ ಕೊನೆಗಾಣುತ್ತಿರಲಿಲ್ಲ. ಆವಾಗ ಈವಾಗ ಅವನೊಂದು ಕೆಲಸವನ್ನು ಒಳ್ಳೆಯ ಹುರುಪಿನಿಂದ ಮೊದಲು ಮಾಡುವನು. ಆದರೆ ನಡುವೆಯೆ ಅಲಸಿಕೆಯೋ ಏನೋ ಬಂದು ಆ ಕೆಲಸ ಅರಕಳಿಯಾಗಿಯೇ ಉಳಿದುಬಿಡುವುದು. ಅಂತಹ ಹೊತ್ತಿನಲ್ಲಿ ಯಾರಾದರೂ ಹುರುಪುಗೊಡುವವರು ಬೇಕು ಆತನಿಗೆ. ಸುರೇಂದ್ರನ ತಂದೆ

ಪಶ್ಚಿಮದ ಕಡೆ ವಕೀಲಿ ಮಾಡುತ್ತಿದ್ದರು. ಬಂಗಾಲದೊಡನೆ ಅವರ ಸಂಬಂಧ ವಿಶೇಷವಾಗಿರಲಿಲ್ಲ. ಅವರ ಹತ್ತಿರ ಇದ್ದು ಸುರೇಂದ್ರ ಇಪ್ಪತ್ತನೆಯ ವಯಸಿನಲ್ಲಿ ಎಂ. ಎ. ಆದ. ಇದಾಗುವುದಕ್ಕೆ ಕಾರಣ ಹಲವಂಶದಿಂದ ಅವನ ಬುದ್ಧಿಮತ್ತೆಯಾದರೆ ಕೆಲವಂಶದಿಂದ ಅವನ ಮಲತಾಯಿ. ಆ ಮಲತಾಯಿ ಎಡೆಬಿಡದೆ ಅವನ ಬೆನ್ನು ಹತ್ತಿರುತ್ತಿದ್ದಳು. ಅದರಿಂದ ತನಗೆ ಸ್ವತಂತ್ರ ಅಸ್ತಿತ್ವವುಂಟೆಂಬುದು ಎಷ್ಟೋ ದಿನಗಳ ತನಕ ಅವನಿಗೇ ಗೊತ್ತಾಗಿರಲಿಲ್ಲ. ಸುರೇಂದ್ರ ಎಂಬೊಂದು ಸ್ವತಂತ್ರ ಪ್ರಾಣಿ ಈ ಪ್ರಪಂಚದೊಳಗಿದೆ ಎಂದೆಣಿಸುವುದೇ ಕಠಿನವಾಗಿದ್ದಿತು. ಮಾಡುವುದು ಮುಟ್ಟುವುದು, ಕೂಡುವುದು ಮಲಗುವುದು, ಆಡುವುದು ನೋಡುವುದು, ಓದುವುದು ತೇರ್ಗಡೆಹೊಂದುವುದು ಮೊದಲಾದ ಅವನ ಎಲ್ಲ ವ್ಯಾಪಾರಗಳನ್ನು ನಡಯಿಸುವುದು ಆ ಮಲತಾಯಿಯ ಇಚ್ಛೆಯೆ; ಅವಳ ಇಚ್ಛಾಶಕ್ತಿಯ ನರರೂಪವೇ ಆತ ಎಂದರೂ ಸಲ್ಲುವುದು. ಮಲತಾಯಿಯ ಹೊಟ್ಟೆಯಲ್ಲಿ ಮಕ್ಕಳಿರಲಿಲ್ಲ. ಅಂತೆಯೇ ಸುರೇಂದ್ರನ ಬಗೆಗೆ ಅವಳಿಷ್ಟು ದಕ್ಷೆ. ಆ ಕರ್ತವ್ಯಪರಾಯಣೆಯಾದ ಹೆಂಗುಸಿನ ಶಾಸನದಲ್ಲಿ ಬೆಳೆದುದರಿಂದ ಅವನ ಓದುಬರೆ ಈ ಮಟ್ಟೆವನ್ನು ಕಂಡಿತು. ಆದರೆ ಇಷ್ಟಕ್ಕೂ ಅವನಲ್ಲಿ ಆತ್ಮವಿಶ್ವಾಸವೆಂಬ ಗುಣ ಮಾತ್ರ ಮೂಡಲಿಲ್ಲ. ಯಾವುದೇ ಕೆಲಸ ಸರ್ವಾಂಗ ಸುಂದರವಾಗಿ ತನ್ನ ಕೈಯಿಂದ ನೆರವೇರುವುದೆಂದು ಅವನಿಗೆನಿಸುತ್ತಿರಲಿಲ್ಲ. ಏತಕ್ಕಾಗಿ ಮಾಡಬೇಕು, ಏನು ಮಾಡಬೇಕು, ಯಾವಾಗ ಮಾಡಬೇಕು ಎಂಬ ವಿಷಯದಲ್ಲಿ ಅವನು ಪೂರ ಪರಾವಲಂಬಿ. ತನಗೆ ನಿದ್ದೆ ಬರುತ್ತಿದೆಯೋ, ಏನು ಹಸಿವೆಯಾಗಿದೆಯೋ ಎಂಬುದನ್ನು ಕೂಡ ಅವನು ನಿಶ್ಚಿತವಾಗಿ ನಿರ್ಧರಿಸಿಕೊಳ್ಳಲಾರ. ತಿಳಿಯತೊಡಗಿದಂದಿನಿಂದ ಹದಿನೈದು ವರ್ಷದವನಾಗುವ ತನಕವೂ ಹೀಗೆ ತಾಯಿಯನ್ನವಲಂಬಿಸಿಯೇ ಹೋಯಿತು ಅವನ ಕಾಲ. ತಾಯಿ ಅವನಿಗಾಗಿ ಅನೇಕ ಕೆಲಸಗಳನ್ನು ಮಾಡಬೇಕಾಗಿದ್ದಿತು. ದಿನದ ಇಪ್ಪತ್ತುನಾಲ್ಕು ಗಂಟೆಗಳಲ್ಲಿ ಇಪ್ಪತ್ತೆರಡು— ಒಮ್ಮೊಮ್ಮೆ ತಿರಸ್ಕಾರದ ಮಾತು, ಒಮ್ಮೊಮ್ಮೆ ತಿಳಿವಳಿಕೆಯ ನುಡಿಗಳು, ಒಮ್ಮೊಮ್ಮೆ ನಿರ್ಭರ್ತ್ಸನೆ, ಒಮ್ಮೊಮ್ಮೆ ಹೊಡೆತ ಇತ್ಯಾದಿ

ಗಳಲ್ಲಿ ಕಳೆಯುವವು. ಅಲ್ಲದೆ ಅವನ ಪರೀಕ್ಷೆ ಹತ್ತಿರಿಸಿದಾಗಂತೂ ಅವನನ್ನು ಎಚ್ಚರಿಸಲೋಸುಗ ಆಕೆ ತನ್ನ ನಿದ್ರಾಸುಖಕ್ಕೂ ನೀರುಬಿಡಬೇಕಾಗುತ್ತಿದ್ದಿತು. ಸವತಿಯ ಮಗನಿಗಾಗಿ ಯಾರಾದರೂ ಇಷ್ಟೊಂದು ಹಚ್ಚಿಕೊಂಡುದು ಉಂಟೆ? ಇಷ್ಟಾದರೂ ನೆರೆಹೊರೆಯುವರು ಅವಳನ್ನು ಏಕಮುಖವಾಗಿ ಕೊಂಡಾಡುತ್ತಿರಲಿಲ್ಲ. ಆದರೆ ಸುರೇಂದ್ರನ ಸಲುವಾಗಿ ಮನಮುಟ್ಟಿ ಹೆಣಗುವುದರಲ್ಲಿ ಅವಳೆಂದೂ ಅಲಕ್ಷ್ಯ ತೋರಲಿಲ್ಲ. ಆಕೆ ತಿರಸ್ಕಾರದಿಂದ ಅಥವಾ ನಿರ್ಭರ್ತ್ಸನೆಯಿಂದ ಏನಾದರೂ ಎಂದಾಗ ಒಮ್ಮೊಮ್ಮೆ ಸುರೇಂದ್ರನ ಕಣ್ಣೊಳಗೆ ನೀರು ಬರುವುದು. ಹೀಗಾಗುವುದು ಜ್ವರದ ಪೂರ್ವಲಕ್ಷಣ ಎಂದು ವಕೀಲಗಿತ್ತಿ ನಿರ್ಧರಿಸುವಳು; ಕೂಡಲೆ ಅವನಿಗೆ ಮೂರು ದಿವಸ ಪಥ್ಯದಿಂದ ಇರುವಂತೆ ಕಟ್ಟು. ಅವನ ಮಾನಸಿಕ ಉನ್ನತಿ, ಅವನ ಶೀಲದ ಮೇಲ್ಮೆ ಇವುಗಳ ಬಗೆಗ ಆ ತಾಯಿಯ ದೃಷ್ಟಿ ಇನ್ನೂ ಮೊನೆಯಾಗಿತ್ತು. ಸುರೇಂದ್ರನ ಮೈಮೇಲೆ ಜಳಜಳವಾದ ಹೊಸಮಾದರಿಯ ಬಟ್ಟೆಗಳನ್ನು ಕಂಡಳಿಲ್ಲವೊ, "ಅಯ್ಯೋ, ಹುಡುಗ ಕೆಟ್ಟುಹೋಗುವನಲ್ಲ, ಬಡಗು ಬಿನ್ನಾಣಕ್ಕೆ ಬಿದ್ದ," ಎಂದವಳು ಯೋಚನೆಗೊಳಗಾಗುವಳು. ಆಕೂಡಲೆ ಕನಿಷ್ಠ ಎರಡು ವಾರಗಳಾದರೂ ಅವನ ಬಟ್ಟೆಗಳನ್ನು ಅಗಸರಿಗೆ ಹಾಕಕೂಡದು ಎಂದು ಕಟ್ಟಪ್ಪಣೆ ಹೊರಡುವುದು.

ಸುರೇಂದ್ರನ ದಿನಗಳು ಹೀಗೆ ಸಾಗಿದ್ದವು. 'ಮಾನವೀಯ ಜೀವನವೆಂದರೆ ಜೋಪಾನವಾಗಿಟ್ಟುಕೊಳ್ಳತಕ್ಕುದೇನೂ ಅಲ್ಲ' ಎಂದೆನಿಸುತ್ತಿತ್ತು ಆತನಿಗೊಮ್ಮೊಮ್ಮೆ. ಮತ್ತೊಮ್ಮೆ ಎಲ್ಲರ ಆಯುಷ್ಯವೂ ಹೀಗೆ ಅತಿವಾಹಿತವಾಗಿರುವುದೆಂದೂ ಎನಿಸುವುದು. ಆದರೆ ಒಂದೊಂದು ವೇಳೆ ನೆರೆಯುವರು ಹೊರೆಯುವರು ಅವನ ತಲೆಯೊಳಗೆ ಇಲ್ಲದ ಕಲ್ಪನೆಗಳನ್ನು ತುಂಬಿಬಿಡುವರು. ಒಂದು ದಿವಸ ಹಾಗೆಯೇ ಆಯಿತು. "ನಿನ್ನಂಥ ಬುದ್ಧಿವಂತ ಹುಡುಗ ವಿಲಾಯತಿಗೆ ಹೋಗಿ ಬಂದರೆ, ಅನೇಕ ಲೋಕೋಪಕಾರಿಯಾದ ಕೆಲಸಗಳು ಆಗುವವು," ಎಂದು ಒಬ್ಬ ಮಹಾರಾಯ ಬಂದು ಹೇಳಿದ. ಸುರೇಂದ್ರನಿಗೆ ಈ ಮಾತು 'ಹೌದು' ಎನಿಸಿತು. ಅಡವಿಯೊಳಗಿನ ಬಿಡಾಡಿ ಹಕ್ಕಿಗಿಂತ ಪಂಜರ

ದೊಳಗಿನ ಹಕ್ಕಿಯಂತೆ ಹೆಚ್ಚಾಗಿ ರೆಕ್ಕೆಗಳನ್ನು ಫಡಫಡಿಸುವುದು. ತಡೆಯಿಲ್ಲದೆ ಮನಬಂದತ್ತ ಹರಿಯುವ ಗಾಳಿಯ ಸ್ವಾತಂತ್ರ್ಯದ ತೇಜ ಅವನ ಕಲ್ಪನೆಯ ಕಣ್ಣುಗಳಿಗೆ ಕಾಣತೊಡಗಿತು. ಅವನಾ ಪರಾಧೀನ ಪ್ರಾಣ ಪಂಜರದ ನಾಲ್ಕೂ ನಿಟ್ಟುಗಳಲ್ಲಿ ಹುಚ್ಚಿದ್ದು ಫಡಫಡನೆ ತಿರುಗಾಡತೊಡಗಿತು.

ಒಮ್ಮೆ ಸುರೇಂದ್ರ ತಂದೆಯ ಬಳಿ ಹೋಗಿ ತಾನು ವಿಲಾಯತಿಗೆ ಹೋಗಬೇಕೆಂಬ ವಿಚಾರವನ್ನು ಎತ್ತಿದ. ಅದಕ್ಕೆ ಏನಾದರೂ ಮಾಡಿ ಏರ್ಪಾಡು ಮಾಡಿಕೊಡಲು ಕೇಳಿಕೊಂಡ; ಅಲ್ಲಿಗೆ ಹೋಗಿ ಬರುವುದರಿಂದ ಏನೇನು ಲಾಭಗಳಾಗುವವೆಂಬುದನ್ನು ತಿಳಿಸಿ ಹೇಳಿದ. "ವಿಚಾರ ಮಾಡುತ್ತೇನೆ," ಎಂದು ನುಡಿದರು ತಂದೆ. ಆದರೆ ತಾಯಿ ಮಹಾರಾಯಳು ಇದಕ್ಕೆ ಹದಿನಾರಾಣೆ ಪ್ರತಿಕೂಲಳು. ತಂದೆ ಮಕ್ಕಳ ಮಾತು ನಡೆದಿರುವಾಗ ಆಕೆ ಫಕ್ಕನೆ ಅಡ್ಡ ಬಂದೇ ಬಿಟ್ಟಳು. ಬಂದವಳೇ ಅವರಿಬ್ಬರೂ ಸ್ತಂಭಿತರಾಗುವ ಹಾಗೆ ಅತ್ಯಂತ ಉಪಹಾಸಯುಕ್ತವಾದ ಸ್ವರದಿಂದ ಕೊಳ್ಳನೆ ನಕ್ಕಳು. ನಕ್ಕು ಆ ಗೃಹಿಣಿ ಇಂತೆಂದಳು: "ಅದೇನು ವಿಚಾರ? ಮತ್ತೆ ನನ್ನನ್ನೂ ಕಳಿಸಬೇಕಾಯಿತು ವಿಲಾಯತಿಗೆ ಹಾಗಾದರೆ. ಇಲ್ಲದಿದ್ದರೆ ಅಲ್ಲಿ ಸುರೇಂದ್ರನನ್ನು ಸಂಬಾಳಿಸುವವರಾರು? ಪಾಪ, ಸುರೇನಗೆ ಯಾವಾಗ ಉಣಬೇಕು, ಏನು ಉಣಬೇಕು; ಎಷ್ಟು ಉಣಬೇಕು, ಯಾವಾಗ ಉಡಬೇಕು, ಏನು ಉಡಬೇಕು, ಹೇಗೆ ಉಡಬೇಕು ಎಂಬುದಾದರೂ ತಿಳಿಯುವುದೆಂದಿರೇನು? ಅವನನ್ನೊಬ್ಬನನ್ನೇ ಕಳಿಸುತ್ತೀರೊ ಏನು? ಮರ್ರ್ಯೋ ಬೇಡ. ಮನೆಯೊಳಗಿನ ತಟ್ಟೊ ಕಳಿಸುವುದೇನು, ಮತ್ತಿವನನ್ನು ಕಳಿಸುವುದೇನು, ಎರಡೂ ಅಷ್ಟೆ. ತುಟ್ಟುವಿಗೆ ತನಗೆ ಹಸಿವೆಯಾಗಿದೆಯೋ ಏನು ನಿದ್ದೆ ಬರುತ್ತಿದೆಯೋ ಎಂಬುದಾದರೂ ಗೊತ್ತಾಗುತ್ತದೆ; ಸುರೇನಗೆ ಅದೂ ತಿಳಿಯುವುದಿಲ್ಲ. ಇದರಿಂದ ನಾವು ನಗೆಗೀಡಾಗುವುದು ಅಷ್ಟೇ ಖಂಡಿತ."

ಅವಳ ಆ ನಗೆ, ಆ ಮಾತು, ಇವುಗಳಿಗಿಂತ ಹೆಚ್ಚಿನ ಅವಳ ಹಾವ ಭಾವ ಅಭಿನಯ ಇವುಗಳನ್ನು ಕಂಡು ರಾಯಮಹೋದಯರು

ಮಾತ್ತಷ್ಟು ನಾಚಿಕೊಂಡರು. ಈಕೆಯ ಯುಕ್ತಿವಾದದ ಮುಂದೆ ತಾನೋಡಲಾರನೆಂದು ಸುರೇಂದ್ರನಾಥ ತನ್ನ ಪೂರ್ತಿ ತಾನು ಅರಿತು ಕೊಂಡ. ವಿಲಾಯತಿಗೆ ಹೋಗುವ ಅವನಾಸೆ ಅಲ್ಲಿಯೇ ಕಮರಿ ಹೋಯಿತು.

ಸುರೇಂದ್ರನ ವಿಲಾಯತಿಯ ವಿಚಾರ ಮೂಲದಲ್ಲಿಯೆ ಮುರಿದು ಹೋದುದನ್ನು ತಿಳಿದು ಅವನ ಗೆಳೆಯರು ಬಹಳ ಚಡಪಡಿಸಿದರು. ಆದರೆ ವಿಲಾಯತಿಗೆ ಹೋಗುವುದಕ್ಕೆ ಮತ್ತೇನಾದರೂ ಹಾದಿ ಉಂಟೋ ಇಲ್ಲವೋ ಎಂಬುದನ್ನು ಅವರು ಆಡಿ ಕೂಡ ತೋರಿಸಲಿಲ್ಲ. ಕೊನೆಗೆ ಇದಿಷ್ಟು ಮಾತುಗಳನ್ನು ಮಾತ್ರ ಹೊಟ್ಟೆಯೊಳಗಿಟ್ಟುಕೊಳ್ಳುವುದು ಅವರಿಗೆ ಆಗಲಿಲ್ಲ. "ಇಷ್ಟು ಪರಾಧೀನನಾಗಿರುವುದಕ್ಕಿಂತ ಬಿಕ್ಕೆ ಬೇಡಿ ಬದುಕುವುದು ಲೇಸು; ಎಂ. ಎ. ಪರೀಕ್ಷೆಯಲ್ಲಿ ಸನ್ಮಾನ ಯುತವಾಗಿ ಉತ್ತೀರ್ಣನಾಗಬಲ್ಲವ ಹೊಟ್ಟೆಗಾಗಿ ಇಷ್ಟೊಂದು ಅಪ ಮಾನವನ್ನು ಖಂಡಿತ ಸೈರಿಸಲಾರ," ಎಂದು ಅವರು ಉಸುರಿದರು.

ಸುರೇಂದ್ರ ಮನೆಗೆ ಬಂದ ತರುವಾಯ ಇದೇ ವಿಚಾರ ಅವನ ತಲೆಹಿಡಿಯಿತು. ಬಗೆಬಗೆದು ನೋಡಿದಂತೆ ತನ್ನ ಗೆಳೆಯರು ಆಡಿದ ಮಾತೇನೂ ಸುಳ್ಳಲ್ಲ ಎಂದೆನಿಸತೊಡಗಿತು ಅವನಿಗೆ. ತಿರಿದುಕೊಂಡು ತಿಂದು ಬಾಳುವುದೇ ಇದಕ್ಕಿಂತ ಒಳಿತು. ಬಯಸಿದವರಿಗೆಲ್ಲ ವಿಲಾ ಯತಿಗೆ ಹೋಗುವುದಕ್ಕೆ ಸಂಧಿ ಸಿಕ್ಕುವುದೆಂದಲ್ಲ; ಆದರೆ ಈ ರೀತಿ ಜೀವನವಿಲ್ಲದ ಜೀವನವನ್ನು ನೂಕಿಕೊಂಡು ಹೋಗುವ ಅಗತ್ಯವೇನೂ ಇಲ್ಲ.

ಒಂದು ದಿನ ಮನೆಯಿಂದ ಹೊರಟೆದ್ದು ನಡೆದ. ಕಾಳಿರುಳಿನಲ್ಲಿ ನಿಲ್ದಾಣಕ್ಕೆ ಹೋಗಿ, ಅವನು ಕಲಕತ್ತೆಯ ತಿಕೀಟು ತೆಗೆದುಕೊಂಡು ಉಗಿಬಂಡಿಯನ್ನೇರಿದ. ತಂದೆಗೆ ಒಂದು ಓಲೆಯನ್ನು ಬರೆದು ಚೆಲ್ಲಿದ: "ಕೆಲ ದಿನಗಳ ಮಟ್ಟಿಗೆ ನಾನು ಮನೆಬಿಟ್ಟು ಹೊರಟಿರುವೆ. ನನ್ನನ್ನು ಸುಮ್ಮನೆ ಹುಡುಕಿ ತಾವು ಬಳಲಬಾರದು. ಒಂದು ವೇಳೆ ತಮಗೆ ನಾನು ಸಿಕ್ಕರೂ ಮನೆಗೆ ಮರಳಲಾರೆ."

ರಾಯಮಹಾಶಯರು ಮನೆಯೊಡತಿಗೆ ಆ ಓಲೆಯನ್ನು ತೋರಿಸಿದರು. "ಹಾಂ, ಸುರೇನ ದೊಡ್ಡವನಾಗಿದ್ದಾನೆ ಈಗ. ಅವನ ಓದು ಮುಗಿದಿದೆ. ಅವನ ಪುಚ್ಛ ಈಗ ಬಲಿತಿವೆ. ಈಗಲ್ಲದಿದ್ದರೆ ಇನ್ನಾವಾಗ ಅವನು ಹಾರಿಹೋಗುವುದು ?" ಎಂದು ನುಡಿದಳಾಕೆ.

ಇಷ್ಟಾದರೂ ತಂದೆ ಮಗನನ್ನು ಹುಡುಕಿಸದಿರಲಿಲ್ಲ. ಕಲಕತ್ತೆಯಲ್ಲಿದ್ದ ತಮ್ಮ ಗುರುತಿನವರಿಗೆಲ್ಲ ಅವರು ಓಲೆ ಬರೆದರು. ಅವರ ಪ್ರಯೋಜನವೇನೂ ಆಗಲಿಲ್ಲ; ಸುರೇಂದ್ರ ಸಿಕ್ಕಲಿಲ್ಲ.

## ೨. ಉದ್ಯೋಗಾನ್ವೇಷಿ ಸುರೇಂದ್ರ

ಜನಜಂಗುಳಿಯಿಂದ ಕಿಕ್ಕಿರಿದ ಕಲಕತ್ತೆಯ ರಾಯಬೀದಿಗಳಲ್ಲಿ ಅಲೆಯತೊಡಗಿದಾಗ, ತಾನು ಮಾಡಿದುದು ಸರಿಯಾಗಲಿಲ್ಲ ಎಂದು ಸುರೇಂದ್ರನಿಗೆ ಎನಿಸತೊಡಗಿತು. ಅಲ್ಲಿ ತಿರಸ್ಕಾರದಿಂದ ನುಡಿಸುವವರಾಗಲಿ, ಹಗಲಿರುಳು ತಮ್ಮ ಅಂಕೆಯಲ್ಲಿಟ್ಟುಕೊಂಡು ನಡೆಸುವವರಾಗಲಿ ಯಾರೂ ಅವನಿಗಿಲ್ಲ. ಆತನ ಮೋರೆ ಬಾಡಿದರೇನು, ದುಃಖದಿಂದ ಬಸವಳಿದರೇನು, ಆಕಡೆ ಗಮನ ಯಾರಿಗಿದೆ ! ಆ ಊರೊಳಗೆ ತನಗಾಗಿ ತಾನೇ ಯೋಚಿಸಬೇಕು. ಅಲ್ಲಿ ತಿರುಪೆ ಹುಟ್ಟುತ್ತದೆ, ಮರುಕಕ್ಕೆ ಎಡೆಯಿದೆ, ಎಲ್ಲಿಯಾದರೂ ಆಶ್ರಯವೂ ಸಿಕ್ಕೀತು; ಆದರೆ ನಮಗೋಸುಗ ನಾವೇ ಪ್ರಯತ್ನಪಡಬೇಕಲ್ಲದೆ ತಮ್ಮಷ್ಟಕ್ಕೆ ತಾವು ಯಾರೂ ನಮ್ಮ ಕಡೆ ಕಣ್ಣು ಹಾಕಲಾರರು. ಏನೆಲ್ಲ ಪ್ರಯತ್ನಗಳನ್ನು ತಾವು ಮಾಡಬೇಕು; ಆಸರಕ್ಕೆ ಇಂಬನ್ನು ತಮಗೆ ತಾವೇ ಹುಡುಕಿಕೊಳ್ಳಬೇಕು.

ಇದು ಹಸಿವೆ, ಇದು ನಿದ್ದೆ ಎಂದು ಗುರುತಿಸುವ ಅರಿವು ಸುರೇಂದ್ರನಿಗೆ ಅಲ್ಲಿ ಉಂಟಾಯಿತು. ಮನೆಯನ್ನು ಬಿಟ್ಟು ಬಂದು ಎಷ್ಟೋ ದಿನಗಳು ಸಂದವು. ಓಣಿ ಓಣಿ ಅಲೆದಲೆದು ಅವನ ಮೈ ಬಳಲಿ ಬೆಂಡಾಯಿತು; ಹತ್ತಿರಿದ್ದ ಹಣ ತೀರಿತು; ಅರಿವೆ ಅಂಚಡಿಗಳು

ಮಾಸಿದವು, ಹಣ್ಣಾದವು, ಹರಿದವು. ಇರುಳು ಮಲಗುವುದಕ್ಕೆ ಒಂದು ಎಡೆ ಇಲ್ಲ. ಸುರೇಂದ್ರನ ಕಣ್ಣೊಳಗೆ ನೀರು ಬರುವುದು. ಮನೆಗೆ ಓಲೆ ಬರೆಯುವುದಕ್ಕೆ ಮನಸಾಗಲೊಲ್ಲದು—ನಾಚಿಕೆಯೆನಿಸಿತು. ಮೇಲಾಗಿ ಆ ಮಲತಾಯಿಯ ಒಲವಿಲ್ಲದ ಮುಖ ಅವನ ಒಳಗಣ್ಣಿ ಮುಂದೆ ಬರುತ್ತಲೇ, ಮನೆಗೆ ಹಿಂದಿರುಗುವ ಎಣಿಕೆ ಪೂರ್ತಾ ಮಾಯ ವಾಗಿಬಿಡುವುದು. ತಾನು ಇಂತಹ ಒಂದು ಕಡೆ ಎಂದೋ ಒಮ್ಮೆ ಇದ್ದೆ ಎಂಬ ನೆನಪೇ ಅವನನ್ನು ನಡುಗಿಸುವುದು.

ಒಂದು ದಿನ ಅವನಂತೆಯೆ ದರಿದ್ರನಾದ ಒಬ್ಬ ಅವನಿಗೆ ಸಿಕ್ಕಿದ. "ಅಣ್ಣಾ, ನೀವಿಲ್ಲಿ ಹೇಗೆ ಹೊಟ್ಟೆ ಹೊರೆದುಕೊಳ್ಳುವಿರಿ?" ಎಂದು ಕೇಳಿದ ಸುರೇಂದ್ರ.

ಆ ಮನುಷ್ಯನ ಸ್ವಭಾವ ಒಂದಿಷ್ಟು ಒರಟು. ಅಲ್ಲದಿದ್ದರೆ ಅವ ನೇನೂ ಸಿಡುಕುನುಡಿ ನುಡಿಯುತ್ತಿರಲಿಲ್ಲ. "ಹೋರಿ ಮಾಡಿ ಗಳಿಸಿ ಹೊಟ್ಟೆ ತುಂಬಿಕೊಳ್ಳುತ್ತೇನೆ. ಕೆಲಸ ಮಾಡುವವನಿಗೆ ಕಲಕತ್ತೆಯಲ್ಲಿ ಏನು ಕಡಿಮೆ?" ಎಂದು ಅವನೆಂದ.

"ನನಗೂ ಒಂದು ಕೆಲಸ ದೊರಕಿಸಿ ಕೊಡುವಿರಾ?"

"ನಿಮಗೆ ಏನು ಬರುತ್ತದೆ?"

ಸುರೇಂದ್ರ ಅದಕ್ಕೆ ಅವಾಕ್ಕಾದ. ನಿಜಕ್ಕೂ ಕೆಲಸ ಎಂಬುದು ಯಾವುದೂ ಅವನಿಗೆ ಬರುತ್ತಿರಲಿಲ್ಲ. ವಿಚಾರಮಾಡುತ್ತ ನಿಂತ.

"ನೀವೇನು ಭದ್ರ ಜನರೊ?" ಎಂದು ಆ ಮನುಷ್ಯ ವಿಚಾರಿಸಿದ.

ಸುರೇಂದ್ರ ಉತ್ತರರೂಪವಾಗಿ ತಲೆ ಹಾಕಿದ.

"ಹಾಗಾದರೆ ನೀನೇಕೆ ಸಾಲೆ ಓದಲಿಲ್ಲ?"

"ಓದಿದ್ದೇನೆ" ಎಂದಿಷ್ಟೇ ಮರುನುಡಿದ ಸುರೇಂದ್ರ, ಎಂ. ಎ.

ತುಸ ವಿಚಾರ ಮಾಡಿ ಬಳಿಕ ಆತ ಹೇಳಿದ: "ಒಳ್ಳೆಯದು, ಒಂದು ಕೆಲಸ ಮಾಡು. ಈ ದೊಡ್ಡ ವಾಡೆಯುಂಟಲ್ಲ, ಅಲ್ಲಿಗೆ ಹೋಗು. ಅದೊಬ್ಬ ಭಾರಿ ಜಮೀನುದಾರನ ಮನೆ. ಆತ ನಿನಗೆ ಏನಾದರೂ ಮಾಡಿಯಾನು." ಇಷ್ಟೆಂದು ಆ ಮನುಷ್ಯ ಹೊರಟುಹೋದ.

ಸುರೇಂದ್ರನಾಥ ಆ ವಾಡೆಯ ಹೆಬ್ಬಾಗಿಲ ಹತ್ತಿರ ಹೋದ. ಅಲ್ಲಿಯೆ ತುಸು ಹೊತ್ತು ನಿಂತ. ಹಿಂದಿರುಗಿ ಮೆಲ್ಲನೆ ಹೊರಟು ಬಂದು ಬಿಟ್ಟ. ಆವೊತ್ತು ಅಷ್ಟೆ, ಮತ್ತೇನೂ ಆಗಲಿಲ್ಲ. ಮಾರನೆಯ ದಿನವೂ ಇದರಂತೆಯೆ ಉರುಳಿತು. ಹೀಗೆ ಎರಡು ದಿನ ಬಾಗಿಲಲ್ಲಿಯೇ ಹುರಿಯಾಳುತನ ಮಾಡಿದ ತರುತಾಯ, ಮೂರನೆಯ ದಿನ ಒಳ್ಳೆ ಒಳ್ಳೆ ಧೈರ್ಯಮಾಡಿ ಹೆಬ್ಬಾಗಿಲಿನೊಳಗೆ ಕಾಲಿಟ್ಟ. ಇದಿರಿಗೆ ಒಬ್ಬ ಆಳು ನಿಂತಿದ್ದ. "ಏನು ಬೇಕಿತ್ತು ?" ಎಂದು ಆಳು ಪ್ರಶ್ನಿಸಿದ.

"ಬಾಬುಗಳನ್ನ...."

"ಬಾಬುಗಳು ಮನೆಯೊಳಗಿಲ್ಲ."

ಸುರೇಂದ್ರ ಉಳಿದುಕೊಂಡೆ ಎಂದುಕೊಂಡ. ಆನಂದದಿಂದ ಅವನ ಎದೆ ಬಿರಿಯುವಂತಾಯಿತು. ಬಾಬುಗಳು ಮನೆಯೊಳಗಿಲ್ಲ! ತನ್ನ ರಗಳೆರಂಬಾಟ ಒಪ್ಪಿಸುವುದು, ಕೆಲಸದ ಮಾತು ಎತ್ತುವುದು ತಪ್ಪಿಹೋಯಿತು! ಉತ್ಸಾಹದಿಂದ ಮರಳಿ ಹೋಗಿ ಉಪಹಾರದಂಗಡಿಯನ್ನು ಹೊಕ್ಕು ಹೊಟ್ಟೆ ತುಂಬ ತಿಂಡಿ ತಿಂದ. ಕೆಲವೊಂದು ಕ್ಷಣಗಳು ಆನಂದದಲ್ಲಿ ಕಳೆದವು. ಆಮೇಲೆ ಅವನನ್ನು ವಿಚಾರ ಆವರಿಸಿತು. —ನನ್ನ ವಿಷಯವನ್ನು ಬಾಬುಗಳಿಗೆ ಯಾವ ರೀತಿ ಹೇಳಿದರೆ ಕೆಲಸ ಆದೀತು ?

ಆವೊತ್ತಿನ ಆ ಉತ್ಸಾಹ ಮರುದಿನಕ್ಕೆ ಉಳಿಯಲಿಲ್ಲ. ಬಾಬುಗಳ ಮನೆಯ ಹತ್ತಿರ ಹತ್ತಿರ ಹೋದಹೋದಂತೆ, ಸುರೇಂದ್ರನಿಗೆ ಹಿಂದಕ್ಕೆ ಹೋಗುವ ಇಚ್ಛೆ ಹೆಚ್ಚು ಹೆಚ್ಚಾಗತೊಡಗಿತು. ಎಣಿಸೆಣಿಸಿ ಹೆಜ್ಜೆ ಚೆಲ್ಲುತ್ತಿರುವನೋ ಎಂಬಂತೆ ಅವನು ಬಾಗಿಲವರೆಗೆ ಹೋದ. ಅಲ್ಲಿಯೇ ನಿಂತ. ಒಳಗೆ ಹೋಗಲು ಕಾಲು ಬರಲಿಲ್ಲ. ತನ್ನ ಕೆಲಸಕ್ಕಾಗಿಯೇ ತಾನು ಹೊರಟಿದ್ದೇನೆ ಎಂಬ ಕಲ್ಪನೆ ಕೂಡ ಅವನಿಗೆ ಇಲ್ಲವಾಯಿತು. ಯಾರೋ ತನ್ನನ್ನು ಒತ್ತಾಯದಿಂದ ತಳ್ಳುತ್ತಿರುವರೋ ಏನೊ! ಆದರೂ ಅವನು ಈದಿನ ಬಾಗಿಲಲ್ಲಿಯೇ ಹುರಿಯಾಳುತನ ಮಾಡಲಿಲ್ಲ. ಒಳಗೆ ಅಡಿಯಿಟ್ಟ. ಅದೇ ಆಳು ಅಲ್ಲಿಯೇ ಇದ್ದ. "ಬಾಬುಗಳು

ಒಳಗಿದ್ದಾರೆ. ಅವರನ್ನು ಕಾಣುವುದುಂಟಲ್ಲವೇ ನಿನಗೆ?" ಎಂದು ಸುರೇಂದ್ರನನ್ನು ಕೇಳಿದ.

" ಅಹುದು. "

" ಬರ್ರಿ ಹಾಗಾದರೆ. "

ಆಗ ಸುರೇಂದ್ರನಿಗೆ ಬಲು ಬಿರಿ ಬಂತು. ಅವನು ಆಳನ್ನು ಹಿಂಬಾಲಿಸಿ ನಡೆದ. ಒಳ್ಳೆಯ ಭವ್ಯವಾದ ಜಹಾಗೀರುದಾರರ ವಾಡೆ. ಉಪ್ಪರಿಗೆಯ ಮೇಲೆ ಉಪ್ಪರಿಗೆ. ಸೋಪಾನ ಸಂಗಮುರವರಿ ಕಲ್ಲಿನದು. ಎಲ್ಲವೂ ಇಂದಿನ ರೀತಿಯಲ್ಲಿ ಅಣಿಯಾಗಿದ್ದಿತು. ದೊಡ್ಡ ದೊಡ್ಡ ಕನ್ನಡಿಗಳು, ಒಳ್ಳೊಳ್ಳೆಯ ಚಿತ್ರಗಳು, ಭಾವಚಿತ್ರಗಳು ಇವುಗಳಿಂದ ಗೋಡೆಗಳು ಅಲಂಕೃತವಾಗಿದ್ದವು. ಮತ್ತೊಬ್ಬನನ್ನಾಗಿದ್ದರೆ ಇವೆಲ್ಲ ಬೆರಗುಗೊಳಿಸಬಹುದಾಗಿತ್ತು. ಆದರೆ ಸುರೇಂದ್ರನಿಗೆ ಇವೇನೂ ಅಪರೂಪದವಲ್ಲ. ಅವರ ಅಪ್ಪನ ಮನೆ ಬಡವರ ಹುಲ್ಲು ಗುಡಿಸಲಲ್ಲ. ಅವನೊಬ್ಬ ದರಿದ್ರ ತಂದೆಯ ಬಳಿ ಬೆಳೆದ ಮಗನಲ್ಲ. ಬಾಬುಗಳೊಡನೆ ಹೇಗೆ ಮಾತನಾಡಬೇಕು, ಏನು ಹೇಳಬೇಕು, ಅವರು ಏನು ಕೇಳಬಹುದು, ಅದಕ್ಕೆ ನಾನೇನು ಉತ್ತರ ಕೊಡಬೇಕು— ಎಂಬ ವಿಚಾರದಲ್ಲಿಯೆ ಅವನ ಮನಸು ಮುಳುಗಿಹೋಗಿತ್ತು.

ಆದರೆ ಅಷ್ಟೆಲ್ಲವನ್ನೂ ವಿಚಾರ ಮಾಡುವುದಕ್ಕೆ ಸಮಯವೆಷ್ಟಿತ್ತು? ಮನೆಯ ಯಜಮಾನ ಎದುರಿನಲ್ಲಿಯೆ ಕುಳಿತಿದ್ದರು. ತ್ವರಿತದಲ್ಲಿಯೇ ಅವರಿಂದ "ಏಕೆ ಬಂದದ್ದು?" ಎಂಬ ಪ್ರಶ್ನೆ ಬಂದೇಬಂದಿತು.

ಈಗ ಮೂರು ದಿನಗಳಿಂದಲೂ ಸುರೇಂದ್ರ ವಿಚಾರ ಮಾಡಿಕೊಂಡುದು ಇದೇ. ಈ ಕ್ಷಣದಲ್ಲಿ ಅವನಿಗೆ ಅದೊಂದೂ ಹೊಳೆಯಲಿಲ್ಲ. " ನಾನು— ನಾನು— " ಎಂದ.

ಬ್ರಜನಾಥ ಲಾಹಿರಿಯವರು ಪೂರ್ವ ಬಂಗಾಲದ ಜಮೀನುದಾರರು. ಅವರ ತಲೆಗೂದಲು ನಾಲ್ಕಾರು ಹಣ್ಣಾಗಿವೆ. ಪ್ರಕೃತಿಯ ವಿಕಾರದಿಂದಲ್ಲ, ಪ್ರಾಯವಶದಿಂದ. ಅವರು ಮನಸಿನಿಂದ ದೊಡ್ಡವರು. ಎಷ್ಟೋ ವಿಷಯಗಳನ್ನು ಕಂಡುಂಡ ಮನುಷ್ಯರು. ಅವರಿಗೆ

ಕೂಡಲೆ ಎಲ್ಲವೂ ಹೊಳೆಯಿತು. “ ಅಹುದು ತಮ್ಮಾ, ನಿನಗೆ ಏನು ಬೇಕಾಗಿದೆ ? ” ಎಂದು ಕೇಳಿದರು.

“ ಒಂದು.... ”

“ ಏನದು ಹೇಳು.” ಬ್ರಜಬಾಬುಗಳು ತುಸ ಮೆಲುನಗೆ ನಕ್ಕು ಕೇಳಿದರು: “ ಕೆಲಸವೊ ? ನಾವು ಕೆಲಸ ಕೊಡಬಲ್ಲೆವೆಂದು ನಿನಗೆ ಹೇಳಿದವರು ಯಾರು ? ”

“ ಹೀಗೇ ಬೀದಿಯಲ್ಲಿ ಒಬ್ಬ ಸಿಕ್ಕಿದ್ದ; ಆತನನ್ನು ವಿಚಾರಿಸಿದೆ; ಆತ ನಿಮ್ಮ ವಿಷಯ— ”

“ ಒಳ್ಳೆಯದು. ನಿಮ್ಮ ಊರು ಯಾವುದು ? ”

“ ಪಶ್ಚಿಮ ಬಂಗಾಲ— ”

“ ನಿಮ್ಮ ಮನೆಯೊಳಗೆ ಯಾರು ಯಾರು ಇದ್ದೀರಿ ? ”

ಸುರೇಂದ್ರ ಎಲ್ಲವನ್ನು ಶ್ರುತಪಡಿಸಿದ.

“ ನಿಮ್ಮ ತಂದೆ ಏನು ಮಾಡುತ್ತಾರೆ ? ”

ಈ ವಾತಾವರಣದ ಪರಿಣಾಮವಾಗಿ ಸುರೇಂದ್ರನಲ್ಲಿ ಬದಲಾವಣೆ ಯಾಗಿತ್ತು. ಒಂದೊಂದೇ ಸಂಗತಿಯನ್ನು ಹೊಂದಿಕೆ ಮಾಡಿಕೊಂಡು ಹೇಳತೊಡಗಿದ.

“ ಸಾಧಾರಣವಾದ ಒಂದು ನೌಕರಿ. ”

“ ಅದರಿಂದ ಕುಟುಂಬ ಸಾಗುವುದಕ್ಕೆ ಸಾಕಷ್ಟು ದೊರೆಯುವು ದಿಲ್ಲವೆಂದು, ನೀನು ಏನಾದರೂ ಗಳಿಸಬೇಕೆನ್ನುವೆ, ಅಲ್ಲವೆ? ”

“ ಅಹುದು. ”

“ ಇಲ್ಲಿ ನೀನು ಇರುವುದೆಲ್ಲಿ? ”

“ ಇಂತಲ್ಲಿಯೇ ಎಂತ ಒಂದು ಗೊತ್ತಿನ ಇಂಬು ಇಲ್ಲ. ಅಲ್ಲೆ, ಇಲ್ಲೆ— ”

ಬ್ರಜಲಾಹಿರಿಗಳಲ್ಲಿ ಕನಿಕರ ಕೊನರಿತು. ಸುರೇಂದ್ರನನ್ನು ತಮ್ಮ ಬಳಿ ಕುಳ್ಳಿರಲು ಹೇಳಿದರು. “ ನೀನಿನ್ನೂ ಚಿಕ್ಕವನಾಗಿದ್ದೀ. ಈ ವಯಸಿ

ನಲ್ಲಿ ಮನೆಬಿಟ್ಟು ಬಂದು ತೊಳಲಾಡುತ್ತಿದ್ದೀ. ಅದಕ್ಕಾಗಿ ನನಗೆ ಮರುಕ ಹುಟ್ಟುತ್ತಿದೆ. ಆದರೆ ಸ್ವಂತ ನಮ್ಮಲ್ಲೇನೂ ಕೆಲಸವಿಲ್ಲ. ಆಗಲಿ, ನಿನ್ನ ಉಪಜೀವನ ಹೇಗಾದರೂ ಸಾಗುವಂತೆ ಒಂದು ಉಪಾಯ ಮಾಡಬಂದೀತು," ಎಂದು ಅವರು ನುಡಿದರು.

"ಒಳ್ಳೆಯದು" ಎಂದೆನ್ನುತ್ತ ಸುರೇಂದ್ರನಾಥ ಅಲ್ಲಿಂದ ಹೊರಡಲನುವಾದ. ಬ್ರಜಬಾಬುಗಳೇ ಅವನನ್ನು ತಿರುಗಿ ಕರೆದು ಕೇಳಿದರು: "ನನ್ನಿಂದ ಕೇಳಿಕೊಳ್ಳಬೇಕಾದುದು ಮತ್ತೇನೂ ಇಲ್ಲವೇ ನಿನಗೆ?"

"ಇಲ್ಲ."

"ಇಷ್ಟು ಮಾಡಿದಷ್ಟಕ್ಕೆ ನಿನ್ನ ಕೆಲಸವಾದಂತಾಯಿತೊ ? ಅದು ಯಾವ ಉಪಾಯ, ಏನು ಹಾದಿ ಇದಾವುದನ್ನೂ ವಿಚಾರಿಸಿ ಅರಿತುಕೊಳ್ಳಬೇಕೆಂದು ನಿನಗೆ ಎನಿಸುವುದಿಲ್ಲವೆ?"

ಸುರೇಂದ್ರ ಕುಂಠಿತನಾಗಿ ನಿಂತುಕೊಂಡ.

"ಈಗ ಎಲ್ಲಿಗೆ ಹೋಗುವೆ?" ಎಂದು ಬ್ರಜಬಾಬುಗಳು ನಕ್ಕು ಕೇಳಿದರು.

"ಯಾವುದಾದರೂ ಅಂಗಡಿಗೆ."

"ಅಷ್ಟಾದರೆ ತೀರಿತೆ?"

"ದಿನಾಲು ನಡೆಯುವುದೇ ಅಷ್ಟು."

"ನೀನು ಓದಿಕೊಂಡಿರುವೆಯಾ?"

"ಹೂಂ. ಓದಿಕೊಂಡಿದ್ದೇನೆ."

"ನಮ್ಮ ಹುಡುಗರಿಗೆ ಓದು ಹೇಳಬಲ್ಲೆಯೊ?"

ಸುರೇಂದ್ರ ಒಳ್ಳೆಯ ಪರುಷದಿಂದ ಉತ್ತರವಿತ್ತ: "ಹೂಂ."

ಬ್ರಜಬಾಬುಗಳಿಗೆ ನಗು ಬಂದಿತು. ದುಗುಡ, ದುಮ್ಮಾನ, ಬಡತನ ಕೂಡಿರುವವಲ್ಲದೆ, ಮೇಲೆ ಮೆದುಳೂ ಸ್ವಲ್ಪ ಸ್ಥಳ ತಪ್ಪಿದೆ, ಎಂದು ಎನಿಸಿತವರಿಗೆ. ಅಲ್ಲದಿದ್ದರೆ ಏನು ? ಯಾರಿಗೆ ಹೇಳಿಕೊಡುವುದು, ಏನು ಹೇಳಿಕೊಡುವುದು, ಇದಾವುದನ್ನೂ ಗೊತ್ತುಮಾಡಿ

ಕೊಳ್ಳದೆ ಆನಂದಿಸುವುದೆಂದರೆ ಹುಚ್ಚಿನ ಕುರುಹೇ ಸೈ. “ ಹುಡುಗ ಒಂದು ವೇಳೆ ಬಿ. ಎ. ತರಗತಿಯಲ್ಲಿ ಓದುತ್ತಿದ್ದಾನೆ ಎಂದು ಇಟ್ಟುಕೊ; ಅವನಿಗೆ ನೀನು ಹೇಗೆ ಕಲಿಸೀ ?

ಸುರೇಂದ್ರ ತುಸ ಗಂಭೀರ ಮುದ್ರೆಯಿಂದ ವಿಚಾರಮಾಡಿದ. “ ಅಹುದು. ಒಂದು ರೀತಿಯಿಂದ ಅದೂ ನಿಜವೇ ” ಎಂದ.

ಬಾಬುಗಳು ಅದಕ್ಕೆ ಏನೂ ಮಾತಾಡಲಿಲ್ಲ. ಆಳನ್ನು ಕರೆದು, “ ಇಲ್ಲಿಯೇ ಇರುವುದಕ್ಕೆ ಇವರಿಗಾಗಿ ಒಂದು ಕೋಣೆಯನ್ನು ಅಣಿ ಮಾಡಿ ಕೊಡು. ಇವರ ಜಳಕಕ್ಕೆ ಊಟಕ್ಕೆ ಏರ್ಪಾಟಾಗುವಂತೆ ಒಳಗೆ ತಿಳಿಸು, ” ಎಂದು ವಿಧಿಸಿ, ಸುರೇಂದ್ರನ ಕಡೆ ಹೊರಳಿ “ ನೀನು ಅನಕ ನಮ್ಮ ಮನೆಯಲ್ಲಿ ಇದ್ದುಬಿಡು. ಏನಾದರೂ ಕೆಲಸ ಸಿಕ್ಕುವ ವರೆಗೆ ಸಂಕೋಚವಿಲ್ಲದೆ ನಮ್ಮಲ್ಲಿಯೆ ಇರಬಹುದು ” ಎಂದರು.

ಮಧ್ಯಾಹ್ನದ ಊಟವಾದ ಬಳಿಕ ಬ್ರಜಬಾಬುಗಳು ತಮ್ಮ ಹಿರಿಯ ಮಗಳು ಮಾಧವಿಯನ್ನು ಕರೆದು “ ತಂಗೀ, ದುಃಖಿಯಾದ ಜೀವಿಯೊಂದನ್ನು ಮನೆಯೊಳಗೆ ಇಟ್ಟುಕೊಂಡಿದ್ದೇನೆ ” ಎಂದು ತಿಳಿಸಿದರು.

“ ಯಾರು ಅಣ್ಣ? ”

“ ಯಾವನೊ ದುಃಖಿ. ಇದಕ್ಕೂ ಹೆಚ್ಚು ನನಗೂ ತಿಳಿಯಲಿಲ್ಲ. ಕಲಿತವ ಎಂದು ತೋರುತ್ತದೆ. ನಿಮ್ಮಣ್ಣನಿಗೆ ಕಲಿಸಬೇಕಾಗುವುದೆಂದು ಹೇಳಿದಾಗ ಅವ ಒಪ್ಪಿಕೊಂಡ. ಬಿ. ಎ. ದೊಳಗಿನ ಹುಡುಗನಿಗೆ ಕಲಿಸಲು ಸಾಹಸಪಡುವನು, ಮತ್ತೆ ನಿನ್ನ ಚಿಕ್ಕ ತಂಗಿಗಾದರೂ ಖಂಡಿತ ಕಲಿಸಬಲ್ಲ. ಪ್ರಮಿಲೆಗೆ ಕಲಿಸುವುದಕ್ಕೆ ಇವನನ್ನೆ ಇಡಬೇಕೆಂದು ವಿಚಾರ. ”

ಮಾಧವಿ ಬೇಡವೆನ್ನಲಿಲ್ಲ. ಸಂಜೆಗೆ ಬ್ರಜಬಾಬುಗಳು ಸುರೇಂದ್ರನನ್ನು ಕರೆಸಿ ಈ ವಿಷಯ ತಿಳಿಸಿದರು. ಮರುದಿನದಿಂದ ಅವನು ಪ್ರಮಿಲೆಗೆ ಹೇಳಿಕೊಡಲು ತೊಡಗಿದ.

ಪ್ರಮೀಲೆ ಏಳೆಂಟು ವರ್ಷದವಳು. ಬೋಧೋದಯ ( ಬಾಲ ಬೋಧೆ ) ಕಲಿಯುತ್ತಿದ್ದಳು. ಮಾಧವಕ್ಕನ ಹತ್ತಿರವೇ ಆ ಪುಸ್ತಕದ ಕೋಳಿಯ ಕತೆಯ ಪಾಠದವರೆಗೆ ಅವಳ ಅಭ್ಯಾಸವಾಗಿತ್ತು. ಅವಳು ಹಾಳಿ-ಹೊತ್ತಗೆ, ಹಲಗೆ-ಬಳಪ, ಚಿತ್ರ-ಗೊಂಬೆ, ಚೆಂಡು- ಬತ್ತಾಸು ಮೊದಲಾದ ಸಾಹಿತ್ಯಗಳನ್ನು ಹತ್ತಿರ ಇಟ್ಟುಕೊಂಡು ತನ್ನ ಹೊಸ ಉಪಾಧ್ಯಾಯರ ಬಳಿ ಕಲಿಯಲು ಬಂದು ಕುಳಿತಳು.

" ಡು ನಾಟ್ ಮುವ್, ಚಲಿಸಬೇಡ " ಎಂದ ಸುರೇಂದ್ರ.

ಪ್ರಮೀಲೆ ರೂ ಹಾಕುತ್ತ ಕುಳಿತಳು: " ಡು ನಾಟ್ ಮುವ್, ಚಲಿಸಬೇಡ. "

ಇತ್ತ ಸುರೇಂದ್ರ ತನ್ನ ತಂದ್ರಿಯೊಳಗೆ ತಾ ಕುಳಿತ. ಅವಳ ಹಲಗೆ ಬಳಪಗಳನ್ನು ತನ್ನ ಕಡೆ ಎಳೆದುಕೊಂಡು ಲೆಕ್ಕ ಬಿಡಿಸಲು ಮೊದಲು ಮಾಡಿದ. ಸಮಸ್ಯೆಯ ಮೇಲೆ ಸಮಸ್ಯೆಗಳು ಬಿಡತೊಡಗಿದವು. ಗಡಿಯಾಳದೊಳಗೆ ಏಳರಿಂದ ಎಂಟಾಯಿತು; ಎಂಟರಿಂದ ಒಂಬತ್ತಾಯಿತು. ಪ್ರಮೀಲೆ ಆ ಮಗ್ಗುಲೊಮ್ಮೆ ಈ ಮಗ್ಗುಲೊಮ್ಮೆ ಹೊರಳುತ್ತ, ಚಿತ್ರದ ಪುಸ್ತಕದ ಪುಟಗಳನ್ನು ಮಗುಚಿಹಾಕುತ್ತ, ಬಾಯಲ್ಲಿ ಬತ್ತಾಸನ್ನು ತುರುಕುತ್ತ, ಕೋಳಿಪಾಠದ ಸಂಭಾಷಣೆಯ ಮೇಲೆ ಮಸಿಯ ಗೊಣ್ಣೆಯನ್ನು ಕೆಡವುತ್ತ, ' ಡೂ ನಾಟ್ ಮುವ್, ಚಲಿಸಬೇಡ ' ಎಂದು ರೂ ಹಾಕುತ್ತಲಿದ್ದಳು.

" ಮಾಸ್ತರ್, ಮನೆಗೆ ಹೋಗಲಿ? " ಎಂದು ಕೇಳಿದಳು.

" ಹೂಂ ಹೋಗು " ಎಂದ ಉಪಾಧ್ಯಾಯ.

ಸುರೇಂದ್ರನ ಮುಂಜಾನೆಯ ಹೊತ್ತು ಈ ತೆರನಾಗಿ ಕಳೆಯುವುದು. ಮಧ್ಯಾಹ್ನ ಬೇರೆ ಕಾರ್ಯಕ್ರಮ.

' ಇವನಿಗೇನಾದರೊಂದು ಕೆಲಸದ ಏರ್ಪಾಡು ಮಾಡಬೇಕೆ'ಂದು ಲಾಹಿರಿಯವರು ಒಂದಿಬ್ಬರು ಸದ್ಗೃಹಸ್ಥರಿಗೆ ಓಲೆ ಬರೆದು ಕೊಟ್ಟಿದ್ದರು. ಸುರೇಂದ್ರನಾಥ ಆ ಓಲೆಗಳನ್ನು ಜೊಕ್ಕಣದಲ್ಲಿಟ್ಟುಕೊಂಡು ಹೊರಡುತ್ತಿದ್ದ. ಅವರ ಮನೆಯನ್ನು ಹುಡುಕಿಕೊಂಡು ಹೋಗಿ ಬಾಗಿಲ

ಬಳಿ ನಿಂದಿರುತ್ತಿದ್ದ. ಮನೆ ಎಷ್ಟು ದೊಡ್ಡದು, ಅದಕ್ಕೆ ಕಿಡಕಿಗಳು ಎಷ್ಟು, ಉಪ್ಪರಿಗೆ ಒಂದೋ ಏನೆರಡೊ, ಮುಂದುಗಡೆ ದೀಪದ ಕಂಬ ವುಂಟೊ ಹೇಗೆ ಮೊದಲಾದವನ್ನು ನೋಡಿಕೊಂಡು ಸಂಜೆಯ ಹೊತ್ತಿಗೆ ತಿರುಗಿ ಬಾಬುಗಳ ಮನೆ ಸೇರುತ್ತಿದ್ದ.

ಅವನು ಬರುವಾಗ ಕೆಲವು ಪುಸ್ತಕಗಳನ್ನು ತಂದಿದ್ದ. ಇಲ್ಲಿ ಬಂದ ಮೇಲೂ ಎಷ್ಟೋ ಕೊಂಡುಕೊಂಡಿದ್ದ. ಮಿಂಚು ದೀವಿಗೆಯ ಬೆಳಕಿನಲ್ಲಿ ಅವನ್ನೋದುತ್ತ ಕುಳಿತುಬಿಡುತ್ತಿದ್ದ. ಬ್ರಜಬಾಬುಗಳೇನಾದರೂ ಕೆಲಸದ ಬಗೆಗೆ ಕೇಳಿದರೆ, ಸುಮ್ಮನಾದರೂ ಇರುತ್ತಿದ್ದ, ಇಲ್ಲವೆ ಆ ಗೃಹಸ್ಥರು ಸಿಕ್ಕಲಿಲ್ಲ ಎಂದಾದರೂ ಹೇಳುತ್ತಿದ್ದ.

## ೩. ಅಕ್ಕಾಜಿಯ ಮನೆಯಲ್ಲಿ ಸುರೇಂದ್ರ

ಬ್ರಜಬಾಬುಗಳು ಹೆಂಡತಿಯನ್ನು ಕಳೆದುಕೊಂಡು ಇಂದಿಗೆ ನಾಲ್ಕು ವರ್ಷಗಳಾಗಿದ್ದವು. ಇಳಿಹರಯದಲ್ಲಿ ಈ ದುಃಖ ಹೆಚ್ಚಿನದಾಗಿಯೇ ಎನಿಸುವುದು. ಅದಿರಲಿ— ಅವರ ಅಕ್ಕರತೆಯ ಮಗಳು ಮಾಧವೀದೇವಿಗೆ ಹದಿನಾರರಲ್ಲಿಯೇ ವೈಧವ್ಯ. ಈ ಒಂದು ಘಟನೆಯಿಂದಲೇ ಬಾಬುಗಳ ಮೈಯೊಳಗಿನ ನೆತ್ತರು ಅರ್ಧ ಆಟ್ಟಿಸಿತ್ತು. ಬಹಳ ಹುಡುಕಾಡಿ, ಬಹಳ ವಿಚಾರ ಮಾಡಿ ವರ ಗೊತ್ತುಮಾಡಿ ಮಗಳ ಮದುವೆ ಮಾಡಿದ್ದರು. ಹಣಕ್ಕೆ ಕೊರತೆ ಇರಲಿಲ್ಲವಾದುದರಿಂದ ವೆಚ್ಚಕ್ಕೆ ಹಿಂದು ಮುಂದು ನೋಡಿರಲಿಲ್ಲ. ಹುಡುಗನಿಗೆ ಆಸ್ತಿಪಾಸ್ತಿ ಅಸ್ತಿಯೋ ನಾಸ್ತಿಯೋ ಎಂಬುದನ್ನು ನೋಡಿರಲಿಲ್ಲ. ಹುಡುಗ ಕಲಿತವ, ಚೆಲುವ, ಒಳ್ಳೆಯವ ಇದ್ದರಾಯಿತೆಂದು ನೋಡಿ ವರ ಆರಿಸಿದ್ದರು.

ಮಾಧವಿಯ ಮದುವೆಯಾದುದು ಅವಳ ಹನ್ನೊಂದನೆಯ ವಯಸಿನಲ್ಲಿ. ಗಂಡನ ಮನೆಯೊಳಗೆ ಆಕೆ ಇದ್ದುದು ಮೂರು ವರುಷ. ಅಷ್ಟರೊಳಗೇ ಅನುರಾಗ, ಸ್ನೇಹ, ಪ್ರೇಮ, ಯತ್ನ— ಏನಾಗುವು

ದೆಲ್ಲ ಆಗಿಹೋಯಿತು. ಜೋಗೇಂದ್ರನಾಥ ಬೇರೆ ಬದುಕಲಿಲ್ಲ. ಮಾಧವಿಯ ಈ ಜನ್ಮದ ಸೊಗಸೆಲ್ಲವನ್ನೂ ಮಣ್ಣುಗೂಡಿಸಿ, ಮಾವನ ಎದೆಗೆ ವಜ್ರದ ಏಟು ಹಾಕಿ ಜೋಗೇಂದ್ರ ಕೊನೆಯ ಪಯಣ ಬೆಳೆಸಿದ. ಗಂಡ ಸಾಯುವ ಮುಂದೆ ಮಾಧವಿ ಗೋಳಾಡಿದಳು. ಆಗ ಜೋಗೇಂದ್ರ ಅವಳಿಗೆ ಮೆಲುದನಿಯಲ್ಲಿ ಹೀಗೆ ಹೇಳಿದ: " ನನಗೆ ದುಃಖವಾಗುವುದು, ಮಾಧವೀ, ನಿನ್ನನ್ನು ಬಿಟ್ಟು ಹೋಗುತ್ತಿದ್ದೇನಲ್ಲ ಎಂದಲ್ಲ. ನೀನು ಸಾಯುವ ತನಕ ಗೋಳಾಡಬೇಕಾಯಿತಲ್ಲಾ ಎಂದು ನನಗೆ ತಳಮಳವಾಗುತ್ತಿದೆ. ನಿನಗಾಗಿ ಏನೂ ಮಾಡಲಾಗಲಿಲ್ಲ ನನ್ನಿಂದ---!"

ಜೋಗೇಂದ್ರನ ಶೀರ್ಣ ಹೃದಯದ ಮೇಲೆ ಕಂಬನಿಗಳು ತಟತಟ ತಟಕಿದವು. ಮಾಧವಿ ಅವನ್ನೊರಸಿದಳು. " ನಿಮ್ಮಡಿಯ ಬಳಿ ಬಂದಾಗಿನಿಂದ ಮಾಡಲಾಗುವುದನ್ನೆಲ್ಲಾ ಮಾಡಿಯೆ ಇರುವಿರಿ " ಎಂದಳು.

" ಮಾಧವೀ, ನನ್ನ ಸುಖಕ್ಕಾಗಿ ನೀನು ಸಮರ್ಪಿಸಿರುವ ಆಯುಷ್ಯವನ್ನು ಇನ್ನು ಎಲ್ಲರ ಸುಖಕ್ಕಾಗಿ ಬಳಸು. ಬಾಡಿ ಬಸವಳಿದ ಮುಖಗಳು ಕಣ್ಣಿಗೆ ಬಿದ್ದರೆ, ಅವುಗಳನ್ನರಳಿಸುವುದಕ್ಕೆ ಯತ್ನಿಸು. ಮಾಧವೀ, ಮತ್ತೇನನ್ನು ಹೇಳಲಿ ? " ಎಂದು ನುಡಿದ ಜೋಗೇಂದ್ರ. ಅವನ ಕಣ್ಣುಗಳಿಂದ ಕಣ್ಣೀರ ತೊರೆ ತೊರೆಯಿತು. ಮತ್ತೊರಸಿದಳು ಮಾಧವಿ. " ಚೆಲೋ ಹಾದಿಯಿಂದ ನಡೆದರೆ ನಿನ್ನ ಪುಣ್ಯ ನಿನಗೆ ನೆರವಾಗುವುದು " ಎಂದನಾತ.

ಮಾಧವಿಯಲ್ಲಿ ಪರಿವರ್ತನೆಯಾದುದು ಆಕ್ಷಣದಲ್ಲಿಯೆ. ಕ್ರೋಧ, ದ್ವೇಷ, ಹಿಂಸೆ—ಆಕೆಯಲ್ಲಿ ತುಸ ರಜ ಇದ್ದುವು---ಎಲ್ಲಾ ಆಕೆಯ ಗಂಡನ ಚಿತೆಯೊಳಗೆ ಉರಿದು ಬೂದಿಯಾಗಿಹೋದವು. ಆದರೆ ಈ ಜೀವನದಲ್ಲಿ ಅದೆಷ್ಟು ಆಸೆಗಳು, ಅದೆಷ್ಟು ಅಪೇಕ್ಷೆಗಳು! ವೈಧವ್ಯ ಬಂತೆಂದು ಅವೆಲ್ಲ ಎಲ್ಲಿ ಹೋಗುವವು? ಮಾಧವಿಗೆ ಅಂತಹ ಹೊತ್ತಿನಲ್ಲಿ ಗಂಡನ ನೆನಪಾಗುವುದು. ಅವನಲ್ಲದೆ ಮತ್ತೆ ಯಾರು ? ಯಾರಿಗಾಗಿ ಮುಂದಿಗೆ ತೊಂದರೆ ಕೊಡಬೇಕು? ಯಾರಿಗಾಗಿ ಮುಂದಿಯನ್ನು ಗೋಳಿ

ಡಿಸಬೇಕು? ಆದರೆ ಅವಳ ವೃತ್ತಿ ಎಂದೂ ನೀಚವಾಗಿರಲಿಲ್ಲ. ದೊಡ್ಡ ಸದ್ಗೃಹಸ್ಥರ ಮಗಳು! ಅವಳ ಯಾವ ಇಚ್ಛೆಯೂ ಯಾವ ಅಪೇಕ್ಷೆಯೂ ಅತೃಪ್ತವಾಗಿರಲಿಲ್ಲ. ಪರಪೀಡೆ, ದ್ವೇಷ ಇವನ್ನೆಂದೂ ಕಲಿತೇ ಇಲ್ಲ.

ಅವಳ ಹೃದಯದಲ್ಲಿ ಹಲವು ಹೂಗಳರಳುತ್ತಿದ್ದವು. ಮುಂಚೆ ಆ ಹೂಗಳ ಮಾಲೆಯನ್ನು ಕಟ್ಟಿ ತನ್ನ ನಲ್ಲನ ಕೊರಳಿಗೆ ತೊಡಿಸುತ್ತಿದ್ದಳು. ಈಗ ನಲ್ಲನಿಲ್ಲವೆಂದು ಆ ಹೂಬಳ್ಳಿಯನ್ನು ಆಕೆ ಕಿತ್ತು ಬಿಸುಟಲಿಲ್ಲ. ಅದೀಗಲೂ ಹೂಬಿಡುತ್ತಿದ್ದಿತು. ಇಷ್ಟೆ, ಅವು ನೆಲದ ಮೇಲೆ ಉದುರಿಹೋಗುತ್ತಿದ್ದವು. ಈಗವಳು ಅವುಗಳ ಮಾಲೆಯನ್ನು ಪೋಣಿಸುತ್ತಿರಲಿಲ್ಲವಾದರೂ ಅವುಗಳ ಗುಚ್ಛವಮಾಡಿ ಕರುಣೆಯಿಂದ ದೀನ-ದುಃಖಿಗಳಿಗೆ ನೀಡುತ್ತಿದ್ದಳು. ಇಲ್ಲದವರಿಗೆ ಕೊಡುತ್ತಿದ್ದಳು. ಅವಳಲ್ಲಿ ಕೃಪಣತೆ ಒಂದಿಷ್ಟೂ ಇರಲಿಲ್ಲ; ಖಿನ್ನತೆ ಅವಳ ಮೋರೆಯ ಮೇಲೆ ಹಣಿಕುತ್ತಿಲ್ಲ.

ಬ್ರಜಬಾಬುಗಳು ಗೃಹಿಣಿ ಹೊರಟು ಹೋದಮೇಲೆ ಅವರ ಸಂಸಾರದಲ್ಲಿ ಏಕಸೂತ್ರತೆ ತಪ್ಪಿಹೋಯಿತು. ಎಲ್ಲರೂ ತಮ್ಮ ಮಟ್ಟಿಗೆ ತಾವು ನೋಡಿಕೊಳ್ಳುವರು. ಯಾರು ಯಾರನ್ನೂ ಕೇಳುತ್ತಿರಲಿಲ್ಲ. ಯಾರು ಯಾರಕಡೆಗೂ ನೋಡುತ್ತಿರಲಿಲ್ಲ. ಎಲ್ಲ ಆಳು ಹೋಳುಗಳೂ ತಮ್ಮ ತಮ್ಮ ಪರಿಯಿಂದ ದುಃಖಿಗಳು; ಅವರವರು ತಮ್ಮ ತಮ್ಮ ಮಟ್ಟಿನ ಧನಿಯ ಕೆಲಸ ಮಾಡುತ್ತಿದ್ದರು; ಒಂದು ದೊಡ್ಡ ಅನ್ನಛತ್ರದಲ್ಲಿಯಂತೆ ಅಡಿಗೆಯವಳು ಅಡಿಗೆ ಅಡುತ್ತಿದ್ದಳು. ಯಾರು ಬೇಕು ಅವರು ಬಂದು ತಮ್ಮ ತಟ್ಟೆ ಇಟ್ಟುಕೊಂಡು ಕುಳಿತುಕೊಳ್ಳುತ್ತಿದ್ದರು. ಯಾರಿಗೆ ಊಟ ಹೋಗುತ್ತಿತ್ತು, ಯಾರಿಗೆ ಹೋಗುತ್ತಿದ್ದಿಲ್ಲ.

ಭಾದ್ರಪದ ಮಾಸದಲ್ಲಿಯ ಗಂಗಾಪ್ರವಾಹದಂತೆ ಸಂಪೂರ್ಣವಾದ ತನ್ನ ಸೌಂದರ್ಯ- ಸ್ನೇಹ- ಮಮತೆಗಳಿಂದ ತುಂಬಿದ ಮಾಧವಿ ತಂದೆಯ ಮನೆಗೆ ಬಂದಳು. ಆ ದಿನದಿಂದ ಬ್ರಜಬಾಬುಗಳ ಮನೆ ವಸಂತವೇ ಬಂದಿಳಿಯಿತೋ ಎಂಬಂತೆ ಕಾಣತೊಡಗಿತು.

ಎಲ್ಲರ ಬಾಯಲ್ಲಿಯೂ ‘ ಅಕ್ಕಾಜಿ, ’ ‘ ಮಾಧವಿ ’ ಎಂಬ ನುಡಿಗಳೇ ನಲಿದಾಡತೊಡಗಿದವು. ಮನೆಯೊಳಗಿನೆಲ್ಲರಿಗೂ ದಿನದಲ್ಲಿ ಒಮ್ಮೆಯಾದರೂ ಅಕ್ಕಾಜಿಯ ದರ್ಶನವಾಗಬೇಕು ಎಂದೆನಿಸುವುದು— ಸಾಕಿದ ನಾಯಿ ಮೊದಲಾಗಿ. ಆ ಕುಟುಂಬದ ಪ್ರತಿಯೊಂದು ವ್ಯಕ್ತಿಗೂ ಅವಳೇ ಸ್ನೇಹಮಯಿ, ಸರ್ವಮಯಿ ಆಗಿಬಿಟ್ಟಳು. ಮನೆಯ ಯಜಮಾನ ಸಹಿತವಾಗಿ ಕರಣಿಕರು, ಆಳುಗಳು, ತೊತ್ತುಗಳು ಎಲ್ಲರ ನಾಲಗೆಯ ಮೇಲೂ ಅಕ್ಕನ ವಿಷಯವೇ. ಎಲ್ಲರ ಜೀವನಕ್ಕೂ ಅಡಿಗಟ್ಟು ಅವಳು; ಯಾವ ಕಾರಣದಿಂದಲೇ ಆಗಲಿ, ಅಕ್ಕನೇ ತಮ್ಮ ಆಧಾರ ಎನಿಸುವುದು ಎಲ್ಲರಿಗೆ.

ಸ್ವರ್ಗದಲ್ಲಿರುವ ಕಲ್ಪವೃಕ್ಷವನ್ನು ಯಾರೂ ಕಂಡವರಿಲ್ಲ; ಅದು ಕಾಣಿಸುವುದೋ ಇಲ್ಲವೋ ಎಂದು ಹೇಳಲಿಕ್ಕೆ ಆಗದು. ಆ ಬಗ್ಗೆ ಏನೊಂದೂ ಹೇಳಲಿಕ್ಕೆ ಬರುವಂತಿಲ್ಲ ! ಆದರೆ ಬ್ರಿಜಬಾಬುಗಳ ಸಂಸಾರದೊಳಗಿನ ಜನಕ್ಕೆ ಇದೊಂದು ಕಲ್ಪಲತೆಯೇ ದೊರೆತಿದ್ದಿತೆಂಬುದು ನಿಶ್ಚಯಕ್ಕೂ ನಿಜ. ಈ ಬಯಕೆಬಳ್ಳಿಯ ಇದಿರಿನಲ್ಲಿ ಕೈಯೊಡ್ಡಿದವರು ಹಿಂದಿರುಗುವುದು ನಗುಮೊಗದಿಂದಲೇ.

ಈ ಪರಿವಾರಕ್ಕೆ ಸೇರಿದನಂತರ ಸುರೇಂದ್ರನ ದಿನಚರ್ಯೆಗೊಂದು ಹೊಸರೂಪು ಬಂತು. ಎಲ್ಲರ ಭಾರವೂ ಅಕ್ಕಾಜಿಯ ಮೇಲೆ ಸುರೇಂದ್ರನೂ ಅವರನ್ನೇ ಅನುಕರಿಸಿದ. ಆದರೂ ಇತರರ ಭಾವನೆಗಿಂತ ಅವನ ಭಾವನೆ ಬೇರೆಯಾಗಿದ್ದಿತು. ಅಕ್ಕಾಜಿ ಎಂಬುದೊಂದು ಸಜೀವ ಪದಾರ್ಥ ಮನೆಯಲ್ಲಿದೆ, ಅದು ಎಲ್ಲರ ಬಗೆಗೂ ಚೋಕೆಪಡುತ್ತಿದೆ, ಅದು ಏನೆಲ್ಲ ಹೊರೆಯನ್ನು ಹೊರುತ್ತಿದೆ, ಯಾರಿಗೇನು ಬೇಕೋ ಅದನ್ನೆಲ್ಲ ಅದು ಒದಗಿಸುತ್ತಿದೆ— ಎಂದೇನೋ ಆತನ ಕಲ್ಪನೆ. ಕಲಕತ್ತೆಯ ರಾಯಬೀದಿಗಳಲ್ಲಿ ಪಿರಿಪಿರಿ ತಿರುಗುತ್ತಿದ್ದಾಗ ತನಗೋಸುಗ ವಿಚಾರ ಮಾಡುವುದನ್ನು ಆತ ಕಲಿತಿದ್ದ. ಇಲ್ಲಿಗೆ ಬಂದ ಬಳಿಕ ಮರೆತುಹೋಯಿತು ಅದೆಲ್ಲ. ತನ್ನ ಹಿಂದಿನ ಸ್ಥಿತಿ ಏನು, ಮುಂದಿನ ಗತಿ ಏನು ಎಂಬ ವಿಚಾರವೂ ಆತನಿಗಿರಲಿಲ್ಲ.

ಅಂಗಿಗಳು, ಪಾದರಕ್ಷೆಗಳು, ಕೊಡೆ ಮೊದಲಾದ ಆವಶ್ಯಕ ವಸ್ತುಗಳು ಅವನಿಗೆ ತುಂಬಾ ಇದ್ದವು. ಯಃಕಶ್ಚಿತ್ ಕರವಸ್ತ್ರದವರೆಗೆಲ್ಲವನ್ನೂ ಅವನಿಗಾಗಿ ಯಾರೋ ಅಣಿಮಾಡಿಟ್ಟಿರುತ್ತಿದ್ದರು. ಮೊದಮೊದಲು ಇವೆಲ್ಲಾ ಹೇಗೆ ಬರುತ್ತವೆಂದು ಕುತೂಹಲವುಂಟಾಗುತ್ತಿತ್ತು ' ಅಕ್ಕಾಜಿ ಕಳಿಸಿದ್ದಾಳೆ ' ಎಂದು ಉತ್ತರ ಬರುತ್ತಿತ್ತು. ನೀರು ಕುಡಿಯುವ ತಾಲಿಯು ತನಕವೂ ಅಕ್ಕಾಜಿಯ ವ್ಯವಸ್ಥೆಯುಂಟೆಂದು ಅವನಿಗೆ ತಿಳಿಯಿತು.

ಲೆಕ್ಕ ಮಾಡುತ್ತ ಕುಳಿತಿದ್ದಾಗ ಒಂದು ದಿನ ಅವನಿಗೆ ಕಂಪಾಸು ಬೇಕಾಯಿತು. ಏನು, ಯಾವಾಗ ಎಂಬ ತಾರತಮ್ಯವಿಲ್ಲದೆ, " ಪ್ರಮಿಲಾ, ಅಕ್ಕಾಜಿಯ ಕೈಲೆ ಒಂದು ಕಂಪಾಸು ಇಸಗೊಂಡು ಬಾ, ನೋಡೋಣ " ಎಂದು ಶಿಷ್ಯೆಗೆ ಹೇಳಿದ.

ಅಕ್ಕಾಜಿಗೆ ಎಂದೂ ಕಂಪಾಸಿನ ಕೆಲಸ ಇರುತ್ತಿರಲಿಲ್ಲ; ಅವಳ ಹತ್ತಿರ ಅದು ಇರಲಿಲ್ಲ. ಆದರೂ ಅವಳು ಕೂಡಲೆ ಒಂದಾಳನ್ನು ಪೇಟೆಗೆ ಅಟ್ಟಿ ಅದನ್ನು ತರಿಸಿದಳು. ಸಂಜೆಯು ಮುಂದೆ ತಿರುಗಾಡಿ ಬಂದ ಬಳಿಕ ಸುರೇಂದ್ರ ತನ್ನ ಮೇಜಿನ ಮೇಲೆ ತಾನು ಬಯಸಿದ ಒಡವೆಯನ್ನು ಕಂಡ. ಮರುದಿನ ಮುಂಜಾನೆ ಪ್ರಮೀಲೆ ಬಂದಾಗ " ಅದನ್ನು ನಿನ್ನೆ ಅಕ್ಕ ಕಳಿಸಿದಳು " ಎಂದು ತಿಳಿಸಿದಳು.

ಈ ತೆರದ ಬೇಡಿಕೆ ದಿನಾಲು ನಡೆಯಿತು. ಒಮ್ಮೊಮ್ಮೆ ಸಿಕ್ಕಲಾರದ ವಸ್ತುಗಳನ್ನು ಸುರೇಂದ್ರ ಬೇಡುತ್ತಿದ್ದ. ಆದರೂ ಅಕ್ಕಾಜಿ ಅವನ್ನು ಇದ್ದಲ್ಲಿಂದ ಹುಡುಕಿಸಿ ತರಿಸಿಕೊಡುತ್ತಿದ್ದಳು. ಅಲ್ಲದೆ ' ಸಿಕ್ಕಲಾರದು ' ಎಂದು ಎಂದೂ ಹೇಳುತ್ತಿರಲಿಲ್ಲ.

ಒಮ್ಮೊಮ್ಮೆ ಅವನು " ಅಕ್ಕಾಜಿಯ ಕೈಲೆ ಒಂದುನಾಲ್ಕು ಹಳೆಯ ಬಟ್ಟೆಗಳನ್ನು ತೆಗೆದುಕೊಂಡು ಬಾಮ್ಮ ತಂಗೀ. ತಿರುಕರಿಗ ಕೊಡಬೇಕಾಗಿದೆ, " ಎಂದು ಪ್ರಮೀಲೆಗೆ ಹೇಳುತ್ತಿದ್ದ. ಹಳೆಯದು ಹೊಸದು ಎಂದು ನೋಡಿ ಕೊಡುವುದಕ್ಕೆ ಅಕ್ಕಾಜಿಗೆ ಪುರಸತ್ತು ಯಾವಾಗಲೂ ಇರುತ್ತಿತ್ತೆಂದಲ್ಲ. ಅವಳು ತನ್ನ ಹತ್ತಿರವಿದ್ದ ಬಟ್ಟೆ

ಗಳನ್ನೇ ಕೊಟ್ಟು ಕಳಿಸುವಳು. ಕಿಡಕಿಯಿಂದ ಹೊರಕ್ಕೆ ನೋಡಲಾಗಿ, ನಾಲ್ಕಾರು ತಿರುಪೆಯವರು ಅತ್ಯಂತ ಕನಿಕರ ಹುಟ್ಟಿಸುವ ಸ್ವರದಲ್ಲಿ ಹಾಡುತ್ತ ಹೋಗುತ್ತಿರುವುದೂ ಆ ಬಟ್ಟೆಗಳು ಅವರಿಗೇ ದೊರೆತಿರುವುದೂ ಅವಳಿಗೆ ಗೋಚರಿಸುತ್ತಿತ್ತು.

ಸುರೇಂದ್ರನಿಂದ ಇಂತಹ ಕಿರುಕುಳ ತೊಂದರೆಗಳನ್ನು ಮಾಧವಿ ದಿನಾಲು ಸೋಸಬೇಕಾಗುತ್ತಿತ್ತು. ಬರುಬರುತ್ತ ಅದು ಆಕೆಗೆ ರೂಢಿಯಾಗಿ ಮೈಯುಂಡಿತು. ನಮ್ಮ ಕುಟುಂಬದೊಳಗೆ ಈ ಹೊಸ ಪ್ರಾಣಿ ಬಂದುಸೇರಿ ದಿನಕ್ಕೊಂದು ಪರಿಯ ಕಾಟ--ತಾನು ಕೆಲಸದಲ್ಲಿದ್ದಾಗ ಕೂಡ—ಕಾಡುತ್ತಿದ್ದಾನೆ ಎಂಬ ಭಾವನೆ ಆಕೆಯ ಮನಸಿನಲ್ಲಿಯೂ ಬರುತ್ತಿರಲಿಲ್ಲ.

ಇತ್ತಿತ್ತಲಾಗಿಯಂತೂ ಈ ಹೊಸಪ್ರಾಣಿಗಾಗಿ ಮಾಧವಿ ಬಹಳ ಶ್ರಮ ಸಹಿಸಬೇಕಾಗುತ್ತಿತ್ತು. ಸುರೇಂದ್ರ ಒಂದು ನಾದಿನವ, ಮರೆಗುಳಿ ಎಂಬುದು ಮಾಧವಿಗೆ ಮೊದಲು ತಿಳಿದುಬರಲಿಲ್ಲ. ಮುಂಜಾನೆ ಚಹ ತಣ್ಣಗಾದರೂ ಕುಡಿದಿರಲಿಕ್ಕೇ ಇಲ್ಲ; ನೀರು ಕುಡಿಯಬೇಕೆಂದು ಕೈಯಲ್ಲಿ ಎತ್ತಿದ ವಾಟಗ ಹಾಗೆಯೇ ಇರುತ್ತಿದ್ದಿತು; ಊಟಕ್ಕೆ ಕುಳಿತಾಗ ಎಲೆಯಲ್ಲಿ ಬಡಿಸಿದ ಪದಾರ್ಥಗಳ ಕಡೆಗೆ ಅವನ ಲಕ್ಷ್ಯವೇ ಇರುತಿರಲಿಲ್ಲ; ಒಮ್ಮೊಮ್ಮೆ ಬದಿಗೆ ಸರಿಸಿಡುತ್ತಿದ್ದ, ಒಮ್ಮೊಮ್ಮೆ ತೆಗೆದು ತೆಗೆದು ಕೆಳಗೆ ಹಾಕುತ್ತಿದ್ದ. ಈ ಪ್ರಾಣಿಗೆ ಯಾವುದೂ ಸೇರುವುದಿಲ್ಲವೋ ಏನೋ ಎಂಬ ಹಾಗೆ ಮಾಡುತ್ತಿದ್ದ. ಉಪಾಧ್ಯರು ಪೆದ್ದಂಭಟ್ಟರು, ಯಾರ ಕಡೆಗೂ ನೋಡುವುದಿಲ್ಲ, ಯಾರನ್ನೂ ಮಾತಾಡಿಸುವುದಿಲ್ಲ, ಅವರಿಗೆ ಏನೂ ತಿಳಿಯುವುದಿಲ್ಲ; ಯಾವಾಗಲೂ ತಮ್ಮ ಪುಸ್ತಕದೊಳಗೆ ಮೋರೆ ಇಟ್ಟುಕೊಂಡು ಕುಳಿತಿರುತ್ತಾರೆ;—ಎಂದು ಮನೆಯ ಆಳುಹೋಳುಗಳು ಆಡಿಕೊಳ್ಳುತ್ತಿದ್ದರು.

ಕೆಲಸವೆಲ್ಲಿಯಾದರೂ ಸಿಗುವ ಹಾಗಿದೆಯೋ ಹೇಗೆ, ಎಂದು ಬ್ರಜಬಾಬುಗಳು ಸುರೇಂದ್ರನನ್ನು ನಡುನಡುವೆ ಕೇಳುತ್ತಿದ್ದರು. ಸುಳ್ಳೊಂದು ಸೊಟ್ಟರೊಂದು ಹೇಳಿ ಆತ ಪಾರಾಗುತ್ತಿದ್ದ. ತಂದೆಯಿಂದ

ಮಾಧವಿಗೆ ಅವನ ಸಂಗತಿಯೆಲ್ಲ ತಿಳಿಯುತ್ತಿತ್ತು. ಉಪಾಧ್ಯಾಯ ಮಹಾಶಯರು ತಮ್ಮ ಕೆಲಸದ ಸಲುವಾಗಿ ಸ್ವಲ್ಪ ಕೂಡ ಯತ್ನಿಸುವು ದಿಲ್ಲವೆಂದು ಆಕೆ ಅರಿತುಕೊಂಡಿದ್ದಳು; ಕೆಲಸದ ಇಚ್ಛೆಯೇ ಇಲ್ಲ ಎಂಬು ದನ್ನೂಹಿಸಿದ್ದಳು; ಏನೋ ದೈವಯೋಗದಿಂದ ದೂರೆತುದರೊಳಗೇ ಅವರು ಸಂತೃಪ್ತರಾಗಿರುವರೆಂದು ಭಾವಿಸಿದ್ದಳು.

ಹತ್ತು ಹೊಡೆಯಿತೆಂದರೆ ಅಕ್ಕಾಜಿ ಸ್ನಾನ-ಭೋಜನದ ಸೂಚನೆ ಕೊಡುತ್ತಿದ್ದಳು. ಬಹಳ ಮಟ್ಟಿಗೆ, ಸುರೇಂದ್ರನ ಊಟವಾಗದಿದ್ದು ದನ್ನು ಅವಳೇ ತಿಳಿದು ಪ್ರಮೀಲೆಯಿಂದ ಕರೆ ಕಳುಹುತ್ತಿದ್ದಳು. ಅಪ ರಾತ್ರಿಯವರೆಗೂ ಅವನು ಓದುತ್ತ ಕುಳಿತಿದ್ದನೆಂದರೆ ಆಳುಗಳು ಬಂದು ಮಿಂಚು ದೀವಿಗೆಯ ಬಿರಡಿಯನ್ನು ಒತ್ತಿಹೋಗುತ್ತಿದ್ದರು. ಬಾಯಿಂದ ಹೇಳಿಹೋದರೆ ಅವನೇನು ಕೇಳುತ್ತಿರಲಿಲ್ಲ.

ಒಂದು ದಿನ, " ಪ್ರಮೀಲೆಯ ಹಾಗೆಯೆ ಪ್ರಮೀಲೆಯ ಉಪಾ ಧ್ಯಾಯ " ಎಂದು ತಂದೆಯ ಮುಂದೆ ನಗುನಗುತ್ತ ನುಡಿದಳು ಮಾಧವಿ.

" ಏಕೆ, ಏನು ? " ಎಂದು ತಂದೆ ಕೇಳಿದರು.

" ಇಬ್ಬರೂ ಹಸುಳೆಗಳು. ಪ್ರಮೀಲೆಗೆ ತಿಳಿಯುವುದೆ— ಯಾವಾಗ ಏನು ತಿನಬೇಕು, ಯಾವಾಗ ಮಲಗಬೇಕು, ಯಾವಾಗ ಏನು ಮಾಡುವುದು ತಕ್ಕದ್ದು ಎಂಬುದು ? ಹಾಗೆಯೆ ಅವಳ ಉಪಾ ಧ್ಯಾಯರು ! ತಮ್ಮದೇ ತಮಗೆ ಯಾವುದೂ ತಿಳಿಯುವುದಿಲ್ಲ. ಹೊತ್ತಿ ಲ್ಲದ ಹೊತ್ತಿನೊಳಗೆ ಇಲ್ಲದುದೊಂದು ಬೇಡಿಕೊಂಡು ಕೂಡುತ್ತಾರೆ. ತಿಳಿವಳಿಕೆಯಿದ್ದಿದ್ದರೆ ಹೀಗೇನೂ ಆಗುತ್ತಿದ್ದಿಲ್ಲ. "

ಅವಳು ಹೇಳಿದ ಮಾತುಗಳು ಬ್ರಜಬಾಬುಗಳ ಲಕ್ಷ್ಯಕ್ಕೆ ಬರ ಲಿಲ್ಲ. ಅವರು ಅವಳ ಮೋರೆಯನ್ನು ನೋಡುತ್ತಿದ್ದರು.

ಮಾಧವಿ ನಸುನಕ್ಕು ನುಡಿದಳು, " ನಮ್ಮ ಹುಡುಗಿಗೂ ತಿಳಿಯುತ್ತದೆ, ಯಾವಾಗ ಯಾವುದು ಲೇಸು ಎಂಬುದು. "

" ಏನು, ಏನೆಂದೆ ? ಅವರಿಗೆ ತಿಳಿಯುವುದಿಲ್ಲವೆ ? " ಎಂದರು ಬ್ರಜಬಾಬುಗಳು ಬೆರಗಿನಿಂದ.

" ಇಲ್ಲದಿದ್ದರೆ ಹೀಗೇನು ಅವರು ಅಲ್ಲದಾಗ ಸಲ್ಲದಾಗ ಉಪದ್ರವ ಕೊಡುತ್ತಿದ್ದಿಲ್ಲ. "

" ನಿಜವಾಗಿ ? "

" ಹೌದು, ನಿಜವಾಗಿಯೂ. "

" ನನಗೆನಿಸುತ್ತದೆ, ಹುಡುಗ ಅರೆಹುಚ್ಚನೋ ಏನೋ. " ಬ್ರಜಬಾಬುಗಳು ನಕ್ಕು ನುಡಿದರು.

" ಹುಚ್ಚನಲ್ಲ; ಅವನೊಬ್ಬ ದೊಡ್ಡ ಮನೆತನದವನಿರಬೇಕೆಂದು ನನಗೆ ತೋರುತ್ತಿದೆ. "

ಬ್ರಜಬಾಬುಗಳು ವಿಸ್ಮಯದಿಂದ " ಅದೇತರ ಮೇಲಿಂದ ? " ಎಂದರು.

ಏತರಮೇಲಿಂದ ಎಂಬುದು ಮಾಧವಿಗೂ ಗೊತ್ತಿರಲಿಲ್ಲ. ಅವಳ ಕಲ್ಪನೆ ಹಾಗಾಗಿದ್ದಿತು. ಸುರೇಂದ್ರನಿಗೆ ತನಗೆ ತಾನೇ ಒಂದು ಕೆಲಸವನ್ನೂ ಮಾಡಲು ಬರುತ್ತಿರಲಿಲ್ಲ. ಎರಡನೆಯವರು ಮಾಡಿಕೊಟ್ಟರೆ ಆಗಬೇಕು, ಇಲ್ಲದಿದ್ದರೆ ಇಲ್ಲ. ಆತನ ಈ ಪರಾಧೀನವೃತ್ತಿ ಮಾಧವಿಯ ಗಮನಕ್ಕೆ ಬಂದಿತ್ತು. ಇದು ಅವನಿಗೆ ಮೊದಲಿನಿಂದಲೂ ಬಿದ್ದ ರೂಢಿಯಾಗಿರಬೇಕೆಂದು ಆಕೆಗೆ ಎನಿಸುತ್ತಿತ್ತು. ಅದರೊಳಗೂ ಒಂದು ವಿಶೇಷವೆಂದರೆ ಆತನ ತಿನ್ನುಣ್ಣುವ ತರಹ. ಮಾಧವಿಗೆ ಹೆಚ್ಚಿನ ಚಮತ್ಕಾರವಾಗಿ ಕಂಡುದು ಅದು. ಯಾವ ತಿಂಡಿ ತಿನಿಸಿನ ಕಡೆಗೂ ಅವನ ಮನಸು ಹರಿಯುತ್ತಿರಲಿಲ್ಲ. ತಿಂದ ಯಾವ ಪದಾರ್ಥವನ್ನೂ ಅವನು ಹರ್ಷಪಟ್ಟು ತಿನ್ನುತ್ತಿರಲಿಲ್ಲ. ಒಟ್ಟಿನಲ್ಲಿ, ಯಾವ ಪದಾರ್ಥದ ಮೇಲೆಯೂ ಆಸೆಯಿಲ್ಲದ ಮುಪ್ಪಿಗೊಪ್ಪುವ ವೈರಾಗ್ಯ, ಚಿಕ್ಕಮಕ್ಕಳಲ್ಲಿರುವಂತಹ ಸರಳತೆ, ಹುಚ್ಚರಲ್ಲಿರುವಂತಹ ನೈರಾಶ್ಯ, ತಿನ್ನಲಿಕ್ಕೆ ಕೊಟ್ಟರೆ ತಿನ್ನುವುದು, ಇಲ್ಲದಿದ್ದರೆ ಹಾಗೆಯೇ ಇದ್ದುಬಿಡುವುದು— ಈ ಎಲ್ಲ ಅವನ ನಡೆವಳಿಕೆಗಳು ಅವಳಿಗೆ ಒಡಪಗಳಾಗಿದ್ದವು. ಅದಕ್ಕಾಗಿಯೇ

ಈ ಗುರುತಿಲ್ಲದ ಉಪಾಧ್ಯಾಯ ಮಹಾಶಯನನ್ನು ಮಾಧವಿ ಕನಿಕರದ ನೋಟದಿಂದ ನೋಡುತ್ತಿದ್ದಳು. ಸುರೇಂದ್ರನೇನಾದರೂ ಮರ್ಯಾದೆಯನ್ನು ಮೀರಿ ನಡೆಯುತ್ತಿದ್ದರೆ, ಆ ಮರ್ಯಾದೆಯನ್ನು ಕಾಯುವುದೇನೂ ಕಾರಣವಿಲ್ಲವೆಂದು ಅವನಿಗೆ ಎನಿಸುತ್ತಿದ್ದುದಕ್ಕಲ್ಲ; ಯಾವುದಕ್ಕಾದರೂ ಮರ್ಯಾದೆಯುಂಟೆಂಬುದೇ ಅವನಿಗೆ ತಿಳಿಯದು. ತನಗೆ ಏನಾದರೂ ಬೇಕಾಯಿತೆಂದರೆ ತೀರಿತು, ಅಕಾಲವೇನು ಸಕಾಲವೇನು, ಅವನು ಮಾಧವಕ್ಕನ ಎದುರಿನಲ್ಲಿ ತಟ್ಟನೆ ಹೋಗಿ ನಿಲ್ಲುವನು. ಮಾಧವಿ ಮುಖ ಹಿಂದಿರುಗಿಸಿ ನಗುವಳು. 'ಈ ಹುಡುಗನೊಬ್ಬ ಹಸುಳೆಯಂತೆ ನಿತಾಂತ ಸರಳ' ಎಂದು ಮನಸಿನೊಳಗೇ ಎಂದುಕೊಳ್ಳುವಳು.

## ೪. ಅಕ್ಕಾಜಿಯಿಲ್ಲದ ಸುರೇಂದ್ರ

ಮನೋರಮೆ ಮಾಧವಿಯ ಚಿಕ್ಕಂದಿನ ಗೆಳತಿ. ಬಹಳ ದಿನಗಳಿಂದ ಮಾಧವಿಯಿಂದ ಓಲೆಯೇ ಇಲ್ಲದುದಕ್ಕೆ ಅವಳು ಮುನಿಸುಗೊಂಡಿದ್ದಳು. ಆದುದರಿಂದ ಮಾಧವಿಗೆ ಇಂದು ಎರಡು ಪ್ರಹರದ ವೇಳೆಯಲ್ಲಿ ಅಂತೂ ಇಂತೂ ಬಿಡುವು ಮಾಡಿಕೊಂಡು ಗೆಳತಿಗೆ ಓಲೆ ಬರೆಯಲು ಕುಳಿತಿದ್ದಳು. ಅಷ್ಟೊತ್ತಿಗೆ ಬಂದಳು ಪ್ರಮೀಲೆ—
"ಅಕ್ಕಾಜೀ...."

ಮಾಧವಿ ಮೋರೆಯನ್ನು ಮೇಲೆತ್ತಿ ಕೇಳಿದಳು: "ಏನೇ?"

"ಉಪಾಧ್ಯಾಯರ ಕನ್ನಡಕ ಕಳೆದುಹೋಗಿದೆಯಂತೆ— ಒಂದು ತಂದು ಕೊಡಲ್ಲ."

ಮಾಧವಿಗೆ ನಗು ಬಂದಿತು. "ನಿಮ್ಮ ಉಪಾಧ್ಯಾಯರನ್ನು ಕೇಳು: ನಾವೇನು ಇಲ್ಲಿ ಕನ್ನಡಕದ ಅಂಗಡಿಗಿಂಗಡಿ ಇಟ್ಟಿರುವೆವೇ?" ಎಂದು ನುಡಿದಳು.

ಪ್ರಮೀಲೆ ಹಾಗೆ ಹೇಳುವುದಕ್ಕೆ ಓಡಿದಳು.

ಮಾಧವಿ ಅವಳನ್ನು ಕೂಗಿ ಕರೆದು "ಎಲ್ಲಿ ಹೊರಟೆ?" ಎಂದಳು.

" ನೀನು ಹೇಳಿದುದನ್ನು ಹೇಳಲಿಕ್ಕೆ. "

" ಹಾಗಾದರೆ ಸರಕಾರಬಾಬುವನ್ನು ಕರೆದುಕೊಂಡು ಬಾ, ಹೋಗು. "

ಪ್ರಮೀಲೆ ಸರಕಾರನನ್ನು ಕರೆತಂದಳು. ಮಾಧವಿ ಅವನಿಗೆ ಹೇಳಿದಳು: " ನಿಮ್ಮ ಉಪಾಧ್ಯಾಯರು ಕನ್ನಡಕ ಕಳೆದುಕೊಂಡಿದ್ದಾರಂತೆ. ಇನ್ನೊಂದು ಚಲೋದು ಕೊಂಡುಕೊಂಡು ತಂದುಕೊಡಪ್ಪ. "

ಸರಕಾರ ಹೊರಟು ಹೋದ. ಮಾಧವಿ ಮನೋರಮೆಗೆ ಬರೆದ ಪತ್ರದಲ್ಲಿ ಕೊನೆಗೆ ನಾಲ್ಕು ಮಾತುಗಳನ್ನು ಬರೆದಳು:

' ಪ್ರಮೀಲೆಗೆ ಕಲಿಸುವುದಕ್ಕೆ ತಂದೆ ಒಬ್ಬ ಉಪಾಧ್ಯಾಯರನ್ನು ಇಟ್ಟಿದ್ದಾರೆ. ಆ ಗೃಹಸ್ಥ ಒಬ್ಬ ತರುಣ ಎಂದರೂ ಆದೀತು, ಒಂದು ಸಣ್ಣ ಮಗು ಎಂದರೂ ಆದೀತು. ಈ ಪ್ರಾಣಿ ಈವರೆಗೆಂದೂ ಮನೆಯ ಹೊಸ್ತಿಲ ದಾಟಿ ಹೊರಗೆ ಹೊರಟೇ ಇಲ್ಲ ಎಂದು ನನ್ನೆಣಿಕೆ. ಜಗತ್ತಿನ ಅರಿವೇ ಇಲ್ಲ ಆತನಿಗೆ. ಅವರ ಕಡೆ ಅಲಕ್ಷ್ಯಮಾಡಿದರೆ ಇಲ್ಲವೆ ಅವರ ಯೋಗಕ್ಷೇಮ ವಿಚಾರಿಸದಿದ್ದರೆ ಅವರ ರಥ ಒಂದು ತಸುವೂ ಸಾಗುವದಿಲ್ಲ. ನನ್ನರ್ಧ ದಿನ ಅವರ ಸಲುವಾಗಿಯೇ ಹೋಗುತ್ತಿದೆ. ನಿನಗೆ ಪತ್ರವನ್ನು ಯಾವಾಗ ಬರೆಯಲಿ ? ಬೇಗನೆಯೆ ನೀನು ಈಕಡೆಗೆ ಬಂದರೆ ಈ ಅಕರ್ಮಣ್ಯವ್ಯಕ್ತಿಯನ್ನು ಕಾಣಬಹುದು. ಈತರದ ನಿರೀಹ, ಅನನ್ಯಮನಸ್ಕ ಮನುಷ್ಯರನ್ನು ನಿನ್ನ ಜನ್ಮದೊಳಗೇ ನೋಡಿರಲಾರೆ. ತಿನ್ನುವುದಕ್ಕೆ ಕೊಟ್ಟರೆ ತಿನ್ನುತ್ತಾರೆ, ಕೊಡದಿದ್ದರೆ ಉಪವಾಸ ಇದ್ದುಬಿಡುತ್ತಾರೆ. ಹೊತ್ತು ಮುಳುಗಿ ಮತ್ತೆ ಬೆಳಗಾಗಲೊಲ್ಲದೇಕೆ, ತಾನು ಉಪವಾಸವಿದ್ದೇನೆಂದು ಅವರಿಗೆ ಗೊತ್ತಾದರೆ ಕೇಳು. ಒಂದೇ ಒಂದು ದಿನವಾದರೂ ತಮ್ಮದನ್ನು ತಾವು ಮಾಡಿಕೊಳ್ಳಲಾರರು ಇಂತಹ ಮನುಷ್ಯರದು ಈ ಪ್ರಪಂಚದೊಳಗೆ ಸಾಗುವುದಾದರೂ ಹೇಗೆ ಎಂದು ನನಗೆ ವಿಚಾರಕ್ಕಿಟ್ಟುಕೊಳ್ಳುತ್ತಿದೆ. "

' ಅವರ ತಂದೆ ತಾಯಿ ಇದ್ದಾರೆಂದು ನಾನು ಕೇಳಿದ್ದೇನೆ. ಅವರೆಲ್ಲೋ ಕಲ್ಲಿನಂತೆ ಕಠೋರವಾದ ಕರುಳಿನ ಮಂದಿಯಿರಬೇಕೆಂದು

ನನಗೆನಿಸುತ್ತಿದೆ. ನಿಜವಾಗಿಯೂ ಇಂತಹ ಮನುಷ್ಯರನ್ನು ಅಲಕ್ಷಿಸಿ ಬಿಟ್ಟರೆ ನಡೆಯದು.'

ಮನೋರಮೆ ಕೂಡಲೇ ಉತ್ತರ ಬರೆದಳು.

'ನಿನ್ನ ಓಲೆಯೊಳಗಿನ ಒಟ್ಟು ಸಂಗತಿಗಳಿಂದ, ನೀನು ಮನೆಯೊಳಗೊಂದು ಮಂಗವನ್ನು ಸಾಕಿದ್ದೀ, ನೀನದರ ಸೀತಾದೇವಿಯಾಗಿದ್ದೀ, ಎಂದು ಕಾಣುವುದು. ಆದರೆ ನಿನಗೆ ಹೇಳಿರುತ್ತೇನೆ—ಜೋಕೆ ಅಂ!

ನಿನ್ನ
ಮನೋರಮೆ'

ಪತ್ರವನ್ನೋದಿ ಮಾಧವಿಯ ಮುಖ ಸ್ವಲ್ಪ ಮ್ಲಾನವಾಯಿತು. ಅವಳು ಉತ್ತರದಲ್ಲಿ ಹೀಗೆ ಬರೆದಳು: 'ಬೆಂಕಿ ಹಚ್ಚಿತು ನಿನ್ನ ಮೋರೆಗೆ. ಯಾರಿಗೆ ಏನು ನಗಚೇಟಿಕೆ ಮಾಡಬೇಕೆಂಬುದೇ ತಿಳಿಯುವುದಿಲ್ಲ ನಿನಗೆ.'

ಮಾಧವಿ ತಂಗಿಯನ್ನು ಕೇಳಿದಳು: "ಪ್ರಮೀಲೆ, ನಿಮ್ಮ ಉಪಾಧ್ಯಾಯರ ಕನ್ನಡಕ ಹೇಗಿದೆ?"

ಪ್ರಮೀಲೆಯೆಂದಳು; "ಚೆಲೋ."

"ಅದು ನಿನಗೆ ಹೇಗೆ ತಿಳಿಯಿತು?"

"ಮಾಸ್ತರರು ಅದನ್ನು ಕಣ್ಣಿಗೆ ಇಟ್ಟುಕೊಂಡು ಚೆನ್ನಾಗಿ ಓದುತ್ತ ಕುಳಿತಿರುತ್ತಾರೆ. ಅದರಿಂದ ತಿಳಿದುಕೊಂಡೆ."

"ಅವರು ತಮ್ಮ ಬಾಯಿಯಿಂದ ಏನೂ ಹೇಳಲಿಲ್ಲ" ಎಂದು ಮತ್ತೆ ಮಾಧವಿ ವಿಚಾರಿಸಿದಳು.

"ಉಂಹೂ, ಇಲ್ಲ."

"ಒಂದು ಮಾತೂ ಇಲ್ಲವೆ? ಕಾಣಿಸುತ್ತದೆ, ಕಾಣಿಸುವುದಿಲ್ಲ, ವಿಕಾರ ಕಾಣುತ್ತದೆ, ಯಾವುದೂ ಇಲ್ಲ!" ಎಂದು ಮತ್ತೆ ಕೆದರಿದಳು ಮಾಧವಿ.

" ಇಲ್ಲ, ಏನೂ ಇಲ್ಲ. "

ಯಾವಾಗಲೂ ಅರಳಿರುವ ಮಾಧವಿಯ ಮುಖ ಕಿಂಚಿತ್ ಮ್ಲಾನ ವಾಯಿತು. ಆದರೂ ಆಕೆ ನಕ್ಕು ಹೇಳಿದಳು: " ನಿಮ್ಮ ಉಪಾಧ್ಯಾಯ ರಿಗೆ ಹೇಳು: ಮತ್ತೆ ಇದನ್ನೂ ಕಳೆದುಕೊಳ್ಳಬೇಡಿರಿ ಎಂದು.."

" ಹೂಂ, ಹೇಳುತ್ತೇನೆ. "

" ಛೀ ಹೋಗೇ ಹುಚ್ಚಿ. ಹೀಗೆ ಯಾರಾದರೂ ಹೇಳುತ್ತಾ ರೇನೆ ? ಅವರು ಮನಸಿನೊಳಗೆ ಏನು ಎಂದುಕೊಂಡಾರು ? "

" ಹಾಗಾದರೆ ಏನೂ ಹೇಳಬೇಡವೇ ? "

" ಬೇಡ. "

ಮಾಧವಿಯ ಹಿರಿಯಣ್ಣ ಶಿವಚಂದ್ರ. ಒಂದಾನೊಂದು ದಿನ ಮಾಧವಿ ಅವನನ್ನು ಕೇಳಿದಳು: " ನಿನಗೆ ಗೊತ್ತಿದೆಯೇನೋ, ಹಗಲಿ ರುಳೂ ಅದೇನು ಓದುತ್ತಿರುತ್ತಾರೆ ಪ್ರಮೀಲೆಯ ಉಪಾಧ್ಯಾಯರು ? "

ಶಿವಚಂದ್ರ ಬಿ. ಎ. ದೊಳಗಿದ್ದ. ಪ್ರಮೀಲೆಯ ಉಪಾಧ್ಯಾಯ ನೆಂದರೆ ಶಿಕ್ಷಕ ವರ್ಗದೊಳಗಿನ ಯಾವನೋ ಒಬ್ಬ ಕ್ಷುಲ್ಲಕ ಮನುಷ್ಯ. ಉಪೇಕ್ಷೆಯ ಸ್ವರದಲ್ಲಿ ಶಿವಚಂದ್ರ ಉತ್ತರವಿತ್ತ: " ಕತೆ ಕಾದಂಬರಿ ಓದುತ್ತಿರಬಹುದು, ಮತ್ತೇನು ಓದುವುದು ? "

ಈ ಮಾತು ಮಾಧವಿಗೆ ನಿಜವೆಂದು ತೋರಲಿಲ್ಲ. ಅವಳು ಮೆಲ್ಲಗೆ ಪ್ರಮೀಲೆಯಿಂದ ಸುರೇಂದ್ರನ ಒಂದು ಪುಸ್ತಕವನ್ನು ತರಿಸಿ ಅಣ್ಣನ ಕೈಯಲ್ಲಿ ಕೊಟ್ಟಳು. " ಕತೆ ಕಾದಂಬರಿ ಇದ್ದಂತೆ ಕಾಣುವುದಿಲ್ಲ, ನೋಡು " ಎಂದಳು.

ಶಿವಚಂದ್ರ ಅದನ್ನು ಅಥದಿಂದ ಇತಿಯವರೆಗೆ ನೋಡಿದ. ಅವ ನಿಗೆ ಏನೂ ತಿಳಿಯಲಿಲ್ಲ. ಅದೊಂದು ಗಣಿತ ವಿಷಯಕವಾದ ಪುಸ್ತಕ ಎಂದು ಮಾತ್ರ ಗೊತ್ತಾಯಿತು ಅವನಿಗೆ. ಆದರೆ ಅದರಲ್ಲಿಯ ಒಂದು ಅಕ್ಷರವೂ ಅವನಿಗೆ ಗೊತ್ತಾಗುವಂತಿರಲಿಲ್ಲ. ಆದರೂ ತಂಗಿಯ ಇದಿ ರಿನಲ್ಲಿ ತನ್ನ ಕುಂದನ್ನು ತೋರ್ಪಡಿಸಲು ಅವನು ನಾಚಿದ. "ಇದು

ಗಣಿತದ ಪುಸ್ತಕ. ಸಾಲೆಗಳಲ್ಲಿ ಕೆಳಗಿನ ತರಗತಿಗಳಿಗೆ ಹಚ್ಚಿರುತ್ತಾರೆ" ಎಂದ.

ಮಾಧವಿ ಸ್ವಲ್ಪ ವಿಷಣ್ಣಳಾಗಿ ನುಡಿದಳು: "ಕಾಲೇಜಿನಲ್ಲಿಯ ಪುಸ್ತಕವಲ್ಲವೇನು ?"

ಹೆಮ್ಮೆಯುಡುಗಿ ಶಿವಚಂದ್ರ "ಇಲ್ಲ. ಹಾಗೇನಿಲ್ಲ" ಎಂದ. ತಥಾಪಿ, ಆವೊತ್ತಿನಿಂದ ಅವನು ತಾನಾಗಿ ಅವನ ಎದುರಿಗೆ ಹೋಗುತ್ತಿರಲಿಲ್ಲ. ಒಳಗೊಳಗೇ ಅಂಜಿಕೆ ಅವನಿಗೆ. ಯಾರು ಬಲ್ಲರು: ಅವನೇನಾದರೂ ಕೇಳುಗೀಳೋಣ, ತನ್ನ ಹೂರಣ ಹೊರಬೀಳೋಣ,—ಮರುದಿನ ಬೆಳಗಿನಿಂದಲೇ ತಂದೆಯ ಅಪ್ಪಣೆಯಿಂದ ಪ್ರಮೀಲೆಯ ಸಂಗಡ ತಾನೂ ಟಿಪ್ಪಣಿ ಪುಸ್ತಕ ಸೀಸಕಡ್ಡಿಗಳನ್ನು ತೆಗೆದುಕೊಂಡು ಅದೇ ಉಪಾಧ್ಯಾಯರ ಮುಂದೆ ಕೂಡಬೇಕಾಗಿ ಬಂದರೆ !

ಕೆಲದಿನಗಳ ತರುವಾಯ ಒಂದು ದಿನ. "ಅಪ್ಪಾ, ಕೆಲದಿನ ನಾನು ಕಾಶಿಗೆ ಹೋಗಬೇಕೆಂದು ಮಾಡಿದ್ದೇನೆ" ಎಂದು ಮಾಧವಿ ತಂದೆಯನ್ನು ವಿಚಾರಿಸಿದಳು.

ಬ್ರಜಬಾಬುಗಳು ಯೋಚನೆಗೊಳಗಾದರು. "ಅದೇಕೆ ? ನೀನು ಕಾಶಿಗೆ ಹೋದರೆ ಈ ಪ್ರಪಂಚದ ಗತಿಯೇನು ?" ಎಂದರು.

"ಈಗೇನೋ ನಾನಿದ್ದೇನೆ. ಆದರೆ ಎಂದಾದರೂ ಹೋಗಲೇಬೇಕು ತಾನೆ," ಎಂದು ಮಾಧವಿ ನಕ್ಕಳು. ತಂದೆಯ ಕಣ್ಣಲ್ಲಿ ನೀರು ಬಂದುದನ್ನು ಕಂಡಳು. ತಾನು ಹೀಗೆನ್ನಬಾರದಾಗಿತ್ತು ಎಂದುಕೊಂಡಳು. ಆಡಿದುದನ್ನು ಸರಿಪಡಿಸಿಕೊಳ್ಳುವುದಕ್ಕಾಗಿ "ತುಸದಿನಗಳ ಮಟ್ಟಿಗೆ ಹೋಗಬೇಕು ಎನ್ನುತ್ತೇನೆ" ಎಂದಳು ಮಾಧವಿ.

"ನೀನು ಹೋಗಬಹುದು. ಸಂಸಾರ ಮಾತ್ರ ಸಾಗುವುದಿಲ್ಲ."

"ಏಕೆ ನನ್ನ ಹೊರತು ಪ್ರಪಂಚ ನಡೆಯಲಾರದು ಎನ್ನುವಿರಾ?"

"ನಡೆಯುವುದೇ ಇಲ್ಲ ಹೇಗೆ ? ನಡೆದೀತು. ಚುಕ್ಕಾಣಿ ಮುರಿದ ಮೇಲೆ ಪ್ರವಾಹದ ಇದಿರು ದಿಕ್ಕಿಗೆ ನಡೆದಿರುವ ದೋಣಿ ಹೇಗೆ ನಡೆಯುವುದೋ ಹಾಗೆ ನಡೆದೀತು."

ಮಾಧವಿಗೆ ಕಾಶಿಗೆ ಹೋಗುವುದು ಅಗತ್ಯವಾಗಿತ್ತು. ಅಲ್ಲಿ ಆಕೆಯ ನಾದಿನಿ ತನ್ನ ಒಂದೇ ಒಂದು ಗಂಡುಮಗುವಿನೊಡನೆ ಇರುತ್ತಿದ್ದಳು. ಅವಳು ವಿಧವೆ. ಆಕೆಯನ್ನೊಮ್ಮೆ ಕಂಡು ಮಾತಾಡಿಸಿ ಬರುವುದು ಅವಶ್ಯವಾಗಿತ್ತು.

ಕಾಶಿಗೆ ಹೊರಡುವ ಸಮಯದಲ್ಲಿ ಮಾಧವಿ ಒಬ್ಬೊಬ್ಬರನ್ನು ಕರೆದು ಯಾರು ಯಾರು ಏನೇನು ಮಾಡಬೇಕೆಂಬುದನ್ನು ಹೇಳಿ ಒಪ್ಪಿಸಿದಳು. ಮುದುಕ ದಾಸಿಗೆ ತಂದೆಯನ್ನೂ ಅಣ್ಣನನ್ನೂ ವಿಶೇಷತಃ ಪ್ರಮೀಲೆಯನ್ನು ಜತನದಿಂದ ನೋಡಿಕೊಳ್ಳೆಂದು ಸಾರಿ ಹೇಳಿದಳು. ಆದರೆ ಉಪಾಧ್ಯಾಯರ ವಿಷಯವಾಗಿ ಯಾರಿಗೆ ಏನೂ ಹೇಳಲಿಲ್ಲ. ಅದನ್ನು ಅವಳು ಮರೆತುಬಿಟ್ಟಳೆಂದಲ್ಲ. ಇಚ್ಛೆಯಿದ್ದೂ ಹೇಳಲಿಲ್ಲ. ಇತ್ತೀಚೆಗೆ ಅವನ ಮೇಲೆ ಆಕೆಗೆ ಸಿಟ್ಟು ಬಂದಿತ್ತು. ಮಾಧವಿ ಅವನಿಗೆ ಅದೆಷ್ಟೋ ಮಾಡಿದ್ದಳು; ಆದರೆ ಆ ಬಗ್ಗೆ ಅವನ ಮುಖದಿಂದ ಒಂದೇ ಒಂದು ಕೃತಜ್ಞತೆಯ ಶಬ್ದ ಒಮ್ಮೆಯೂ ಬಂದಿರಲಿಲ್ಲ. ಎಂತಲೆ, ಮಾಧವಿ ಎಂದೊಬ್ಬಾಕೆ ಇಲ್ಲಿ ಇದ್ದಳು ಎಂದು, ಈ ಅಕರ್ಮಣ್ಯ—ವ್ಯವಹಾರ ಜ್ಞಾನ ಶೂನ್ಯ-ಉದಾಶೀನವೃತ್ತಿಯ ತರುಣನಿಗೆ ತನ್ನ ಅಭಾವದಿಂದಲೇ ತಿಳಿಯಲಿ ಎಂಬುದು ಅವಳ ಉದ್ದೇಶ. ತಾನಿಲ್ಲದಾಗ ಈ ಪ್ರಾಣಿ ಹೇಗೆ ಮಾಡುವನೆಂಬುದನ್ನು ತಮಾಷೆಗಾಗಿಯಾದರೂ ನೋಡಿದರೆ ಏನು ತಪ್ಪು ? ಅದಕ್ಕಾಗಿ ಸುರೇಂದ್ರನ ಸಲುವಾಗಿ ಯಾರಿಗೂ ಏನೂ ಹೇಳಲಿಲ್ಲ.

ಸುರೇಂದ್ರನಾಥ ಗಣಿತದ ಸಮಸ್ಯೆಗಳನ್ನು ಬಿಡಿಸುತ್ತ ಕುಳಿತಿದ್ದ. ಆ ಹೊತ್ತಿನಲ್ಲಿ ಪ್ರಮೀಲೆ ಬಂದು "ಅಕ್ಕಾಜಿ ನಿನ್ನೆ ರಾತ್ರಿ ಕಾಶಿಗೆ ಹೋದಳು" ಎಂದು ಹೇಳಿದಳು.

ಅವನಿಗೆ ಕೇಳಿಸಲಿಲ್ಲ. ಎರಡು ಮೂರು ದಿನಗಳ ಮೇಲೆ ಹತ್ತು ಹೊಡೆದು ಹೋದರೂ ಯಾರೂ ಊಟಕ್ಕೆ ಕರೆಯುವುದಿಲ್ಲ ಎಂದು ಸುರೇಂದ್ರನಿಗೆ ಅರಿವಾಯಿತು. ಒಮ್ಮೊಮ್ಮೆ ಒಂದು ಹೊಡೆಯುತ್ತಿತ್ತು, ಎರಡೂ ಆಗುತ್ತಿತ್ತು. ಸ್ನಾನವಾದ ಬಳಿಕ ದೋತರ ಬಿಡುವಾಗ

ಒಗೆದ ದೋತರದ ನೆನಪಾಗುತ್ತಿತ್ತು. ಅದೂ ಚೆನ್ನಾಗಿ ಒಗೆದುದಿರುತ್ತಿದ್ದಿಲ್ಲ. ಉಣ್ಣುವ ತಟ್ಟೆಯನ್ನು ಜಳಜಳ ಒರೆಸಿರುತ್ತಿದ್ದಿಲ್ಲ. ರಾತ್ರಿ ವಿದ್ಯುದ್ದೀಪವನ್ನು ಆರಿಸಲು ಯಾರೂ ಬರುತ್ತಿದ್ದಿಲ್ಲ. ಓದಿನ ನಾದದಲ್ಲಿ ಎರಡು ಮೂರು ಗಂಟೆಯಾಗುತ್ತಿತ್ತು. ಬೆಳಗಿನಲ್ಲಿ ಬೇಗನೆ ಎಚ್ಚರಾಗುತ್ತಿದ್ದಿಲ್ಲ. ಇಡೀ ದಿನ ಕಣ್ಣೊಳಗಿನ ನಿದ್ದೆ ಹೋಗಿರುತ್ತಿದ್ದಿಲ್ಲ. ಮೈ ಬಡವಾಯಿತು. ಆಗ ಮನೆಯೊಳಗೆ ಏನೋ ಬದಲಾವಣೆ ಆದ ಹಾಗೆ ಸುರೇಂದ್ರನಿಗೆ ಎನಿಸತೊಡಗಿತು. ಸೆಕೆ ಅತೀವ ಹೆಚ್ಚಾಯಿತೆಂದರೆ ಬೀಸಣಿಕೆಯ ವಿಚಾರ. ಸುರೇಂದ್ರ ಮುಖ ಮೇಲೆತ್ತಿ ಕೇಳಿದ: " ಪ್ರಮಿಲಾ, ಅಕ್ಕಾಜಿ ಊರೊಳಗೆ ಇದ್ದಂತೆ ಕಾಣುವುದಿಲ್ಲ. "

" ಹೌದು, ಆಕೆ ಕಾಶಿಗೆ ಹೋಗಿದ್ದಾಳೆ. "

" ಅದಕ್ಕೇ ಎಂದೆ. "

ಎರಡು ದಿನಗಳ ತರುವಾಯ ಪ್ರಮಿಲೆಯ ಕಡೆ ಮುಖ ತಿರುಗಿಸಿ ಸುರೇಂದ್ರ " ಅಕ್ಕಾಜಿ ಎಂದು ಬರುತ್ತಾರೆ ? " ಎಂದು ಕೇಳಿದ.

" ಒಂದು ತಿಂಗಳಿಗೆ. "

ಸುರೇಂದ್ರ ಮತ್ತೆ ಪುಸ್ತಕದಲ್ಲಿ ಮುಖ ಇಟ್ಟುಕೊಂಡು ಕುಳಿತ. ಮತ್ತೂ ನಾಲ್ಕೈದು ದಿನಗಳು ಉರುಳಿದವು. ಅವನು ಸೀಸ ಕಡ್ಡಿಯನ್ನು ಪುಸ್ತಕದ ಮೇಲಿಟ್ಟು ಕೇಳಿದ: " ಪ್ರಮಿಲಾ ತಿಂಗಳಾಗಲಿಕ್ಕೆ ಇನ್ನೂ ಎಷ್ಟು ದಿನಗಳಿವೆ ? "

" ಬಹಳ ದಿವಸ. "

ಸುರೇಂದ್ರ ಸೀಸಕಡ್ಡಿಯನ್ನು ಎತ್ತಿದ; ಕನ್ನಡಕವನ್ನು ತೆಗೆದು ಅದರ ಕಾಜನ್ನು ಒರಸಿದ; ಕನ್ನಡಕವನ್ನು ಮತ್ತೆ ಮೂಗಿನ ಹೆಗಲಿಗೇರಿಸಿ ಪುಸ್ತಕವನ್ನು ನೋಡತೊಡಗಿದ

ಮರುದಿನ ಅವನು " ಪ್ರಮಿಲಾ, ಅಕ್ಕಾಜಿಗೆ ನೀನು ಕಾಗದ ಬರೆಯುತ್ತಿರುತ್ತೀ ಅಲ್ಲವೆ ? " ಎಂದು ಪ್ರಶ್ನಿಸಿದ.

" ಬರೆಯುತ್ತೇನೆ. "

" ಬೇಗನೇ ಬರಲಿಕ್ಕೆ ಬರೆಯುವವಳಿದ್ದೀ ಏನು ? "

" ಇಲ್ಲ. "

ಸುರೇಂದ್ರ ತುಸ ಉಸಿರ್ಗರೆದು " ಅದೇ ಒಳ್ಳೆಯದೇನು ? "

" ಅಕ್ಕಾಜಿ ಬಂದರೆ ಒಳ್ಳೆಯದೊ ಅಲ್ಲವೊ ? " ಎಂದು ಪ್ರಮೀಲೆ ಮರಳಿ ಕೇಳಿದಳು.

" ಒಳ್ಳೆಯದು—— ಆದರೆ ? "

" ಬಾ, ಎಂದು ಬರೆಯಲೇನು ? "

ಸುರೇಂದ್ರನಾಥ ಪ್ರಸನ್ನನಾಗಿ ನುಡಿದ: " ಬರೆ. "

" ನೀವು ಎನ್ನುತ್ತೀರಿ ಎಂದು ಬರೆಯಲೊ ? "

" ಬರೆ. "

ಬರೆ ಎಂದೆನ್ನುವಾಗ ಅವನ ಮನಸು ಎರಡಿಟ್ಟಾಗಲಿಲ್ಲ. ಜಗತ್ತಿನೊಳಗಿನ ವ್ಯವಹಾರದ ಶಾಸನಗಳ ಅರಿವಿದ್ದರಲ್ಲವೆ ಅವನಿಗೆ ? ಆಕೆಯ ಬರವಿಗಾಗಿ ಇಚ್ಛೆಯನ್ನು ವ್ಯಕ್ತಗೊಳಿಸುವುದು ಸರಿಯಲ್ಲ, ಯಾರಾದರೂ ಅದನ್ನು ಕೇಳಿದರೆ ಒಳ್ಳೆಯದಲ್ಲ ಎಂಬುದಾವುದೂ ಆತನಿಗೆ ಗೊತ್ತಾಗದ ವಿಷಯು. ಅಕ್ಕ ಇಲ್ಲದಾಗಿನಿಂದ ತನಗೆ ಬಹಳ ಬನ್ನ ಬಂದಿದೆ, ಆಕೆ ಬಂದ ಹೊರತು ತನ್ನದಾವುದೂ ನಡೆಯುವುದಿಲ್ಲ, ಎಂದಮೇಲೆ ಆಕೆಗೆ ಬರಲಿಕ್ಕೆ ಬರೆಯಲು ಏನಾದರೂ ಅಡ್ಡಿಯಿದ್ದೀತು ಎಂಬುದು ಅವನ ಮನಸ್ಸಿನಲ್ಲಿ ಸುಳಿಯದು ಕೂಡ.

ಈ ಜಗತ್ತಿನಲ್ಲಿ ಕುತೂಹಲ ಕಡಿಮೆಯುಳ್ಳ ಮನುಷ್ಯ ಸಾಮಾನ್ಯವಾಗಿ ಸಮಾಜಕ್ಕೆ ಹೊರತೆಂದೇ ಹೇಳಬೇಕು. ಸಾಮಾನ್ಯ ಮಾನವರು ವ್ಯವಹರಿಸುತ್ತಿರುವ ಸಮಾಜದೊಳಗೆ ಅವರು ಹೊಂದಿಕೊಂಡು ಇರಲಾರರು.

ಕುತೂಹಲ ಎಂಬುದು ಸುರೇಂದ್ರನ ಸ್ವಭಾವದೊಳಗೆ ಇಲ್ಲ. ತನಗೆ ಪ್ರಯೋಜನವಾದುದೆಷ್ಟೋ ಅಷ್ಟನ್ನು ಮಾತ್ರ ಅವನು ತಿಳಿಯ

ಬಲ್ಲ. ಅದರಾಚೆಗೆ ತನ್ನಿಚ್ಛೆಯಿಂದ ಒಂದಡಿಯನ್ನಾದರೂ ಇಡಲು ಅವನಿಗೆ ಮನಸ್ಸಿಲ್ಲ, ಪುರಸತ್ತೂ ಇಲ್ಲ. ಎಂತಲೇ ಅಕ್ಕಾಜಿಯ ವಿಷಯದಲ್ಲಿ ಏನೂ ಅರಿಯದವನಾಗಿದ್ದ. ಬ್ರಜಬಾಬುಗಳ ಕುಟುಂಬದಲ್ಲಿ ಅವನಿಷ್ಟು ದಿನವಿದ್ದ; ಈ ಮೂರು ತಿಂಗಳನ್ನು ಮಾಧವೀದೇವಿಯ ಆಧಾರದಿಂದಲೇ ಅವನು ಹಾಯಾಗಿ ಕಳೆದಿದ್ದ; ಆದರೂ ಸುರೇಂದ್ರ 'ಆ ಪ್ರಾಣಿ ಯಾರು ?' ಎಂದು ಎಂದಾದರೂ ವಿಚಾರಿಸಿದನೇನು ? ಇಲ್ಲ. ಅವಳು ಗಿಡ್ಡಿಯೋ ಉದ್ದಿಯೋ ? ಅವಳ ಪ್ರಾಯ ಎಷ್ಟು ? —ಇದೊಂದೂ ಅವನಿಗೆ ಗೊತ್ತಿರಲಿಲ್ಲ. ಅರಿತುಕೊಳ್ಳುವ ಕುತೂಹಲ ಇಲ್ಲ. ಒಂದೇ ಒಂದು ಸಲವಾದರೂ ಆ ಇಚ್ಛೆ ಹುಟ್ಟಲಿಲ್ಲ.

ಎಲ್ಲರೂ ಎನ್ನುತ್ತಿದ್ದರು—ಅಕ್ಕಾಜಿ, ಅಕ್ಕಾಜಿ; ತಾನೂ ಎನ್ನುತ್ತಿದ್ದ. ಆಕೆಯ ಸ್ನೇಹ ಪ್ರಯತ್ನಗಳ ಫಲ ಎಲ್ಲರಿಗೂ ಲಭಿಸುತ್ತಿತ್ತು; ಅವನಿಗೂ ಸಿಕ್ಕುತ್ತಿತ್ತು. ಇಡೀ ವಿಶ್ವದ ಸಂಪತ್ತು ಅವಳ ಹತ್ತಿರ ಒಟ್ಟಿತ್ತು; ಯಾರಿಗೆ ಏನು ಬೇಕು ಅದು ದೊರೆಯುತ್ತಿತ್ತು; ಸುರೇಂದ್ರನಿಗೂ ಬೇಕಾದುದು ದೊರೆಯುತ್ತಿತ್ತು. ಇದರಲ್ಲಿ ಅಚ್ಚರಿ ಬಡತಕ್ಕಂತಹದೇನಿತ್ತು ? ಮಳೆಯನ್ನು ಕರೆಯುವುದು ಮೋಡದ ಧರ್ಮ, ಹೆರವರ ಉಪಯೋಗಕ್ಕಾಗುವುದು ಅಕ್ಕಾಜಿಯ ಗುಣ ! ಮಳೆ ಸುರಿಯುತ್ತಿರುವಾಗ ಕೈಯೊಡ್ಡುವವರಿಗೆಲ್ಲಾ ನೀರು ಸಿಕ್ಕುವುದು; ಮಾಧವೀದೇವಿಯ ಮುಂದೆ ಕೈಯನ್ನು ಚಾಚಿದರೆ ಅವರವರ ಅಭೀಷ್ಟ ಫಲಗಳು ಲಭಿಸುವವು. ಮತ್ತಿನ್ನೇನು, ಮೋಡದಂತೆಯೇ ಆಕೆಯೂ ಅಚೇತನಳು, ವಾಸನೆಗಳು ಆಕಾಂಕ್ಷೆಗಳು ಅವಳಿಗಿಲ್ಲ ! ಅವಳ ಬಗೆಗೆ ಅವನಿಗೆ ಬಂದ ದಿನವಿದ್ದ ಕಲ್ಪನೆಯೇ ಇಂದಿಗೂ ಇದ್ದಿತು. ವ್ಯತ್ಯಾಸವಾದುದು ಇಷ್ಟೇ: ಅಕ್ಕಾಜಿ ಕಾಶಿಗೆ ಹೋದ ಸ್ವಲ್ಪ ದಿನಗಳಲ್ಲಿಯೆ, ಆಕೆಯ ಹೊರತು ತನಗೆ ಒಂದು ಕ್ಷಣವೂ ಸಾಗುವುದಿಲ್ಲ ಎಂದು ಸುರೇಂದ್ರನಿಗೆ ಎನಿಸತೊಡಗಿತು.

ಸುರೇಂದ್ರ ತಮ್ಮ ಮನೆಯಲ್ಲಿದ್ದಾಗ ತನ್ನ ತಾಯಿಯ ಹಾಗೂ ತಂದೆಯ ಬಗೆಗೆ ಯಥಾರ್ಥಜ್ಞಾನ ಅವನಿಗಿದ್ದಿತು. ಅವರ ಕರ್ತವ್ಯಗಳೇನೆಂಬುದೂ ತಿಳಿಯುತ್ತಿತ್ತು. ಅಕ್ಕಾಜಿಯೆಂಬ ವ್ಯಕ್ತಿಯ ಪರಿಚಯ

ಅವನಿಗಿಲ್ಲ. ಅವನು ಆ ವ್ಯಕ್ತಿಯನ್ನು ನೋಡಿಲ್ಲ, ಅವಳ ಗುರುತಿಲ್ಲ, ಅವಳನ್ನು ಹೆಸರಿನಿಂದಷ್ಟೇ ಬಲ್ಲ. ಹೆಸರೇ ಸರ್ವಸ್ವ.

ನಮ್ಮ ಪ್ರಪಂಚದೊಳಗಿನ ಉದಾಹರಣೆಯನ್ನೇ ನೋಡಿರಿ. ತಮ್ಮ ಇಷ್ಟದೇವತೆಯ ಸಾಕ್ಷಾದ್ದರ್ಶನ ಯಾರಿಗೂ ಇರುವುದಿಲ್ಲ. ಬರೀ ಹೆಸರು ಅಷ್ಟೇ ಗೊತ್ತು. ಸುಖಸಮಯದಲ್ಲಿ, ಆಪತ್ಕಾಲದಲ್ಲಿ, ಸಂಕಟಕಾಲದಲ್ಲಿ ಈ ಬರೀ ಹೆಸರಿನಿಂದ ಮಾತ್ರ ಪರಿಚಿತವಾಗಿರುವ ಸತ್ತ್ವಿಯ ಇದಿರಿನಲ್ಲಿ ನಾವು ನಮ್ಮ ಹೃದಯವನ್ನು ಸೂರೆಗೊಡುತ್ತೇವೆ, ಹಣೆ ನೆಲಕ್ಕೆ ಹಚ್ಚಿ ಕೈ ಜೋಡಿಸಿ ಕರುಣೆಯನ್ನು ಬೇಡಿಕೊಳ್ಳುತ್ತೇವೆ, ಕಣ್ಣಲ್ಲಿ ನೀರು ತರುತ್ತೇವೆ, ಒಂದು ವ್ಯಕ್ತಿಯನ್ನು ನೋಡುತ್ತೇವೋ ಎಂಬಂತೆ ಶೂನ್ಯದೃಷ್ಟಿಯಿಂದ ನೋಡುತ್ತೇವೆ; ನಾಲಿಗೆಯಿಂದ ಏನೇನೋ ಅಸ್ಪಷ್ಟ ಶಬ್ದಗಳನ್ನು ಗುಣುಗುಣಿಸುತ್ತೇವೆ— ಇಷ್ಟೆ. ಆ ವಸ್ತುಮಾತ್ರ ದೃಷ್ಟಿಗೋಚರವಾಗುವುದಿಲ್ಲ. ಸುರೇಂದ್ರನೂ ಹಾಗೆಯೇ ತನಗೆ ದುಃಖವಾದಾಗ ಅಸ್ಪಷ್ಟವಾಗಿ ' ಅಕ್ಕಾಜೀ ' ಎಂದಿಷ್ಟೇ ಉಚ್ಚರಿಸುತ್ತಿದ್ದ.

## ೫. ಸುರೇಂದ್ರನ ಪರೀಕ್ಷೆ

ಇನ್ನೂ ಹೊತ್ತು ಹುಟ್ಟಿರಲಿಲ್ಲ. ಮೂಡಣ ದಿಕ್ಕು ಕೆಂದವಾಗಿದ್ದಿತು ಮಾತ್ರ. ಸುರೇಂದ್ರ ಇನ್ನೂ ನಿದ್ರೆಯಲ್ಲಿದ್ದ. ಪ್ರಮಿಲೆ ಬಂದು ಆತನ ತಲೆಯನ್ನು ಅಲ್ಲಾಡಿಸಿ “ ಮಾಸ್ತರ್ ” ಎಂದಳು.

ಸುರೇಂದ್ರ ಕಣ್ಣುಗಳೆರಡನ್ನೂ ತುಸ ಪಿಳಕಿಸಿ “ ಏನು ಪ್ರಮಿಲಾ ? ” ಎಂದ.

“ ಅಕ್ಕಾಜಿ ಬಂದಳು. ”

ಸುರೇಂದ್ರನಾಥ ಎದ್ದು ಕುಳಿತ. ಪ್ರಮಿಲೆಯ ಕೈಹಿಡಿದು “ ಎಲ್ಲಿ ನಡೆ ನೋಡೋಣ ” ಎಂದು ನುಡಿದ.

ಅವಳನ್ನು ಕಾಣಬೇಕೆಂಬ ಇಚ್ಛೆ ಅವನ ಮನಸಿನೊಳಗೆ ಹೇಗೆ ತಲೆಹೋರಿತೋ ಹೇಳಲು ಬಾರದು. ಅವನು ಕಣ್ಣೊರಸಿಕೊಳ್ಳುತ್ತ, ಪ್ರಮೀಲೆಯ ಕೈಯನ್ನು ಹಿಡಿದುಕೊಂಡು ಒಳಗೆ ಹೇಗೆ ಹೋದನೆಂಬು ಹೇಳುವುದೂ ಕಠಿನ. ಅವನು ಒಳಗೆ ಹೋದ ಎಂಬುದು ಮಾತ್ರ ಖಂಡಿತ. ಅಲ್ಲಿಂದ ಸೋಪಾನವನ್ನೇರಿ ಮಾಧವಿಯ ಕೋಣೆಯ ಇದ ರಿನಲ್ಲಿ ಹೋಗಿ ನಿಂತು " ಅಕ್ಕಾಜೀ " ಎಂದಿಷ್ಟೇ ನುಡಿದ.

ಮಾಧವಿ ಕೆಲಸದೊಳಗೆ ಮೈಮರೆತಿದ್ದಳು. " ಏನೇ ತಂಗೀ ? " ಎಂದಳು.

" ಮಾಸ್ತರ್— "

ಪ್ರಮೀಲೆ ಸುರೇಂದ್ರ ಇಬ್ಬರೂ ಒಳಗೆ ಬಂದಿದ್ದರು. ಮಾಧವಿ ಆಶ್ಚರ್ಯಚಕಿತಳಾಗಿ ಎದ್ದು ನಿಂತಳು. ಸುರೇಂದ್ರನಾಥ " ನೀವು ಇಲ್ಲದುದಕ್ಕೆ ನಮಗೆ ಬಹಳ ತೊಂದರೆ ಆಯಿತು, " ಎಂದ.

ಮಾಧವಿ ಮೋರೆಯ ಮೇಲೆ ಸೆರೆಗು ಎಳೆದುಕೊಂಡು ನಾಲಗೆ ಯನ್ನು ಕಚ್ಚಿಕೊಂಡಳು. ' ಏನಿದು ! ' ಎಂದುಕೊಂಡಳು ಮನಸಿ ನೊಳಗೇ.

" ನೀವು ಹೋದುದಕ್ಕೆ.... "

ಮಾಧವಿ ಮನಸಿನೊಳಗೇ ಎಂದುಕೊಂಡಳು: " ಏನಿದು ಹುಚ್ಚು ಚ್ಚಾರ ! " ಮೃದುಸ್ವರದಲ್ಲಿ " ಪ್ರಮೀಲಾ, ಉಪಾಧ್ಯಾಯರಿಗೆ ಹೊರಗೆ ಹೋಗಿರೆಂದು ಹೇಳು ತಂಗೀ " ಎಂದು ನುಡಿದಳು.

ಪ್ರಮೀಲೆಯೇನೋ ಸಣ್ಣವಳು. ಆದರೂ ಅಕ್ಕನ ನಡೆವಳಿ ಯಿಂದ ಈಗ ನಡೆದ ಘಟನೆ ಸರಿಯಾದುದಲ್ಲ ಎಂದು ಅವಳಿಗೆ ತಿಳಿ ಯಿತು. " ನಡೆಯಿರಿ ಹೋಗೋಣ ಮಾಸ್ತರ್ " ಎಂದಳು.

ಸುರೇಂದ್ರ ನಿಮಿಷಕಾಲ ಸ್ತಬ್ಧನಾಗಿ ನಿಂತಿದ್ದು " ನಡೆ " ಎಂದ.

ಹೆಚ್ಚು ಮಾತನಾಡುವುದನ್ನೇ ಅರಿಯ ಪ್ರಾಣಿ. ಮಾತನಾಡ ಬೇಕೆಂಬ ಇಚ್ಛೆಯೂ ಅವನಿಗಿರಲಿಲ್ಲ. ದಿನಾಂತ ದಿನವೆಲ್ಲ ಆಕಾಶ ಮುಗಿಲುಗಳಿಂದ ಮುಚ್ಚಿದ್ದಿತೆಂದರೆ, ಸೂರ್ಯ ಯಾವಾಗಲಾದರೂ ಹೊರಗೆ ಬಂದಾನೋ ಅವನನ್ನು ನೋಡೇನೋ ಎಂಬ ಇಚ್ಛೆ ಸಹಜವಾಗಿಯೆ ಉಂಟಾಗುತ್ತದೆ. ಸೂರ್ಯನನ್ನು ನೋಡಲಿಕ್ಕಾಗುವುದಿಲ್ಲ ಎಂಬ ವಿಚಾರವೇ ಹೊಳೆಯುವುದಿಲ್ಲ. ನೋಡಿದ ಮೇಲೆ ಕಣ್ಣು ಕುಕ್ಕುತ್ತವೆ. ತಿಂಗಳಾನುತಿಂಗಳು ಮೋಡ ಮುಸುಕಿದ್ದುದರಿಂದ, ಸುರೇಂದ್ರ ಅತ್ಯುತ್ಸುಕತೆಯಿಂದ ಸೂರ್ಯೋದಯವನ್ನು ನೋಡಲು ಹೋದ. ಅದರ ಪರಿಣಾಮ ಹೀಗಾಗುವುದೆಂದು ಅವನಿಗಾದರೂ ಏನು ಗೊತ್ತು ?

ಆ ದಿವಸದಿಂದ ಪರಿಸ್ಥಿತಿಯಲ್ಲಿ ಹೆಚ್ಚುಕಡಿಮೆಯಾಯಿತು. ಮಾಧವಿಗೆ ಒಂದು ತರಹದ ನಾಚಿಕೆಯಾಯಿತು. ಬಿಂದಬಚಿ ಮನಸಿನೊಳಗೆ ಏನೆಂದುಕೊಂಡಳೋ ಅವಳೇಕೆ ನಕ್ಕಳೋ ಯಾರು ಹೇಳಬೇಕು ?

ಸುರೇಂದ್ರನಿಗೂ ಈಗ ಸಂಕೋಚವೆನಿಸತೊಡಗಿತು. ಮಾಧವಿಯ ಅಳತೆಯಿಲ್ಲದ ಆದರ ಅಳತೆಗೆ ಬಂತು. ತಾಯಿಯ ಪ್ರೇಮಮಯವಾದ ಕಿರಣಗಳಿಗೆ ಅವನು ಎರವಾದಂತಾಯಿತು.

ಸುರೇಂದ್ರ ಒಂದು ದಿನ ಪ್ರಮೀಲೆಯನ್ನು ಕೇಳಿದ: " ಏನು, ಅಕ್ಕ ನಮ್ಮ ಮೇಲೆ ಸಿಟ್ಟಾಗಿದ್ದಾರಲ್ಲವೆ ? "

" ಹೌದು " ಎಂದು ಪ್ರಮೀಲೆ ಹೇಳಿದಳು.

" ಅದೇಕೆ ? "

" ನೀವು ಆವೊತ್ತು ಹಾಗೇಕೆ ಆಕೆಯ ಕೋಣೆಯೊಳಗೆ ಹೋದಿರಿ?"

" ಹೋಗಬಾರದಾಗಿತ್ತೇನೋ, ಅಲ್ಲವೆ ? "

" ಒಳ್ಳೇದು, ನಿಮಗೇನು ಬೇಕಾಗಿತ್ತೀಗ ? ಅಕ್ಕಗೆ ಬಹಳ ಸಿಟ್ಟು ಬಂದಿದೆ. "

ಸುರೇಂದ್ರ ಪುಸ್ತಕವನ್ನು ಮುಚ್ಚಿ "ಆದುದೇ ಒಳಿತಾಯಿತೆನ್ನು," ಎಂದು ನುಡಿದ.

ಮುಂದೆ ಕೆಲ ದಿನಗಳಾದವು. ಒಂದು ದಿನ ಮಧ್ಯಾಹ್ನವೇ ಮೋಡ ಕವಿದು ಬಹಳ ಮಳೆ ಸುರಿಯಿತು. ಬ್ರಜಬಾಬು ಲಾಹಿರಿಯವರು ಎರಡು ದಿನಗಳಿಂದ ಮನೆಯೊಳಗಿರಲಿಲ್ಲ; ತಮ್ಮ ಜಮೀನು ದಾರಿಯ ಹಳ್ಳಿಗೆ ಹೋಗಿದ್ದರು. ಮಾಧವಿಗೂ ಕೆಲಸವಿದ್ದಿರಲಿಲ್ಲ. ಮನೆಯೊಳಗೆ ಪ್ರಮೀಲೆಯ ಗಲಭೆ ಹೆಚ್ಚಾಗಿಹೋಗಿತ್ತು. ಆಕೆಯನ್ನು ಹಿಡಿದುಕೊಂಡು ಮಾಧವಿ "ನಿನ್ನ ಪುಸ್ತಕವನ್ನು ತೆಗೆದುಕೊಂಡು ಬಾ ಇಲ್ಲಿ ನೋಡೋಣ, ಏನೇನು ಕಲಿತಿದ್ದೀಯೋ" ಎಂದು ಸಿಡಿನುಡಿದಳು.

ಪ್ರಮೀಲೆ ಹಾಗೆಯೇ ಸುಮ್ಮನೆ ನಿಂತುಕೊಂಡಳು. ಮಾಧವಿ ಮತ್ತೆ ಗದರಿದಳು: "ಹೋಗು, ತೆಗೆದುಕೊಂಡು ಬಾ ಪುಸ್ತಕ."

"ರಾತ್ರಿ ತಕ್ಕೊಂಡು ಬರುತ್ತೇನೆ, ಅಕ್ಕಾಜೀ."

"ಉಂಹೂ, ಇಲ್ಲ, ಈಗಿಂದೀಗ ತೆಗೆದುಕೊಂಡು ಬರಬೇಕು."

ಬಹಳ ಕಷ್ಟದಿಂದ ಪ್ರಮೀಲೆ ಪುಸ್ತಕ ತರುವುದಕ್ಕೆ ಹೋದಳು. ತೆಗೆದುಕೊಂಡು ಬರುತ್ತಿರುವಾಗ "ಮಾಸ್ತರ್ ಏನೂ ಕಲಿಸುವುದೇ ಇಲ್ಲ, ತಮ್ಮಷ್ಟಕ್ಕೆ ತಾವು ಏನೋ ಓದುತ್ತ ಕೂತಿರುತ್ತಾರೆ" ಎಂದುಕೊಳ್ಳುತ್ತ ಬಂದಳು.

ಮಾಧವಿ ಎಷ್ಟೆಷ್ಟೋ ಪರೀಕ್ಷೆ ತೆಗೆದುಕೊಂಡಳು. ನಿಜವಾಗಿಯೂ ಉಪಾಧ್ಯಾಯರು ಅವಳಿಗೆ ಏನೇನೂ ಹೇಳಿಕೊಟ್ಟಿರಲಿಲ್ಲ ಎಂಬುದು ಆಕೆಗೆ ಮನವರಿಕೆಯಾಯಿತು. ಅಷ್ಟೇ ಏಕೆ, ಈ ಮೂರು ನಾಲ್ಕು ತಿಂಗಳೊಳಗೆ ಪ್ರಮೀಲೆ ಕಲಿತುದನ್ನೂ ಮರೆತುಬಿಟ್ಟಿದ್ದಳು. ಮಾಧವಿಗೆ ಪಿತ್ತವೇರಿತು. ಆಕೆ ಬಿಂದಬಚಿಯನ್ನು ಉದ್ದೇಶಿಸಿ, "ಹೋಗೇ, ಉಪಾಧ್ಯಾಯರನ್ನು ಕೇಳಿ ಬಾ,— ಒಂದು ದಿವಸ ಕೂಡ, ಒಂದಕ್ಷರ ಕೂಡ ಏಕೆ ಕಲಿಸಲಿಲ್ಲ ಪ್ರಮೀಲೆಗೆ ಅವರು?" ಎಂದು ಹೇಳಿದಳು.

ಬಿಂದು ಹೋದಳು ಕೇಳಲಿಕ್ಕೆ. ಸುರೇಂದ್ರನಾಥ ಯಥಾಪ್ರಕಾರ ಕುಳಿತಿದ್ದ ಲೆಕ್ಕ ಬಿಡಿಸುತ್ತ. ಅವಳು ಕೇಳಿದಳು: " ಸ್ವಾಮಿ, ಅಕ್ಕಾಜಿ ಕೇಳುತ್ತಾರೆ: ಪ್ರಮೀಲಕ್ಕನಿಗೆ ಏಕೆ ಏನೇನೂ ಕಲಿಸಲಿಲ್ಲ ? "

ಉಪಾಧ್ಯಾಯ ಸ್ವಾಮಿಯ ಲಕ್ಷ್ಯ ಹೊರಗಡೆ ಇರಲಿಲ್ಲ. ಬಿಂದು ಗಟ್ಟಿಯಾಗಿ ಕೂಗಿದಳು: " ಉಪಾಧ್ಯಾಯರೇ ! "

" ಏನು ? "

" ಅಕ್ಕಾಜಿ ಎನ್ನುತ್ತಾರೆ.... "

" ಏನೆನ್ನುತ್ತಾರೆ ? "

" ಪ್ರಮೀಲಕ್ಕಗೆ ಏಕೆ ಕಲಿಸಲಿಲ್ಲ ? "

ಚಿಂತಿತನಾಗಿ ಸುರೇಂದ್ರ ಉತ್ತರವಿತ್ತ: "ನನಗದು ಸೇರುವುದಿಲ್ಲ."

ಬಿಂದುವಿಗೆ ಇವರು ನೆಟ್ಟಗಿಲ್ಲ ಎನಿಸಿತು. ಆಕೆ ಮಾಧವಿಗೆ ಹೋಗಿ ಹೇಳಿದಳು. ಅವಳ ಸಿಟ್ಟು ಹೆಚ್ಚಿತು. ಅವಳು ಕೆಳಗಿಳಿದು ಬಂದಳು. ಬಾಗಿಲ ಹೊರಗೆ ನಿಂತು ಬಿಂದುವಿಗೆಂಬಂತೆ " ಚಿಕ್ಕತಂಗಿಗೆ ಒಂದು ದಿವಸ ಕೂಡ ಕಲಿಸಲಿಲ್ಲ ಏಕೆ ? " ಎಂದಳು.

ಚಿಂತಾಗ್ರಸ್ತನಾಗಿ ಸುರೇಂದ್ರ ಹೇಳಿದ: " ನಮ್ಮಿಂದ ಆಗಲಿಲ್ಲ."

ಮಾಧವಿಗೆ ಇದೇನು ಹೀಗೆಂದರೆ ಎಂದೆನಿಸಿತು.

ಬಿಂದು ಕೇಳಿದಳು; " ಹಾಗಾದರೆ ನೀವಿರುವುದು ಏತಕ್ಕೆ ಇಲ್ಲಿ?"

" ಇಲ್ಲದಿದ್ದರೆ ಹೋಗುವುದು ಎಲ್ಲಿ ? "

" ಹಾಗಾದರೆ ಏಕೆ ಕಲಿಸುವುದಿಲ್ಲ ಹುಡಿಗೆಗೆ ? "

ಸುರೇಂದ್ರನಿಗೆ ಈಗ ಪರಿವೆ ಬಂದಿತು. ಆಕಡೆಗೆ ತಿರುಗಿ " ಏನೆಂದಿರಿ ? " ಎಂದ.

ಬಿಂದು ಈವರೆಗೆ ಹೇಳಿದುದರ ಪುನರಾವೃತ್ತಿಯನ್ನು ನುಡಿದಳು. ಆಗ ಸುರೇಂದ್ರ " ಅವಳೆಂತೂ ದಿನಾಲು ಓದುತ್ತಾಳೆ, " ಎಂದ.

" ಅವಳು ಓದುತ್ತಾಳೆ; ನೀವು ನೋಡುತ್ತೀರೇನು ಆಕಡೆ ? "

" ಇಲ್ಲ, ನಮಗೆ ಪುರಸತ್ತಾಗುವುದಿಲ್ಲ. "

ಸುರೇಂದ್ರ ತೆಪ್ಪಗೆ ಕುಳಿತು ವಿಚಾರಮಾಡತೊಡಗಿದ.

" ನಿಮ್ಮಿಂದ ಇನ್ನು ಮುಂದೆ ಕಲಿಸುವುದಕ್ಕಾಗುತ್ತದೆಯೋ ಹೇಗೆ ? "

" ಉಂಹೂ ಆಗುವುದಿಲ್ಲ. ನಮಗೆ ಬೇಸರಾಗುತ್ತದೆ. "

ಮಾಧವಿ ಒಳಗೆ ಬಂದು ನುಡಿದಳು: " ಕೇಳು ಹಾಗಾದರೆ ಬಿಂದು: ಇಷ್ಟು ದಿನ ಸುಳ್ಳು ಹೇಳಿ ಇಲ್ಲೇಕೆ ಇದ್ದರು?

ಬಿಂದು ಅದರಂತೆ ಕೇಳಿದಳು. ಸುರೇಂದ್ರನ ಲೆಕ್ಕದ ವಿಚಾರ ಒಮ್ಮಿಂದೊಮ್ಮೆಲೆ ಹರಿದುಹೋಯಿತು. ಅವನಿಗೀಗ ಸ್ವಲ್ಪ ಕಷ್ಟಕ್ಕಿಟ್ಟುಕೊಂಡಿತು. ವಿಚಾರ ಮಾಡಿ ಹೇಳಿದ: " ಮತ್ತದೇ ನಮ್ಮ ದೊಡ್ಡ ತಪ್ಪಾಯಿತು. "

" ಒಂದಿನವಲ್ಲ, ಒಂದು ವಾರವಲ್ಲ, ಒಂದು ತಿಂಗಳಲ್ಲ, ಒಂದೇ ಸವನೆ ನಾಲ್ಕು ತಿಂಗಳು ತಪ್ಪೇ ? "

" ಹೌದು, ಮತ್ತದನ್ನು ನೀವು ನೋಡುತ್ತಲೇ ಇದ್ದೀರಿ. ಈ ವಿಷಯ ನಮ್ಮ ಲಕ್ಷ್ಯಕ್ಕೆ ಬರಲಿಲ್ಲ. "

ಮರುದಿನ ಪ್ರಮೀಲೆ ಹೇಳಿಸಿಕೊಳ್ಳಲಿಕ್ಕೆ ಬರಲಿಲ್ಲ. ಸುರೇಂದ್ರನಿಗೂ ಅದು ಅಷ್ಟು ಗಮನಕ್ಕೆ ಬರಲಿಲ್ಲ. ಅದರ ಮರುದಿನವೂ ಆ ಹುಡುಗಿ ಬರಲಿಲ್ಲ. ಆ ದಿನವೂ ಹಾಗೇ ಹೋಯಿತು. ಅದರ ಮುಂದಿನ ದಿವಸವೂ ಪ್ರಮೀಲೆ ಬರಲಿಲ್ಲ,— ಆಗ ಸುರೇಂದ್ರ ಒಬ್ಬ ಆಳಿಗೆ ಹೇಳಿದ: " ಪ್ರಮೀಲೆಯನ್ನು ಕರೆದುಕೊಂಡು ಬಾ. "

ಆಳು ಒಳಗೆ ಹೋಗಿ ಬಂದ. " ಸಣ್ಣಕ್ಕ ಇನ್ನುಮೇಲೆ ನಿಮ್ಮ ಹತ್ತಿರ ಕಲಿಯುವುದಿಲ್ಲವಂತೆ " ಎಂದು ತಿಳಿಸಿದ.

" ಯಾರ ಹತ್ತಿರ ಕಲಿಯುತ್ತಾಳೆ ಮತ್ತೆ ? "

ಆಳು ತನ್ನ ಚಾಣಾಕ್ಷತನವನ್ನು ಉಪಯೋಗಿಸಿ " ಮತ್ತೊಬ್ಬ ಉಪಾಧ್ಯರು ಬರುವವರಿದ್ದಾರೆ " ಎಂದ.

ಆಗ ಒಂಬತ್ತು ಗಂಟೆಯಾಗಿತ್ತು. ಸುರೇಂದ್ರನಾಥ ಸ್ವಲ್ಪ ವಿಚಾರ ಮಾಡಿದ. ಆಮೇಲೆ ಮೂರು ನಾಲ್ಕು ಪುಸ್ತಕಗಳನ್ನು ಬಗಲೊಳಗಿಟ್ಟುಕೊಂಡು ಎದ್ದು ನಿಂತ. ಮೆಲ್ಲಮೆಲ್ಲಗೆ ಹೊರಹೊರಟ.

" ಉಪಾಧ್ಯಾಯರೇ, ಈ ಹೊತ್ತಿನೊಳಗೆ ಎಲ್ಲಿಗೆ ಹೊರಟಿರಿ ?" ಆಳು ಕೇಳಿದ.

" ಅಕ್ಕಾಜಿಗೆ ಹೇಳು: ನಾನು ಹೋದೆನೆಂದು. "

" ಮತ್ತೆ ಬರುವುದಿಲ್ಲವೆ ? "

ಸುರೇಂದ್ರನಿಗಿದು ಕೇಳಿಸಲಿಲ್ಲ. ಏನೂ ಉತ್ತರವನ್ನು ಕೊಡದೆ ಅವನು ಆವಾರದಿಂದ ಹೊರಬಿದ್ದ. ಎರಡು ಹೊಡೆದರೂ ಉಪಾಧ್ಯಾಯರು ತಿರುಗಿ ಬರಲಿಲ್ಲ. ಆಳಿನಿಂದ ಮಾಧವಿಗೆ ಗೊತ್ತಾಯಿತು ಅವರು ಹೋದರೆಂಬುದು. " ಎಲ್ಲಿಗೆ ಹೋದರು ? " ಎಂದು ಅವಳು ಆಳನ್ನು ಕೇಳಿದಳು.

" ಅದಾವುದೂ ಗೊತ್ತಾಗಲಿಲ್ಲ. ಒಂಬತ್ತಾಗಿದ್ದಿತು, ಆಗ ಹೋದರು. ಹೋಗುವ ಮುಂದೆ ಅಕ್ಕಾಜಿಗೆ ತಾವು ಹೋದರೆಂದು ತಿಳಿಸು ಎಂದಿಷ್ಟೇ ಹೇಳಿದರು. "

" ಇದೇನೋ, ಉಣ್ಣದೆ ಹೋದರೆ ? " ಎಂದು ಉದ್ವಿಗ್ನಳಾಗಿ ಮಾಧವಿ ನುಡಿದಳು.

ಬಳಿಕ ಮಾಧವಿ ಸ್ವತಃ ಸುರೇಂದ್ರನ ಕೋಣೆಗೆ ಹೋದಳು. ಎಲ್ಲ ಕಾಗದ ಪತ್ರಗಳು ಹೇಗಿದ್ದವು ಹಾಗೆಯೇ ಇದ್ದವು. ಕನ್ನಡಕ ಮೇಜಿನ ಮೇಲೆ ಮಡಿಚಿ ಇಟ್ಟಿತ್ತು. ಪುಸ್ತಕಗಳು ಕೆಲವೇನೋ ಕಡಿಮೆಯಾಗಿದ್ದವು.

ಸಂಜೆಯಾಯಿತು; ರಾತ್ರಿ ಬಂದಿತು; ಸುರೇಂದ್ರ ಬರಲಿಲ್ಲ. ಮರುದಿನ ಮಾಧವಿ ಎರಡು ಆಳುಗಳನ್ನು ಕರೆದು " ನೀವು ಉಪಾಧ್ಯಾಯರನ್ನು ಹುಡುಕಿ ಕರೆದುಕೊಂಡು ಬಂದರೆ ನಿನುಗೆ ಹತ್ತು ರೂಪಾಯಿ ಮೆಚ್ಚು ಕೊಡುವೆ " ಎಂದು ಹೇಳಿದಳು.

ಪ್ರಮೀಲೆ ಅಳುತ್ತಳುತ್ತ " ಅಕ್ಕಾ, ಅವರು ಏಕೆ ಹೋದರು ? " ಎಂದು ಕೇಳಿದಳು.

ಮಾಧವಿ ಅವಳನ್ನು ಕೆಲಕ್ಕೆ ಸರಿಸಿ " ಹೊರಗೆ ಹೋಗು, ಅಳ ಬೇಡ " ಎಂದಳು.

ಒಂದು ದಿವಸ, ಎರಡು ದಿವಸ—ದಿನಗಳು ಹೋದ ಹೋದಂತೆ ಮಾಧವಿಯ ಉದ್ವೇಗ ಹೆಚ್ಚಾಗತೊಡಗಿತು.

ಬಿಂದು " ಅಕ್ಕಾಜೀ, ಅಷ್ಟೇಕೆ ಹುಡುಕಿಸುವುದು ? ಕಲ ಕತ್ತಾ ನಗರದಲ್ಲಿ ಮತ್ತೆ ಯಾರೂ ಸಿಕ್ಕುವುದಿಲ್ಲವೇ ಉಪಾಧ್ಯಾಯರು ? " ಎಂದು ಕೇಳಿದಳು.

ಮಾಧವಿಗೆ ಸಿಟ್ಟುಬಂದಿತು. " ನಡೆ, ಹೋಗು ದೂರ. ಒಬ್ಬರೇ—ಸಂಗಡ ಕಾಸು ಕಡ್ಡಿ ಏನೂ ತೆಗೆದುಕೊಳ್ಳದೆ ಹೊರಟು ಹೋಗಿದ್ದಾರೆ. ಮತ್ತೆ ನೀನೆನ್ನುತ್ತೀ, ಏತಕ್ಕೆ ಇಷ್ಟೊಂದು ಹುಡುಕು ವುದು ಎಂತ. " ಎಂದು ನುಡಿದಳು.

" ಅವರ ಬಳಿ ಕಾಸುಕಡ್ಡಿ ಏನೂ ಇದ್ದಿಲ್ಲ ಎಂದಾದರೂ ಹೇಗೆ ಹೇಳುವಿರಿ ? "

" ಅದನ್ನು ನಾನು ಬಲ್ಲೆ.—ಆದರೆ ನಿನಗೇತಕ್ಕೆ ಬೇಕು, ಅದೆಲ್ಲಾ ಗೊಡವೆ ? "

ಇಷ್ಟರ ಮೇಲೆ ಬಿಂದು ಸುಮ್ಮಗಾದಳು. ಒಂದರ ಹಿಂದಿನ್ನೊಂದ ರಂತೆ ಏಳು ದಿನಗಳು ಕಳೆದವು; ಆತನೇನು ತಿರುಗಿ ಬರಲಿಲ್ಲ. ಮಾಧವಿ ಅನ್ನ ನೀರು ಬಿಟ್ಟಳು. ಸುರೇಂದ್ರ ಉಪವಾಸವೇ ಇರ ಬಹುದೆಂಬುದು ಅವಳ ಮನಸಿನಲ್ಲಿ ಕಟೆಯುತ್ತಿತ್ತು. ಮನೆಯೊಳಗೆ ತನ್ನೆದುರಿಗೆ ಬಂದ ಪದಾರ್ಥಗಳನ್ನೇ ನೋಡದ ಮನುಷ್ಯ ಎರಡನೆ ಯವರಲ್ಲಿ ಕೇಳಿಕೊಂಡಾನೇ ! ಚೆನ್ನಾಗಿ ಗೊತ್ತು ಮಾಧವಿಗೆ: ಸುರೇಂದ್ರನ ಕಡೆ ಹಣವಿಲ್ಲ, ಏನಾದರೂ ಕೊಂಡು ತಿನ್ನಲು; ತಿರಿದು ತಿಂದು ಹೊಟ್ಟೆ ಹೊರೆಯುವ ಧೈರ್ಯವಿಲ್ಲ. ಅವನು ತನ್ನವರನ್ನು

ಕಳೆದುಕೊಂಡ ಮಗುವಿನಂತೆ ಎಲ್ಲಿಯೋ ಕಾಲುದಾರಿಯಲ್ಲಿ ಅಳುತ್ತ ಕುಳಿತಿದ್ದಾನು; ಇಲ್ಲದಿದ್ದರೆ ಯಾವುದೊ ಗಿಡದ ಬುಡದಲ್ಲಿ ಎದೆಯ ಮೇಲೆ ಪುಸ್ತಕವನ್ನು ತೆರೆದಿಟ್ಟುಕೊಂಡು ಮಲಗಿದ್ದಾನು.

ಬ್ರಜಬಾಬುಗಳು ಹಳ್ಳಿಯಿಂದ ಬಂದರು. ತಾವು ಹೋದಾಗ ನಡೆದ ಸಂಗತಿಯೆಲ್ಲ ತಿಳಿಯಿತು.

" ಇದೇನು ಒಳ್ಳೆಯದಾಗಲಿಲ್ಲ ತಂಗೀ " ಎಂದರು.

ಮಾಧವಿ ಕಣ್ಣೀರನ್ನು ಬಲು ಕಷ್ಟದಿಂದ ತಡೆದುಕೊಂಡಳು.

## ೬. ಆಸ್ಪತ್ರಿಯಲ್ಲಿ ಸುರೇಂದ್ರ

ಸುರೇಂದ್ರನಾಥ ಬೀದಿ ಬೀದಿ ಅಲೆದ. ಉಪವಾಸದಿಂದ ಮೂರು ದಿನಗಳನ್ನು ಕಳೆದ. ನಳದ ನೀರಿಗೇನೂ ಬೆಲೆ ಕೊಡಬೇಕಾಗಿರಲಿಲ್ಲ. ಹೊಟ್ಟೆ ಹಸಿಯಿತೆಂದರೆ ಅವನು ಹೊಟ್ಟೆತುಂಬಾ ನೀರು ಕುಡಿಯುತ್ತಿದ್ದ.

ಮೈ ಬಡವಾಗಿದೆ--ಸುರೇಂದ್ರ ಒಂದು ದಿನ ಕಾಳಿ ಘಾಟಿನ ಕಡೆ ಸಾಗಿದ್ದ. ಕತ್ತಲೆಯ ರಾತ್ರಿಯದು. ಯಾರೋ ಏನೋ ಅವನಿಗೆ, ಅಲ್ಲಿ ಊಟದ ಏರ್ಪಾಟಪರುವುದೆಂದು ಹೇಳಿದ್ದರು; ಹೊರಟಿದ್ದ ಆ ಕಡೆ. ಮುಂಚೆಯೇ ಕಾಳಿರುಳು, ಮೇಲೆ ಮೋಡ ಕವಿದಿದೆ. ಚೌರಂಗಿಯಿಂದ ಬರುತ್ತಿದ್ದ ಕುದುರೆ ಬಂಡಿ ಸುರೇಂದ್ರನಿಗೆ ಹಾಯಿತು. ಬಂಡಿಯವನು ಹೇಗೆ ಹೇಗೋ ಕುದುರೆಗಳನ್ನು ತಡೆದ.

ಸುರೇಂದ್ರನ ಪ್ರಾಣವೇನೋ ಉಳಿಯಿತು. ಆದರೆ ಎದೆಗೂ ಪಕ್ಕೆಡಿಗೂ ಚೆನ್ನಾಗಿಯೇ ಪೆಟ್ಟು ತಗಲಿತ್ತು. ಅವನು ಎಚ್ಚರುದಪ್ಪಿ ಬಿದ್ದ. ಅಷ್ಟರಲ್ಲಿ ಪೋಲಿಸರು ಬಂದರು. ವಾಡಿಕೆಯಂತೆ ಅವನನ್ನು ಬಂಡಿಯಲ್ಲಿ ಹಾಕಿಕೊಂಡು ಆಸ್ಪತ್ರಿಗೆ ಒಯ್ದರು. ನಾಲ್ಕೈದು ದಿನ

ಗಳ ಮೇಲೆ ಅವನಿಗೆ ಎಚ್ಚರು ಹುಟ್ಟಿತು. ಕಣ್ಣು ತೆರೆದು ನೋಡಿದ. ಬಾಯಿಯಿಂದ ' ಅಕ್ಕಾಜಿ ' ಎಂದಿಷ್ಟೇ ಮಾತು ಹೊರಟಿತು.

ಆ ದಿವಸ ರಾತ್ರಿಯ ಪಾಳಿಗೆ ಇದ್ದ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ ಅದನ್ನು ಕೇಳಿ ಅವನ ಹತ್ತಿರ ಬಂದ. ಸುರೇಂದ್ರ ತಟ್ಟನೆ ಅವನನ್ನು ಕೇಳಿದ: " ಅಕ್ಕಾಜಿ ಬಂದಳೊ ? "

" ನಾಳೆ ಬೆಳಗ್ಗೆ ಬರುತ್ತಾಳೆ. "

ಮರುದಿನ ಸುರೇಂದ್ರ ಚೆನ್ನಾಗಿ ಎಚ್ಚತ್ತಿದ್ದ. ಅಕ್ಕಾಜಿಯ ಬಗ್ಗೆ ಮಾತ್ರ ಏನೂ ಮಾತು ತೆಗೆಯಲಿಲ್ಲ. ಇಡೀ ದಿನ ಅವನ ಮೈ ಜ್ವರ ದಿಂದ ಕೆಂಡ ಕೆಂಡವಾಗಿತ್ತು. ಸಂಜೆಯ ಮುಂದೆ ಸುರೇಂದ್ರ " ನಾನೀಗೇನು ಆಸ್ಪತ್ರಿಯೊಳಗೆ ಇದ್ದೇನೋ ? " ಎಂದು ಒಬ್ಬನನ್ನು ಕೇಳಿದ.

" ಹೌದು. "

" ಏಕೆ ? "

" ನೀವು ಕುದುರೆಬಂಡಿಯ ಬುಡಕ್ಕೆ ಸಿಕ್ಕಿದ್ದಿರಿ. "

" ಬದುಕುವ ಆಶೆಯಿದೆಯೊ ? "

" ಖಂಡಿತ. "

ಮರುದಿನ ಅದೇ ವಿದ್ಯಾರ್ಥಿ ಬಂದು ವಿಚಾರಿಸತೊಡಗಿದ.

" ನಿಮ್ಮ ಬಂಧು ಬಳಗ ಯಾರಾದರೂ ಈ ಊರಲ್ಲಿ ಇರುವರೋ ? "

" ಯಾರೂ ಇಲ್ಲ. "

" ಮತ್ತಾ ದಿವಸ ' ಅಕ್ಕಾಜಿ ' ಎಂದು ಕೂಗಿದಿರಲ್ಲ, ಅವರು ಯಾರು ? ಈ ಊರಲ್ಲಿ ಇದ್ದಾರೇನು ಅವರು ? "

" ಇದ್ದಾರೆ; ಆದರೇನು, ಅವರು ಇಲ್ಲಿಗೆ ಬರಲಾರರು. ನನ್ನ ತಂದೆಗೆ ನೀವು ಬರೆದು ತಿಳಿಸಬಹುದೋ ? "

" ಹೋ. "

ಸುರೇಂದ್ರ ತಂದೆಯ ವಿಳಾಸವನ್ನು ಹೇಳಿದ. ಅಂದೇ ರಾತ್ರಿ ವಿದ್ಯಾರ್ಥಿ ಅವರಿಗೆ ಪತ್ರ ಬರೆದ. ಆಮೇಲೆ ಅವನ ಅಕ್ಕಾಜಿಗೂ ಸುದ್ದಿ ತಿಳಿದಿರಲಿ ಎಂಬ ವಿಚಾರದಿಂದ ವಿದ್ಯಾರ್ಥಿ ನುಡಿದ: " ಹೆಣ್ಣು ಮಕ್ಕಳು ಅಪೇಕ್ಷೆಪಟ್ಟರೆ ಇಲ್ಲಿ ಬರುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ಹಾಗೆ ಏರ್ಪಾಡು ಮಾಡಲಾಗುವುದು. ನಿಮ್ಮ ಅಕ್ಕಾಜಿ ಯವರ ವಿಳಾಸವನ್ನು ತಿಳಿಸಿದರೆ ಅವರಿಗೂ ಬರೆಯುವೆ. "

ಸುರೇಂದ್ರ ಕೆಲಹೊತ್ತು ವಿಚಾರ ಮಾಡಿ ಬ್ರಜೇಂದ್ರಬಾಬುಗಳ ವಿಳಾಸವನ್ನು ಹೇಳಿದ.

" ಹೋ, ಬ್ರಜಬಾಬುಗಳ ಮನೆ ನಮ್ಮ ಮನೆಗೆ ಹತ್ತಿರವೇ ಆಗುತ್ತದೆ. ನಾನೇ ಹೋಗಿ ನಿಮ್ಮ ಪ್ರಕೃತಿಯ ಸಂಗತಿಯನ್ನು ಇಂದು ಸಂಜೆಗೆ ಅವರಿಗೆ ತಿಳಿಸುತ್ತೇನೆ. ಅವರು ಇಚ್ಛೆಪಟ್ಟರೆ ಬಂದು ನೋಡಲಿಕ್ಕಾಗುವುದು. "

ಅದಕ್ಕೆ ಸುರೇಂದ್ರ ಏನೂ ಮಾತನಾಡಲಿಲ್ಲ. ' ಅಕ್ಕಾಜಿ ಬರುವುದು ಅಸಂಭವ ' ಎಂದು ತನ್ನೊಳಗೇ ಎಂದುಕೊಂಡ. ಆ ವಿದ್ಯಾರ್ಥಿ ಕಳವಳದಿಂದ ಇದ್ದ ಸಂಗತಿಯನ್ನೆಲ್ಲ ಬ್ರಜಬಾಬುಗಳಿಗೆ ಅರುಹಿದ. ಅದನ್ನು ಕೇಳಿ ಬಾಬುಗಳು ಮಮ್ಮಲ ಮರುಗಿದರು.

" ಆತ ಬದುಕಬಹುದಲ್ಲವೆ ? " ಎಂದು ಕೇಳಿದರು.

" ಪೂರ್ಣ ಆಶೆಯಿದೆ " ಎಂದ ವಿದ್ಯಾರ್ಥಿ.

ಬಾಬುಗಳು ಮನೆಯೊಳಗೆ ಹೋಗಿ ಮಗಳಿಗೆ ಹೇಳಿದರು. " ನಾವೇನು ಎನ್ನುತ್ತಿದ್ದೆವು, ಅದೇ ಆಯಿತು ನೋಡು. ಸುರೇಂದ್ರ ಬಂಡಿಯ ಅಡಿಗೆ ಸಿಕ್ಕು ಆಸ್ಪತ್ರಿಯಲ್ಲಿ ಬಿದ್ದಿದ್ದಾನಂತೆ. "

ಮಾಧವಿಯ ಮೈತುಂಬೆಲ್ಲ ಮುಳ್ಳೆದ್ದವು.

" 'ಅಕ್ಕಾಜೀ' ಎಂದವನು ನಿನ್ನ ಹೆಸರನ್ನು ಬಡಬಡಿಸಿದನಂತೆ. ನೀನು ಹೋಗುತ್ತೀಯಾ ? "

ಇದೇ ಹೊತ್ತಿಗೆ ಪ್ರಮಿಳೆ ಪಕ್ಕದ ಕೋಣೆಯಲ್ಲಿ ಏನೋ ಚೆಲ್ಲಿರಂದಿ ಮಾಡಿದಳು. ಮಾಧವಿ ಅಲ್ಲಿಗೆ ಹೊರಟುಹೋದಳು. ಸ್ವಲ್ಪ ಹೊತ್ತಿನಲ್ಲಿ ತಿರುಗಿ ಬಂದು, “ನೀವು ಹೋಗಿ ನೋಡಿಕೊಂಡು ಬರ್ರಿ. ನಾನೇನು ಹೋಗುವುದಿಲ್ಲ,” ಎಂದಳು.

ಬ್ರಜಬಾಬುಗಳು ಸ್ವಲ್ಪ ಖಿನ್ನರಾದರು. “ಅಲ್ಲವೇ, ಅವ ಎಂದರೆ ಒಂದು ಅಡವಿಯ ಪ್ರಾಣಿ; ಅವನಮೇಲೇಕೆ ಕೋಪಿಸಿಕೊಳ್ಳುತ್ತೀ ?” ಎಂದರು.

ಮಾಧವಿ ಏನೂ ಮಾರ್ನುಡಿಗೊಡಲಿಲ್ಲ. ಸುರೇಂದ್ರನನ್ನು ನೋಡುವುದಕ್ಕೆ ಬ್ರಜಬಾಬುಗಳೊಬ್ಬರೇ ಹೋದರು. ಅವನ ಪಾಡನ್ನು ಕಂಡು ಅವರಿಗೆ ಅತಿಶಯ ವ್ಯಸನವಾಯಿತು. “ಸುರೇಂದ್ರಾ, ತಾಯಿತಂದೆಗಳಿಗೆ ಸುದ್ದಿ ಕಳಿಸಿದೆಯಾ ?” ಎಂದು ಕೇಳಿದರು.

“ತಿಳಿಸಿದೆ.”

“ಏನೂ ಚಿಂತೆ ಬೇಡ. ಅವರು ಬಂದ ಮೇಲೆ ಏನಾದರೂ ವ್ಯವಸ್ಥೆ ಮಾಡಬಹುದು.”

ಬ್ರಜಬಾಬುಗಳ ಮನಸಿನಲ್ಲಿ ಅವರ ಹಾದಿವೆಚ್ಚದ ವಿಚಾರ ಹೊಳೆಯಿತು. “ನನಗೆ ಅವರ ವಿಳಾಸವನ್ನು ತಿಳಿಸಿದರೆ, ಅವರು ಬರುವುದಕ್ಕೆ ಯಾವ ಅಡಚಣಿಯೂ ಆಗದಂತೆ ನೋಡಿಕೊಳ್ಳುವೆ” ಎಂದರು.

ಸುರೇಂದ್ರನಿಗೆ ಅದು ತಿಳಿಯಲಿಲ್ಲ. “ಅಪ್ಪ ಬಂದೇ ಬರುತ್ತಾರೆ; ಅಡಚಣಿ ಏತರದು ?” ಎಂದು ಅವನೆಂದ.

ತಿರುಗಿ ಮನೆಗೆ ಬಂದು ಬ್ರಜಬಾಬುಗಳು ಮಗಳಿಗೆ ಎಲ್ಲವನ್ನೂ ಹೇಳಿದರು. ಆವೊತ್ತಿನಿಂದ ಬಾಬುಗಳು ದಿನಾಲು ಒಮ್ಮೆ ಆಸ್ಪತ್ರಿಗೆ ಹೋಗಿ ಸುರೇಂದ್ರನನ್ನು ನೋಡಿಕೊಂಡು ಬರುತ್ತಿದ್ದರು. ಸುರೇಂದ್ರನ ಬಗ್ಗೆ ಒಂದು ಬಗೆಯ ಸ್ನೇಹವುಂಟಾಗಿತ್ತು. ಒಂದು ದಿನ ಆಸ್ಪತ್ರಿಯಿಂದ ಬಂದಬಳಿಕ ಮಗಳಿಗೆಂದರು: “ನೀನು ಸರಿಯಾಗಿ ಊಹಿಸಿದ್ದೆ ನೋಡು. ಸುರೇಂದ್ರನ ತಂದೆ ಒಳ್ಳೆಯ ಸಂಪನ್ನ ಗೃಹಸ್ಥರು.”

ಮಾಧವಿ ಉತ್ಕಂಠೆಯಿಂದ ಕೇಳಿದಳು: " ನಿಮಗೆ ಹೇಗೆ ತಿಳಿಯಿತು ? "

" ಅವನ ತಂದೆ ಜೆಲೋ ಪ್ರತಿಷ್ಠಿತ ವಕೀಲರು. ನಿನ್ನೆ ರಾತ್ರಿ ಅವರು ಇಲ್ಲಿಗೆ ಬಂದಿದ್ದಾರೆ. "

ಮಾಧವಿ ಸ್ತಬ್ಧಳಾದಳು.

" ಸುರೇಂದ್ರ ಮನೆಯಿಂದ ಓಡಿ ಬಂದಿದ್ದಾನಂತೆ " ಎಂದರು ಬ್ರಜಬಾಬುಗಳು.

" ಏಕೆ ? "

" ಈವೊತ್ತು ಅವನ ತಂದೆಯುವರೊಡನೆ ಮಾತಾಡಿದೆ. ಅವರು ಎಲ್ಲವನ್ನೂ ಹೇಳಿದರು. ಸುರೇಂದ್ರ ಇದೇ ವರ್ಷ ಎಂ. ಎ. ಆಗಿದ್ದಾನೆ. ಸಾಮಾನ್ಯವಲ್ಲ, ಮೊದಲನೆಯ ತರಗತಿಯಲ್ಲಿ—ಮೊದಲನೆಯವನಾಗಿ ಉತ್ತೀರ್ಣನಾಗಿದ್ದಾನಂತೆ ! ವಿದೇಶಕ್ಕೆ ಹೋಗಬೇಕೆಂದು ಅವನ ಮನೀಷೆ ಇದ್ದಿತಂತೆ. ಈತ ಒಂದು ತರಹದ ಹುಡುಗ ಎಂದು ಕಳಿಸಲಿಲ್ಲವಂತೆ. ಅದರ ಸಿಟ್ಟಿನಿಂದ ಓಡಿಬಂದಿರುವನಂತೆ. ಅವನಿಗೆ ಪೂರ ನೆಟ್ಟಗಾದ ಮೇಲೆ ವಕೀಲರು ಅವನನ್ನು ಊರಿಗೆ ಕರೆದುಕೊಂಡು ಹೋಗುವರಂತೆ. "

ಸಿಟ್ಟುಸಿರನ್ನು ಬಿಗಿಹಿಡಿದು, ಕಂಬನಿಗಳನ್ನು ತಡೆದು " ಹೌದು ಅದೇ ನೆಟ್ಟಗೆ " ಎಂದಳು ಮಾಧವಿ.

## ೭. ಅಕ್ಕಾಜಿ ಮತ್ತು ಮನೋರಮೆ

ಸುರೇಂದ್ರ ತಮ್ಮೂರಿಗೆ ಹೋಗಿ ಆರು ತಿಂಗಳಾಯಿತು. ಇಷ್ಟು ದಿನಗಳೊಳಗೆ ಗೆಳತಿ ಮನೋರಮೆಗೆ ಒಮ್ಮೆಯೋ ಮಾಧವಿ ಓಲೆ ಬರೆದಿದ್ದಳು.

ಒಮ್ಮೆ ಮಾಧವಿ ಪೂಜೆ ಮಾಡುತ್ತಲಿದ್ದಳು. ಮನೋರಮೆ ಬಂದು ಅವಳನ್ನು ಅಳ್ಳಾಡಿಸಿ, " ಎಲ್ಲಿ ನೋಡೋಣ, ನಿನ್ನ ಆ ಕಪಿ ರಾಯ ಎಲ್ಲಿದ್ದಾನೆ ? " ಎಂದು ಕೇಳಿದಳು.

" ಎಲ್ಲಿಯ ಕಪಿರಾಯನನ್ನು ತಂದೆಯೆ ? "

ಮನೋರಮೆ ಮಾಧವಿಯ ಗದ್ದವನ್ನು ಹಿಡಿದು ಹಾಡುವ ಮಟ್ಟಿನಲ್ಲಿ ಎಂದಳು:

" ನಾನು ಬಂದಕೂಡಲೆ ಹೋಯ್ತೊ ಏನೋ ಆಗಳೆ
ಚೆನ್ನ ಚೆನ್ನ ಪದದಲಿ ಬಾಗಿ ರಾತ್ರಿದಿನದಲಿ
ಇತ್ತೊ ದಾಸನಂದದಿ ? ನೀರ ನೋಡು ನಯನದಿ !

" ಅಲ್ಲೇ, ನೀನು ಸಾಕಿದ್ದೆಯಲ್ಲ ಅದು ? "

" ಎಂದು ? "

ಮನೋರಮೆ ನಗುನಗುತ್ತ " ಏಕೆ, ನೆನಪಾಗುವುದಿಲ್ಲವೆ ? ಅದು, ಪುಸ್ತಕದ ಹೊರತು ಮತ್ತೇನನ್ನೂ ನೋಡುತ್ತಿದ್ದಿಲ್ಲವಲ್ಲ, ಅದು ? " ಎಂದಳು.

ಮಾಧವಿಯ ಮನದಲ್ಲಿ ಅನೇಕ ವಿಚಾರಗಳು ಉದ್ಭವಿಸಿದವು. ಅವಳ ಮುಖ ಬತ್ತಿತು. ಆದರೂ ಸಾವರಿಸಿಕೊಂಡು ನುಡಿದಳು: " ಹಂ ಹಂ, ಅವರ ವಿಷಯ ಕೇಳಿದೆಯಾ ? ಅವರು ಇಲ್ಲಿಂದ ಹೊರಟುಹೋದರು. "

" ಏಕೆ, ನಿನ್ನ ಈ ಆರಕ್ತ ಚರಣಗಳು ಅವನಿಗೆ ಸರಿಬರಲಿಲ್ಲವೊ ? "

ಮಾಧವಿ ಮುಖ ಆಕಡೆ ಹೊರಳಿಸಿದಳು. ಒಂದು ನುಡಿಯನ್ನೂ ಬಾಯ್ಬಿಡಲಿಲ್ಲ. ಸಲಿಗೆಗೂಡಿದ ಆದರದಿಂದ ಮನೋರಮೆ ಅವಳ ಮುಖವನ್ನು ತನ್ನ ಕಡೆ ತಿರುಗಿಸಿಕೊಂಡು, " ಸುಮ್ಮನೆ ನಗಚೇಟಿಗೆ ಮಾಡಹೋದೆ. ಆದರಿದೇನು, ನಿನ್ನೆರಡೂ ಕಣ್ಣುಗಳಲ್ಲಿ ನೀರು ತುಂಬಿಕೊಂಡವು. ಆಶ್ಚರ್ಯವಮ್ಮಾ ! ಇದೇನೇ ಮಾಧವಿ ? " ಎಂದು ನುಡಿದಳು.

ಮಾಧವಿಗೆ ಇನ್ನು ತಡೆಯುವುದಾಗಲಿಲ್ಲ. ಅವಳು ಮುಖಕ್ಕೆ ಸೆರಗೆಳೆದುಕೊಂಡು ಅಳತೊಡಗಿದಳು. ಮನೋರಮೆಯ ಆಶ್ಚರ್ಯಕ್ಕೆ ಎಲ್ಲೆ ಉಳಿಯಲಿಲ್ಲ. ಇನ್ನೇನು ಮಾತಾಡಬೇಕೆಂಬುದೂ ತಿಳಿಯದಾಯಿತು ಆಕೆಗೆ. ಒಂದು ಕ್ಷಣ ಬಿಟ್ಟು ಮಾಧವಿಯ ಮೋರೆಯ ಮೇಲಿನ ಸೆರಗನ್ನು ತೆಗೆದು—ಬಹಳ ಕೆಟ್ಟೆನಿಸಿಕೊಂಡು—ಮನೋರಮೆ " ಇಷ್ಟೊ ನಗೆಚಾಟಿಕೆ ನಿನಗೆ ತಡೆಯಲಿಲ್ಲವಲ್ಲವೇ ? " ಎಂದು ಕೇಳಿದಳು.

ಮಾಧವಿ ಕಣ್ಣೊರಸಿಕೊಳ್ಳುತ್ತ, " ಅಕ್ಕಾ, ನಾನು ವಿಧವೆ ! " ಎಂದಳು.

ಆಮೇಲೆ ಕೆಲಹೊತ್ತು ಇಬ್ಬರೂ ಮೌನವಾಗಿದ್ದರು. ಇಬ್ಬರ ಕಣ್ಣುಗಳಿಂದಲೂ ನೀರು ತೊರೆಗಟ್ಟಿತು. ಮಾಧವಿಯ ದುಃಖವನ್ನು ಕಂಡು ಮನೋರಮೆಗೆ ದುಃಖವಾಯಿತು. ಮಾಧವಿಗೆ ಹೀಗಾಗುವುದಕ್ಕೆ ಕಾರಣ ಬೇರೆಯಿತ್ತು. ಅದನ್ನು ಮನೋರಮೆ ಅರಿಯಳು. ಎಂತಲೇ ಅವಳು ಹೀಗೆ ಚೇಷ್ಟೆಮಾಡಿದಳು. ಪುಸ್ತಕದ ಹೊರತು ಅವನಿಗೇನೂ ಗೊತ್ತಿಲ್ಲವೆಂದು ಮನೋರಮೆ ನುಡಿದಾಗ ಆತನ ನೆನಪು ಮಾಧವಿಗಾಯಿತು. ಆ ನಿತಾಂತವಾದ ಸತ್ಯವನ್ನು ಮಾಧವಿಯೊಬ್ಬಾಕೆಯೇ ಬಲ್ಲಳು.

ಹೀಗೆಯೆ ಎಷ್ಟೋ ಹೊತ್ತು ಕಳೆದ ಬಳಿಕ ಮನೋರಮೆ ಮಾತನಾಡಿದಳು. " ಇದೇನು ಒಳ್ಳೆಯದಾಗಲಿಲ್ಲ. "

" ಏನು ಒಳ್ಳೆಯದಾಗಲಿಲ್ಲ ? "

" ಅದನ್ನೇನು ಹೇಳಲಿಕ್ಕೆ ಬೇಕೆ ? ಅಕ್ಕಾ, ನನಗೆಲ್ಲ ತಿಳಿಯುತ್ತದೆ. "

ಈಗಾರು ತಿಂಗಳಿಂದ ಮಾಧವಿ ತನ್ನ ಪ್ರಾಣಕ್ಕಿಂತಲೂ ಹೆಚ್ಚೆಂದು ಜತನವಾಗಿಟ್ಟುಕೊಂಡುದನ್ನು ಇಂದು ಮನೋರಮೆಯಿಂದ ಬೈತಿಟ್ಟುಕೊಳ್ಳಲು ಆಗಲಿಲ್ಲ. ತನ್ನ ಇಂಗಿತವು ಬಯಲಾಯಿತೇನೋ ಎಂಬಂತೆ ಅವಳು ಮುಖ ಮುಚ್ಚಿಕೊಂಡು ಅತ್ತಳು. ತೀರ, ಚಿಕ್ಕಮಕ್ಕಳಂತೆ ಅತ್ತಳು.

“ ಮತ್ತ್ಯವರು ಏಕೆ ಹೋದರು ? ” ಎಂದು ಕೇಳಿದಳು ಮನೋರಮೆ.

ಮನೋರಮೆಗೆ ಯಾವುದೂ ಗೊತ್ತಿಲ್ಲವೆಂದು ಮಾಧವಿ ತಿಳಿದು ಕೊಂಡಳು. ಅವಳು ಒಂದೊಂದಾಗಿ ಎಲ್ಲ ಸಂಗತಿಯನ್ನು ಹೇಳಿದಳು. ಕೊನೆಗೆ “ ಅವರು ಬದುಕದೆ ಇದ್ದದ್ದರೆ ನನಗೆ ಹುಚ್ಚೇ ಹಿಡಿಯು ತ್ತಿತ್ತೇನೋ ಎನಿಸುವುದು ” ಎಂದಳು.

ಈಗೇನು ಅದಕ್ಕೆ ಕಡಿಮೆಯಾಗಿದೆ---ಎಂದು ಮನೋರಮೆ ಮನಸಿನೊಳಗೆ ಎಂದುಕೊಂಡಳು. ಆವೊತ್ತು ಅವಳು ಅತೀವ ದುಃಖಿತ ಳಾಗಿ ತಮ್ಮ ಮನೆಗೆ ಹೋದಳು. ಅಂದೇ ರಾತ್ರಿ ಅವಳು ಹಾಳಿ ಲೆಕ್ಕಣಿಕೆ ತೆಗೆದುಕೊಂಡು ತನ್ನ ಗಂಡನಿಗೆ ಓಲೆ ಬರೆಯಲು ಕುಳಿತು ಕೊಂಡಳು.

“ ಹೆಂಗುಸರದು ನೆಚ್ಚಿಕೆಯಿಲ್ಲ ಎಂದು ನೀವೆನ್ನುತ್ತಿದ್ದಿರಿ, ಅದು ನಿಜವೇ. ಈಗ ನಾನೂ ಹಾಗೆ ಹೇಳಬಲ್ಲೆ. ಈ ಮಾತನ್ನು ಮಾಧವಿ ನನಗೆ ಕಲಿಸಿದಳು. ಅವಳನ್ನು ನಾನು ಚಿಕ್ಕಂದಿನಿಂದಲೂ ಬಲ್ಲೆ,—ಆದುದರಿಂದ ನಾನವಳ ಮೇಲೆ ತಪ್ಪು ಹೊರಿಸಲಾರೆ. ಅಷ್ಟೊಂದು ಧೈರ್ಯ ನನಗಿಲ್ಲ. ನಾನು ದೋಷ ಹೇರುವುದು ಇಡೀ ಹೆಣ್ಣುಕುಲದ ತಲೆಯಮೇಲೆ, ವಿಧಾತನ ತಲೆಯಮೇಲೆ. ಇಂತಹ ಕೋಮಲವಾದ, ನೀರಿನಂತೆ ಚಂಚಲವಾದ ಪದಾರ್ಥದಿಂದ ಹೆಣ್ಣೆದೆ ಯನ್ನು ಅದೇಕೆ ಅವನು ಮಾಡಿಟ್ಟನೊ! ಆ ಹೃದಯವನ್ನು ಇಷ್ಟೊಂದು ಪ್ರೇಮಮಯವಾಗಿ ಮಾಡಿದುದರಿಂದ ಅವನಿಗೆ ಏನು ಬಂತೊ ! ನಾನು ಆತನ ಅಡಿದಾವರೆಗಳಲ್ಲಿ ಬೇಡಿಕೊಳ್ಳುವುದಿಷ್ಟೆ : ಹೆಂಗರುಳನ್ನು ತುಸ ಬಿರುಸಾಗಿ ಮಾಡು. ನಿಮ್ಮ ಅಡಿಗಳಲ್ಲಿ ನನ್ನ ಪ್ರಾರ್ಥನೆ: ನಿಮ್ಮ ಕಣ್ಣೆದುರಿಗೆ ನಿಮ್ಮಡಿಗಳಲ್ಲಿ ನನಗೆ ಸಾವು ಬರಲಿ. ಮಾಧವಿಯನ್ನು ಕಂಡು ನನಗೆ ಭಯವೆನಿಸುತ್ತಿದೆ. ಇಂದಿನ ತನಕದ ನನ್ನ ವಿಚಾರದಲ್ಲಿ ಅವಳು ಕ್ರಾಂತಿಯನ್ನೆಬ್ಬಿಸಿದ್ದಾಳೆ. ನನ್ನಲ್ಲಿ ಕೂಡ ನೀವು ನಂಬಿಕೆಯಿಡ ಬೇಡಿರಿ. ಬೇಗನೆ ಬಂದು ಕರೆದುಕೊಂಡು ಹೋಗಿರಿ. ”

ಆಕೆಯ ಗಂಡನಿಂದ ಮರುಟಪಾಲು ಬಂದಿತು: “ ರೂಪವಿದ್ದಲ್ಲಿ ಅದು ಕಾಣಿಸಿಕೊಳ್ಳುವುದೇ. ಯಾರಲ್ಲಿ ಯಾವ ಗುಣವಿದೆಯೊ ಅದು ಪ್ರಕಾಶಿತವಾಗದಿರದು. ಹೃದಯದೊಳಗೆ ಪ್ರೇಮವಿದ್ದುದಾದರೆ ಅವನು ಪ್ರೇಮಿಸದೆ ಇರ. ಮಾಧವೀಲತೆ ಬಾಳೆಯನ್ನು ಹಬ್ಬುವುದು ನಿಸರ್ಗನಿಯಮವೇ. ಅದಕ್ಕೆ ನಾವು ನೀವು ಏನು ಮಾಡಬಲ್ಲೆವು ? ನಿನ್ನಲ್ಲಿ ನನ್ನ ನಂಬುಗೆ ತುಂಬಾ ಇದೆ. ಆ ಬಗ್ಗೆ ನೀನು ಚಿಂತಿಸ ಬೇಡ. ”

ಮನೋರಮೆ ಗಂಡನ ಓಲೆಯನ್ನು ಹಣೆಗೆ ಒತ್ತಿಕೊಂಡಳು. ಮನಸಿನೊಳಗೇ ಆತನ ಅಡಿಗಳಿಗೆ ನಮಿಸಿದಳು. “ ಮಾಧವಿ, ದೈವ ಗೇಡಿಯಾದ ವಿಧವೆ, ಮಾಡಬಾರದುದನ್ನು ಮಾಡಿದಳು. ಪರನನ್ನು ಮನಸಿನಲ್ಲಿ ಪ್ರೀತಿಸಿದಳು ” ಎಂದು, ಗಂಡನಿಗೆ ಬರೆದ ಓಲೆಯಲ್ಲಿ ಬರೆದಳು.

ಓದಿ ಮನೋರಮೆಯ ಗಂಡ ಮನಸಿನೊಳಗೆ ನಕ್ಕ. ವಿನೋದ ದಿಂದ ಅವನು ಆಕೆಗೆ ಇನ್ನೊಂದು ಓಲೆ ಹಾಕಿದ: “ ಮಾಧವಿ ದೈವ ಗೇಡಿ ಎಂಬುದರಲ್ಲಿ ಸಂದೇಹವಿಲ್ಲ. ಮತ್ತೇಕೆ ವೈಧವ್ಯಾವಸ್ಥೆಯಲ್ಲಿ ಮನಸಿನೊಳಗೇ ಗಂಡನಲ್ಲದ ಇನ್ನೊಬ್ಬನನ್ನು ಪ್ರೀತಿಸುತ್ತಾಳೆಂದು ನಿನಗೆ ಸಿಟ್ಟು ಬರುವುದು ಸ್ವಾಭಾವಿಕವೇ. ವಿಧವೆಯಾಗಿ ಸಧವೆ (ಸೌಭಾಗ್ಯವತಿ)ಯರ ಅಧಿಕಾರದಲ್ಲಿ ಅವಳು ಕೈಹಾಕುತ್ತಿದ್ದಾಳೆ. ನಾನು ಬದುಕಿರುವವರೆಗೂ ನೀನು ಚಿಂತೆ ಮಾಡಬೇಕಾಗಿಲ್ಲ. ಈ ಸಂಧಿಯನ್ನು ನೀನು ಸುಮ್ಮನೆ ಹೋಗಗೊಡಬೇಡ. ಈ ಸ್ಥಿತಿಯಲ್ಲಿ ಪರಕೀಯನೊಂದಿಗೆ ಪ್ರೇಮವನ್ನಿಡಲು ಹಿಂದು ಮುಂದು ನೋಡಬೇಡ. ಆದರೆ, ಮನೋರಮೆ, ನಿನ್ನ ಕಾಗದದಿಂದ ನನಗೇನೂ ಆಶ್ಚರ್ಯವೆನಿ ಸಲಿಲ್ಲ. ನಾನು ಒಮ್ಮೆ ಒಂದು ಬಳ್ಳಿಯನ್ನು ಕಂಡೆ. ಅದು ಅರ್ಧ ಹರದಾರಿ ನೆಲದಮೇಲೆ ಹಬ್ಬುತ್ತಹೋಗಿ ಕೊನೆಗೆ ಒಂದು ಮರದ ಆಸರವನ್ನು ಹೊಂದಿತು. ಈಗ ಆ ಬಳ್ಳಿಗೆ ಎಷ್ಟು ಎಲೆಗಳು, ಎಷ್ಟು ಹೂಗೊಂಚಲುಗಳು ಬಿಟ್ಟಿವೆಯೆಂದಿ ! ನೀನು ಇಲ್ಲಿಗೆ ಬಂದೆಯೆಂದರೆ ಆ ದೃಶ್ಯವನ್ನು ನೋಡುವುದಕ್ಕೆ ನಾವು ಹೋಗೋಣವಂತೆ. ”

ಮನೋರಮೆ ಸಿಟ್ಟುಗೊಂಡಳು; ಅವಳಿದಕ್ಕೆ ಉತ್ತರವನ್ನೇ ಕೊಡಲಿಲ್ಲ.

ಮಾಧವಿಯ ಕಣ್ಣಸುತ್ತ ಸ್ವಲ್ಪ ಕಪ್ಪು ಕಾಣತೊಡಗಿತ್ತು; ಅವಳ ಪ್ರಸನ್ನ ಮುಖ ಗಂಭೀರವಾಗತೊಡಗಿತ್ತು; ಕೆಲಸಬೊಗಸೆಗಳಲ್ಲಿ ಮುಂಚೆ ಇದ್ದ ದಕ್ಷತೆ ಉಳಿಯಲಿಲ್ಲ. ಮನೆತನದ ಆಡಳಿತದಲ್ಲೆಲ್ಲ ತುಸ ಸಡಿಲು ಹುಟ್ಟಿತ್ತು. ಎಲ್ಲರ ವಿಷಯದಲ್ಲಿಯೂ ಇದ್ದ ಆತ್ಮ ಭಾವ ಎಂದಿನಂತೆ ಚಿರವಾಗಿತ್ತು, ಅಲ್ಲ, ಇನ್ನೂ ಸ್ವಲ್ಪ ಹೆಚ್ಚಾಗಿತ್ತೆಂದರೂ ಸರಿ. ಆದರೆ ಕೆಲಸಬೊಗಸೆಗಳಲ್ಲಿ ಹಿಂದಿನಂತೆ ಅವಳ ಮನಸಿರಲಿಲ್ಲ. ನಡುನಡುವೆ ಏನಾದರೂ ನೆನಪೇ ಉಳಿಯುತ್ತಿರಲಿಲ್ಲ.

ಈಗಲೂ ಆಕೆಯನ್ನು ಎಲ್ಲರೂ ಅಕ್ಕಾಜಿಯೆಂದೇ ಕರೆಯುತ್ತಿದ್ದರು. ಇಂದೂ ಎಲ್ಲ ಜನ ಆ ಕಲ್ಪಲತೆಯ ಕಡೆಗೇ ನೋಡುತ್ತಿದ್ದರು. ಈಗ್ಗೆಯೂ ಒಡ್ಡಿದ ಕೈಗೆ ಹಣ್ಣು ಲಭಿಸುತ್ತಿತ್ತು. ಇಷ್ಟೇ, ಆ ಬಯಕೆ ವಳ್ಳಿ ಮೊದಲಿನ ಹಾಗೆ ನಳನಳಿಸುತ್ತಿದ್ದಿಲ್ಲ; ಕಳೆಯಿದ್ದಿಲ್ಲ. ಹಳೆಯ ಜನಕ್ಕೆ, ಈ ಬಳ್ಳಿ— ಯಾರಿಗೆ ಗೊತ್ತು— ಒಣಗಿಬೇರೆ ಹೋಗಲಿಕ್ಕಿಲ್ಲವಷ್ಟೆ ಎಂದು ಅಂಜಿಕೆಯೆನಿಸುತ್ತಿತ್ತು.

ಮನೋರಮೆ ದಿನ ದಿನ ಬರುತ್ತಿದ್ದಳು. ಎಷ್ಟೋ ಮಾತುಕತೆ ನಡೆಯುತ್ತಿತ್ತು. ಈ ಮಾತು ಮಾತ್ರ ಮತ್ತೆ ಹೊರಡಲಿಲ್ಲ. ಮಾಧವಿಗೆ ಇದರಿಂದ ದುಃಖವಾದೀತು ಎಂಬುದು ಮನೋರಮೆಗೆ ತಿಳಿಯುತ್ತಿತ್ತು. ಆದಷ್ಟು ಮಟ್ಟಿಗೆ ಆ ಮಾತಿನ ಸಂಬಂಧವೇ ಹೊರಡದಂತೆ ನೋಡುತ್ತಿದ್ದಳು. ಮಾಧವಿಗೆ ಈ ಮಾತಿನ ಮರೆವಾದಷ್ಟು ಒಳ್ಳೆಯದೆಂದು ಮನೋರಮೆಗೆ ಎನಿಸುತ್ತಿತ್ತು.

ಸುರೇಂದ್ರನಾಥ ತನಗೆ ನೆಟ್ಟಗಾದ ಮೇಲೆ ತಂದೆಯೊಡನೆ ಊರಿಗೆ ಹೋದ. ಅವನ ಮಲತಾಯಿ ಆತನ ಮೇಲಿಡುತ್ತಿದ್ದ ಲಕ್ಷ್ಯವನ್ನು ತುಸ ತುಸ ಕಡಿಮೆ ಮಾಡತೊಡಗಿದಳು. ಅದರಿಂದ ಪ್ರಯೋಜನವಾಯಿತು. ಸುರೇಂದನೇನೋ ನೆಟ್ಟಗಾದ, ಪ್ರಕೃತಿ ಮಾತ್ರ ಮೊದಲಿನಂತೆ ಸರಿಯಾಗಲಿಲ್ಲ. ಏನೋ ಒಂದು ವ್ಯಥೆಯುಂಟಾಗಿತ್ತು.

ರೂಪ ಯೌವನಗಳ ಮೂಲಕ ಉಂಟಾಗುವ ಆಶೆ ಆಕಾಂಕ್ಷೆಗಳು ಈಗಲೂ ಅವನಲ್ಲಿ ಜಾಗ್ರ್ರತವಾಗಿರಲಿಲ್ಲ. ಹಿಂದಿನಂತೆ ಇಂದೂ ಅವನು ಇಚ್ಛಾರಹಿತ, ಶೂನ್ಯಮನಸ್ಕ, ಆತ್ಮನಿರ್ಭರ. ತಾನು ಯಾರನ್ನಾದರೂ ಅವಲಂಬಿಸಿ ಇರಬೇಕೆಂಬ ಅರಿವೂ ಅವನಿಗಿರಲಿಲ್ಲ. ಎಂದರೆ, ತನ್ನದನ್ನು ತಾನು ಮಾಡಿಕೊಂಡಿರುವ ಅರ್ಹತೆ ಬಂದಿತ್ತೆಂದೇನೂ ಅಲ್ಲ. ಈಗಲೂ ಅವನು ತನಗೋಸುಗ ಹೆರರ ಮೋರೆ ನೋಡಬೇಕಾಗಿತ್ತು. ಆದರೆ ಮೊದಲಿನ ಹಾಗೆ ತನಗೇತಕ್ಕಾದರೂ ಕೊರತೆಯಾದರೆ ಮನಸಿಗೆ ಹಚ್ಚಿಕೊಂಡು ಕೊರಗುತ್ತಿದ್ದಿಲ್ಲ. ಅವನನ್ನು ಕಂಡು ಅವನ ಮಲತಾಯಿ " ಈಗಿನ ಸುರೇಂದ್ರ ಮುಂಚಿನ ಸುರೇಂದ್ರನಲ್ಲ " ಎನ್ನುತ್ತಿದ್ದಳು.

ಒಂದು ದಿನ ಅವನಿಗೆ ಉರಿ ಬಂದವು. ಬಹಳ ವ್ಯಥೆಪಟ್ಟ. ಕಣ್ಣಲ್ಲಿ ನೀರು ಬಂದವು. ತಾಯಿ ಹತ್ತಿರ ಕುಳಿತಿದ್ದಳು. ಅವಳಿಗೆ ಹೊಸದೊಂದು ದೃಶ್ಯವೇ ಕಂಡಿತು. ಅವಳ ಕಣ್ಣೊಳಗೂ ನೀರು ಬಂದಿತು. ಅತ್ಯಂತ ಪ್ರೇಮದಿಂದ ಅವನ ಕಣ್ಣುಗಳನ್ನು ಒರೆಸಿ, " ಏಕಪ್ಪ ಸುರೇಂದ್ರ ? " ಎಂದು ನುಡಿದಳು.

ಸುರೇಂದ್ರ ಸುಮ್ಮನೆ ಇದ್ದ. ಬಳಿಕ ಒಂದು ಪೋಸ್ಟ್‌ಕಾರ್ಡನ್ನು ತೆಗೆದುಕೊಂಡು ಸೊಟ್ಟ ಸೊಟ್ಟ ಅಕ್ಷರಗಳಿಂದ ಹುಚ್ಚುಚ್ಚಾರ ಬರೆದ; " ಅಕ್ಕಾಜೀ, ನನಗೆ ಜ್ವರ ಬರುತ್ತಿದೆ. ಬಹಳ ಕಷ್ಟವಾಗುತ್ತಿದೆ. "

ಓಲೆ ಅಂಚೆಡಬ್ಬಿಗೆ ಬೀಳಲಿಲ್ಲ. ಮೊದಲು ಹಾಸಿಗೆಯ ಮೇಗಣಿಂದ ಕೆಳಕ್ಕೆ ಬಿತ್ತು. ಆಳು ಕಸಗುಡಿಸಲು ಬಂದ. ಹರಕ ಪರಕ ಹಾಳಿ, ಹಣ್ಣಿನ ಸಿಪ್ಪಿ ಮೊದಲಾದವುಗಳೊಡನೆ ಆ ಓಲೆಯನ್ನು ಉಡುಗಿ, ಕಸದ ಬುಟ್ಟಿಗೆ ತುಂಬಿ ತಿಪ್ಪಿಗೆ ಚೆಲ್ಲಿಬಿಟ್ಟ. ಸುರೇಂದ್ರನ ಆಶೆಯೆಲ್ಲ ಕಸಗೂಡಿಹೋಯಿತು.

ಮೊದಲು ಕೆಲದಿನ ಪತ್ರಕ್ಕೆ ಉತ್ತರ ಬಂದೀತೆಂದು ಸುರೇಂದ್ರನಿಗೆ ಬಹಳ ಉಬ್ಬು ಇತ್ತು. ಆ ಆಶೆಯಿಂದವನು ಬದುಕಿದ್ದ.

ಮಾಧವಿಯ ಕೈಬರೆಹವನ್ನಾದರೂ ತನ್ನ ಕಣ್ಣು ಕಂಡಾವು ಎಂದು ಅವನಿಗೆ ಆಶೆ. ಎಷ್ಟೋ ದಿನಗಳು ಹೋದರೂ ಯಾವುದೂ ಬರಲಿಲ್ಲ. ದಿನದಿನಕ್ಕೆ ಅವನ ಜ್ವರ ಇಳಿದವು. ಪಥ್ಯದಿಂದಿದ್ದನೆಂದು ಅವನು ಬೇನೆಯಿಂದ ಎದ್ದ. ಬಳಿಕ ಅವನ ಆಯುಷ್ಯದಲ್ಲಿ ಒಂದು ಕ್ರಾಂತಿಯುಂಟಾಯಿತು. ಆ ಸ್ಥಿತ್ಯಂತರ ಹೊಸದೇನೋ ಅಹುದು; ಅನಪೇಕ್ಷಿತವಾದುದಲ್ಲ. ಇದು ಸುರೇಂದ್ರನ ತಂದೆ ರಾಯಮಹಾಶಯರಿಗೆ ಮೊದಲಿನಿಂದಲೇ ತಿಳಿದಿತ್ತು. ಮತ್ತಾಬಗ್ಗೆ ಭರವಸೆಯೂ ಅವರಿಗೆನಿಸುತ್ತಿತ್ತು. ಸುರೇಂದ್ರನ ಅಜ್ಜ--ತಾಯಿಯ ತಂದೆ—ಪಾವನ ಜಿಲ್ಲೆಯೊಳಗಿನ ಒಬ್ಬ ದೊಡ್ಡ ಜಮೀನುದಾರ. ಇಪ್ಪತ್ತೈದು ಹಳ್ಳಿಗಳ ಜಮೀನುದಾರಿಕೆ ಆತನದು. ವರುಷದ ಹುಟ್ಟುವಳಿ ಏನಿಲ್ಲೆಂದರೂ ಐವತ್ತು ಸಾವಿರ ರೂಪಾಯಿ. ಆತನಿಗೆ ಮಕ್ಕಳಿದ್ದಿದ್ದಿಲ್ಲ ಮೊದಲನೆಯ ಮಾತು; ಮೇಲೆ ಮಹಾ ಜಿಪುಣ ಆತ. ಅದರಿಂದ ತನ್ನ ದೀರ್ಘವಾದ ಆಯುಷ್ಯದಲ್ಲಿ ಬಹಳ ಧನಸಂಚಯ ಮಾಡಿದ್ದ. ಆತನ ತರುವಾಯ ಆ ವಿಪುಲವಾದ ಸಂಪತ್ತಿ ಆತನ ಒಬ್ಬನೇ ಒಬ್ಬ ಮೊಮ್ಮಗನಾದ ಸುರೇಂದ್ರನಿಗೆ ಬರುವುದೆಂಬುದನ್ನು ರಾಯಮಹಾಶಯರಿಗೆ ಬೇರೊಬ್ಬರು ಹೇಳಬೇಕಾಗಿರಲಿಲ್ಲ. ಅದು ಹಾಗೆಯೇ ಆಯಿತು. ತಮ್ಮ ಮಾವ ಸಾಯಲಾಗಿ ನೆಲಹಿಡಿದಿದ್ದಾನೆಂದು ರಾಯರಿಗೆ ಸುದ್ದಿ ಬಂತು. ಕೇಳಿದ ಕೂಡಲೆ ರಾಯಬಾಬುಗಳು ಮಗನನ್ನು ಕರೆದುಕೊಂಡು ಪಾವನಕ್ಕೆ ಹೋದರು. ಆದರೆ ಅವರು ಊರು ಮುಟ್ಟುವುದರೊಳಗೇ ಮಾವ ಇಹಲೋಕ ಬಿಟ್ಟಿದ್ದ.

ಅವರ ಅಂತ್ಯಸಂಸ್ಕಾರ--ಕರ್ಮಗಳು ಅತಿ ವಿಜೃಂಭಣೆಯಿಂದ ಜರುಗಿದವು. ಬಿಗುವಾಗಿದ್ದ ಜಮೀನುದಾರಿಕೆಯ ಬೇಡಿಗಳು ಮತ್ತಷ್ಟು ಬಿಗಿಯಾದವು. ರಾಯಬಾಬುಗಳು ಹಳೆಯ, ಹೆಸರುಹೊಂದಿದ, ಹಣ್ಣುಬುದ್ಧಿಯ ವಕೀಲರು. ಅವರ ಪ್ರಬಲವಾದ ಆಳಿಕೆಯಿಂದ ಪ್ರಜೆಗಳು ಸಂತ್ರಸ್ತರಾಗಿಬಿಟ್ಟರು.

ಇನ್ನು ಸುರೇಂದ್ರನ ಮದುವೆಯಾಗುವುದು ಅಗತ್ಯ. ಮಧ್ಯಸ್ಥರ ಬರು ಹೋಗು ಮೊದಲಾಯಿತು. ಊರೊಳಗೆಲ್ಲ ಗೊಂದಲ. ಐವತ್ತು

ಹರದಾರಿಯೊಳಗೆ ಎಲ್ಲೆಲ್ಲಿ ಚೆಲುವ ಕನ್ನೆಯರಿದ್ದರೋ ಆ ಆ ಊರುಗಳಿಗೆಲ್ಲಾ ಮಧ್ಯಸ್ಥರು ಹೋದರು; ಹುಡುಗಿಯರ ತಂದೆತಾಯಿಗಳಿಗೆ ಏನೇನೋ ಆಸೆ ತೋರಿಸಿ ತೊಂದರೆಪಡಿಸತೊಡಗಿದರು. ಇದರೊಳಗೆ ನಾಲ್ಕಾರು ತಿಂಗಳುಗಳು ಕಳೆದವು. ಆಮೇಲೊಂದು ದಿನ—ಪ್ರಭಾತ ಸಮಯದಲ್ಲಿ ವಾಲಗ, ಕೊಂಬು, ಕಹಳೆ, ಕರಡಿಮಜಲು ಮೊದಲಾದವುಗಳ ವಾದನಕ್ಕೆ ಊರೆಲ್ಲ ಗದ್ದಲಿಸುತ್ತಿರಲು—ಸುರೇಂದ್ರ ವಿವಾಹಬದ್ಧನಾದ.

## ೮. ಜಮೀನುದಾರ ಸುರೇಂದ್ರ

ಹೆಚ್ಚುಕಡಿಮೆ ಅಯ್ದು ವರ್ಷಗಳು ಸಂದವು. ಈಗ ರಾಯಮಹಾಶಯರು ಉಳಿದಿಲ್ಲ, ಬ್ರಜಬಾಬು ಲಾಹಿರಿಯವರೂ ಹೊರಟುಹೋಗಿದ್ದಾರೆ. ಸುರೇಂದ್ರನ ಮಲತಾಯಿ ಕೈಲಾಸವಾಸಿಯಾದ ಗಂಡನ ಎಲ್ಲ ಸಂಪತ್ತಿಯನ್ನು ತೆಗೆದುಕೊಂಡು ಹೋಗಿ ತವರುಮನೆಯಲ್ಲಿ ಇರುತ್ತಿದ್ದಳು.

ಇತ್ತೀಚೆಗೆ ಮಂದಿಯಲ್ಲಿ ಸುರೇಂದ್ರನ ಹೆಸರು ಎಷ್ಟು ಒಳ್ಳೆಯದಾಗಿದ್ದಿತೋ ಅಷ್ಟೇ ಕೆಟ್ಟೂ ಇದ್ದಿತು. ಒಂದು ಗುಂಪಿನ ಜನ, ಇಂತಹ ಸ್ವಜನವತ್ಸಲ, ಇಂತಹ ಉದಾರ, ಇಂತಹ ನಿಷ್ಕಪಟಿ, ಇಂತಹ ಬಡವರ ದಯಾಳು ಜಮೀನುದಾರರು ಸಿಕ್ಕುವುದು ಅಪರೂಪ ಎನ್ನುತ್ತಿದ್ದರು. ಇಂತಹ ಕೆಡುಕನಾದ, ಪೀಡಕನಾದ ಜಮೀನುದಾರ ಈ ಭೂಮಿಯ ಮೇಲೆ ಎಂದೂ ಹುಟ್ಟಿರಲಿಕ್ಕಿಲ್ಲ ಎಂದು ಇನ್ನೊಂದು ಬಣದ ಜನ ಆಡಿಕೊಳ್ಳುತ್ತಿದ್ದರು.

ಈ ಎರಡು ಮಾತುಗಳೂ ದಿಟ ಎಂದು ನಮಗೆ ತೋರುತ್ತದೆ. ಸುರೇಂದ್ರನೆಂಬ ವ್ಯಕ್ತಿಯನ್ನು ತೆಗೆದುಕೊಂಡರೆ ಮೊದಲನೆಯ ಮಾತು

ಸತ್ಯ. ಜಮೀನುದಾರಿಕೆಯ ಆಡಳಿತಗಾರ ಮಥುರಾನಾಥ ಬಾಬುಗಳ ವಿಷಯ ತೆಗೆದುಕೊಂಡರೆ ಎರಡನೆಯ ಬಣ್ಣನೆ ಯಥಾರ್ಥವಾದುದು.

ಇದೀಗ ಸುರೇಂದ್ರನಾಥನ ಓಲಗದಲ್ಲಿ ಮಿತ್ರಮಂಡಲಿ ಹೆಚ್ಚಿದ್ದಿತು. ಅವರು ಒಳ್ಳೆಯ ಸೊಗಸಿನಿಂದ ತಮ್ಮ ಜೀವಿತವನ್ನು ಸಾರ್ಥಕ ಮಾಡಿಕೊಳ್ಳುತ್ತಿದ್ದರು. ಎಲೆಯಡಕೆ ತಂಬಾಕು, ಮದ್ಯಮಾಂಸ, ಮತ್ತಾವುದಕ್ಕೂ ಕೊರತೆಯೆಂಬುದಿರಲಿಲ್ಲ. ಬೇಡಿಯೆ ಪಡೆಯ ಬೇಕೆಂಬಂತೆಯೂ ಇದ್ದಿದ್ದಿಲ್ಲ.

ಈ ವಿಷಯದಲ್ಲಿ ಹುಮ್ಮಸದ ಹುರಿಯಾಳೆಂಪರೆ ಆಡಳಿತಗಾರ ಮಥುರಬಾಬು. ವೆಚ್ಚಿಸುವುದರಲ್ಲಿ ಅವನ ಕೈ ಬಲು ಸಡಿಲು. ಇದರಿಂದ ಜಮೀನುದಾರನಿಗೇನೂ ಹಾನಿಯಿರಲಿಲ್ಲ. ಅವನ ಆಡಳಿತದ ಕೈಗುಣದಿಂದ ಪ್ರಜೆಗಳೇ ಈ ವೆಚ್ಚವನ್ನು ಸಹಿಸುತ್ತಿದ್ದರು. ಮಥುರ ಬಾಬುವಿನ ಆಳಿಕೆಯೊಳಗೆ ಒಂದೇ ಒಂದು ಪೈ ಬರುವುದು ನಿಲ್ಲುತ್ತಿರಲಿಲ್ಲ. ಜನರನ್ನು ಸೆರೆಯಿಕ್ಕುವುದಕ್ಕೆ, ಮನೆಗಳನ್ನು ಕೆಡವಿಸುವುದಕ್ಕೆ, ಬೆಳೆಗಳನ್ನು ಸುಡಿಸುವುದಕ್ಕೆ ಯಾವುದಕ್ಕೂ ಹಿಂಜರಿಯುವವನಲ್ಲ ಮಥುರನಾಥ. ಅದೇಕೆ, ಅವನ್ನು ಮಾಡುವುದರಲ್ಲಿ ಅವನಿಗೆ ಬಲು ಹರುಪು.

ಪ್ರಜೆಗಳ ಗೋಳಾಟ, ಬೊಬ್ಬೆ ನಡುನಡುವೆ ಶಾಂತಿದೇವಿಯ ಕಿವಿಗೆ ಬೀಳುತ್ತಿತ್ತು. ಅವಳು ತನ್ನ ಸ್ವಾಮಿಗೆ, “ ನೀವು ಸ್ವತಃ ಜಮೀನುದಾರಿಕೆಯೊಳಗೆ ಮನಸು ಹಾಕದಿದ್ದರೆ, ಎಲ್ಲವೂ ಸುಟ್ಟು ಸೂರೆಯೆದ್ದು ಹೋದೀತು, ” ಎಂದು ಕಳಕಳಿಯಿಂದ ಹೇಳುತ್ತಿದ್ದಳು.

ಇದನ್ನು ಕೇಳಿ ಸುರೇಂದ್ರ ಬೆರಗಾಗುತ್ತಿದ್ದ. “ ಹೀಗೇನು ! ಹಾಗಾದರೆ ಇದೆಲ್ಲ ನಿಜವೇ ಏನು ? ” ಎಂದೆನ್ನುತ್ತಿದ್ದ.

“ ನಿಜ ಎಂತಹದು ಮತ್ತೆ ? ಊರ ಮಂದಿಯೆಲ್ಲಾ ಆಡಿಕೊಳ್ಳುತ್ತಿದ್ದಾರೆ. ನಿಮ್ಮ ಕಿವಿಯ ತನಕ ತಲುಪುವುದಿಲ್ಲ ಅದು, ಇಷ್ಟೆ. ಇಪ್ಪತ್ತುನಾಲ್ಕು ತಾಸೂ ಗೆಳೆಯರ ಕೂಟದಲ್ಲಿಯೇ ಕುಳಿದ್ದರೆ ಇದು

ಹೇಗೆ ಕೇಳಿಸೀತು ? ಇಂತಹ ಆಡಳಿತಗಾರರಿಂದ ಏನೂ ಪ್ರಯೋಜನ ವಿಲ್ಲ; ಕಿತ್ತೊಗೆಯಬೇಕು ಕೆಲಸದಿಂದ. "

ಸುರೇಂದ್ರ ಚಕಿತನಾದ. ಅವನಿಗೆ ಕೆಟ್ಟೆನಿಸಿತು. " ಹೀಗೋ ! ನಾಳೆಯಿಂದ ನಾನೇ ಎಲ್ಲವನ್ನು ನೋಡಿಕೊಳ್ಳುತ್ತೇನೆ, " ಎಂದ. ಹಾಗೆ ಮುಂದೆ ಕೆಲದಿನ ಸುರೇಂದ್ರನೇ ಜಮೀನುದಾರಿಕೆಯಲ್ಲಿ ಲಕ್ಷ್ಯ ಹಾಕಿದ.

ಮಥುರನಾಥನ ಸುತ್ತ ಬಂದಂತಾಯಿತು. ಅವನೊಳ್ಳೆಯ ಗಂಭೀರತೆಯಿಂದ " ಸುರೇಂದ್ರಬಾಬುಗಳೇ, ಈ ರೀತಿಯಿಂದ ಜಮೀನುದಾರಿಕೆಯ ರಕ್ಷಣೆಯಾಗಲಾರದು " ಎಂದ.

ಸುರೇಂದ್ರನಾಥ ನಸುನಕ್ಕು ನುಡಿದ: " ಬಡ ಪ್ರಜೆಗಳ ನೆತ್ತರನ್ನು ಹೀರಿ ಜಮೀನುದಾರಿಕೆಯನ್ನು ಕಾಯ್ದುಕೊಳ್ಳುವುದೇನು ಒಳ್ಳೆಯದೊ? "

" ಹಾಗಾದರೆ ನನಗೆ ಬಿಡವು ಕೊಡಿರಿ, ನನ್ನಿಷ್ಟಕ್ಕೆ ನಾನು ಹೋಗುತ್ತೇನೆ. "

ಈ ಮಾತಿಗೆ ಸುರೇಂದ್ರ ಕುಂಠಿತನಾದ. ಜಮೀನುದಾರಿಕೆಯ ಆಡಳಿತ ಮರಳಿ ಮುಂಚಿನಂತೆಯೆ ನಡೆಯಲಾರಂಭಿಸಿತು. ಸುರೇಂದ್ರನಾಥ ಆಬಳಿಕ ಮಿತ್ರಗೋಷ್ಠಿಯನ್ನು ಬಿಟ್ಟು ಕದಲದಾದ.

ಆಮೇಲೆ ಹೊಸದೊಂದು ವಿಘ್ನ ಉತ್ಪನ್ನವಾಯಿತು.

ಸುರೇಂದ್ರನಾಥ ಬಂಗಲೆಗೆ ಹೋಗಿದ್ದಾಗ ಕಲಕತ್ತೆಯಿಂದ ' ಎಲೋಕೇಶಿ ' ಎಂಬಾಕೆಯೊಬ್ಬಳು ಯಾವಳೋ ಅಲ್ಲಿ ಬಂದಿದ್ದಳು. ಕುಣಿತದಲ್ಲಿ ಮತ್ತು ಹಾಡಿಕೆಯಲ್ಲಿ ಅವಳು ಒಳ್ಳೆಯ ಜಾಣೆ. ನೋಡುವುದಕ್ಕಾದರೂ ಕಡಿಮೆಯ ಚೆಲುವೆಯಲ್ಲ. ಜೇನು ತೀರಿತೆಂದರೆ ನೊಣಗಳು ಹುಟ್ಟನ್ನು ಬಿಟ್ಟು ಹೋಗುವಂತೆ ಅವನ ಮಿತ್ರಮಂಡಳಿ ಅವನಿಂದ ಆಕೆಯ ಕಡೆಗೆ ಆಕರ್ಷಿತವಾಯಿತು. ಅವರ ಸೊಗಸು ಚೆಲ್ಲಾಟಗಳನ್ನಂತೂ ಏನು ಕೇಳೀರಿ !

ಸುರೇಂದ್ರನನ್ನೂ ಆ ಗೆಳೆಯರು ಆಕಡೆಯೇ ಸೆಳೆದುಕೊಂಡು ಹೋದರು. ಅಖಂಡ ಮೂರು ದಿನ ಶಾಂತಿಗೆ ಗಂಡನ ದರುಶನವೇ ಆಗಲಿಲ್ಲ. ನಾಲ್ಕನೆಯ ದಿವಸ ತನ್ನ ಸ್ವಾಮಿಯನ್ನು ಕಂಡಳು. " ಇಷ್ಟು ದಿನ ಎಲ್ಲಿದ್ದಿರಿ ? " ಎಂದು ಶಾಂತಿ ಕೇಳಿದಳು.

" ಬಂಗಲೆಯಲ್ಲಿ. "

" ಇಡೀ ಮೂರು ದಿನ ಮನೆಯ ಕಡೆ ಹಣಿಕಿಹಾಕದಂತಹದು ಅಲ್ಲಿತ್ತಾದರೂ ಏನು ? "

" ಹೀಗೇನು ! "

" ಏನಾದರೂ ಮಾತನಾಡಿರಿ. ನಿಮ್ಮ ' ಹೀಗೇನು ! ' ಬಿಡಿರಿ, ನಾನು ಎಲ್ಲವನ್ನೂ ಕೇಳಿದ್ದೇನೆ. " ಮಾತಾಡುತ್ತಾಡುತ್ತ ಶಾಂತಿ ಅಳ ತೊಡಗಿದಳು. " ಅಲ್ಲ, ನನ್ನನ್ನು ಕಾಲಿಂದ ದೂರ ಒದೆದುಬಿಡಲಿಕ್ಕೆ ನಾನು ಅಂತಹದೇನು ಮಾಡಿದ್ದೇನಾದೀತು ! "

" ಈವೊತ್ತೊ ಅದೇ ನಾ—- "

" ನನ್ನನ್ನೇಕೆ ಕಾಲಿನಿಂದ ಒದೆದುಬಿಟ್ಟಿರಿ ? ಇದಕ್ಕಿಂತ ಹೆಚ್ಚಿನ ಅಪಮಾನ ಇನ್ನೇನುಂಟು ? "

" ಹೀಗೇನು ! ಅವರೆಲ್ಲರೂ—- "

ಶಾಂತಿಗೆ ಮುಂದಿನ ಮಾತು ಕೇಳಿಸಲಿಲ್ಲ. ಅವಳು ಅಳುತ್ತ ಳುತ್ತ " ನೀವು ಪತಿಗಳು, ನೀವು ನನ್ನ ದೇವರು, ನನ್ನ ಇಹಲೋಕ ಪರ ಲೋಕ ನೀವೇ. ನಾನು ಮಾತ್ರ ನಿಮಗೆ ಏನೇನೂ ಅಲ್ಲ. ಒಂದು ದಿನ ಕೂಡ ನಿಮ್ಮ ಮನಸನ್ನು ಆಕರ್ಷಿಸಲು ಆಗಲಿಲ್ಲ. ಈ ಯಾತನೆ ಯನ್ನು ನಾನು ನಿಮ್ಮೆದುರಿನಲ್ಲಿ ಆಡಿತೋರಿಸಬಲ್ಲೆನೆ ? ನಿಮಗೆ ಖೇದವಾದೀತು, ನೀವು ಮನಸಿಗೆ ಹಚ್ಚಿಕೊಂಡೀರಿ ಎಂದು ನಾನು ಎಂದೂ ಮಾತನಾಡುವುದಿಲ್ಲ. ''

" ಶಾಂತೀ, ಏಕೆ ಅಳುತ್ತೀ? "

" ಏಕೆ ಅಳುತ್ತೀ ? ಅಂತರ್ಯಾಮಿಯಾದ ದೇವರಿಗೊಬ್ಬನಿಗೇ ಗೊತ್ತು. ನೀವು ಉಪೇಕ್ಷಿಸುತ್ತಿಲ್ಲ ಎಂಬುದನ್ನಾದರೂ ನಾನು ಬಲ್ಲೆ. ನಿಮಗೆ ಯಾವ ವ್ಯಥೆಯುಂಟೆಂಬುದೂ ನನಗೆ ತಿಳಿಯುತ್ತದೆ. ನೀವಾದರೂ ಏನು ಮಾಡುವಿರಿ ? "

ಶಾಂತಿಯ ಕಣ್ಣುಗಳನ್ನು ಒರಸಿ ಸುರೇಂದ್ರನೆಂದ: " ನನಗಿಂದು ದುಃಖವಾಗುತ್ತಿದ್ದರೂ ಅಡ್ಡಿಯಿಲ್ಲ. ನಿನಗಿದ್ದ ದುಃಖ ಯಾವುದೆಂದು ತಿಳಿದರೆ— "

ಸುರೇಂದ್ರ ಅವಳನ್ನು ಬದಿಯಲ್ಲಿ ಸೆಳೆದುಕೊಂಡ. ಕೈಗಳಿಂದ ಆಕೆಯ ಕಣ್ಣುಗಳನ್ನು ಮತ್ತೆ ಒರಸಿ, " ಅದಕ್ಕೆ ಉಪಾಯವೇನು ? " ಎಂದ.

" ಇದಕ್ಕೆ ಯಾರು ಉತ್ತರ ಕೊಡಬೇಕು ? "

ಶಾಂತಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಬಹಳ ಹೊತ್ತಿನ ಬಳಿಕ ಅವಳು " ನಿಮ್ಮ ಪ್ರಕೃತಿ ಇತ್ತೀಚೆಗೆ ಚೆನ್ನಾಗಿಲ್ಲ " ಎಂದಳು.

" ಇತ್ತೀಚೆಗೆ ಏಕೆ, ಈಗ ಅಯ್ದು ವರ್ಷಗಳಿಂದ ನೆಟ್ಟಗಿಲ್ಲ. ಕಲಕತ್ತೆಯಲ್ಲಿ ಬಂಡಿಯ ಅಡಿಯಲ್ಲಿ ಸಿಕ್ಕು ಎದೆಗೆ ಪಕ್ಕಡಿಗೆ ಪೆಟ್ಟು ತಾಕಿ ಒಂದು ತಿಂಗಳು ಹಾಸಿಗೆ ಹಿಡಿದಿದ್ದೆ. ಅಂದಿನಿಂದ ನನ್ನ ಪ್ರಕೃತಿ ನೆಟ್ಟಗಿಲ್ಲ. ಆ ವ್ಯಥೆ ಏತರಿಂದಲೂ ಹೋಗಲಿಲ್ಲ. ಯಾವಾಗಾದರೂ ನನ್ನದು ನನಗೇ ಆಶ್ಚರ್ಯವಾಗಿ ತೋರುತ್ತದೆ, ನಾನು ಬದುಕಿದೆ ಹೇಗೋ ಎಂದು. "

ಶಾಂತಿ ಗಂಡನ ಎದೆಯ ಮೇಲೆ ಕೈಯಿಟ್ಟು ಹೇಳಿದಳು: " ನಡೆಯಿರಿ. ನಾವು ಕಲಕತ್ತೆಗೆ ಹೋಗುವ. ಅಲ್ಲಿ ಒಳ್ಳೊಳ್ಳೆಯ ಡಾಕ್ತರರಿದ್ದಾರೆ. "

ಸುರೇಂದ್ರ ಪ್ರಸನ್ನನಾಗಿ ನುಡಿದ: " ನಡೆ ಹಾಗಾದರೆ. ಅಲ್ಲಿ ಅಕ್ಕಾಜಿಯೂ ಇದ್ದಾಳೆ ! "

" ನಿಮ್ಮ ಅಕ್ಕಾಜಿಯನ್ನು ನೋಡಬೇಕೆಂದು ನನಗೂ ಬಹಳ ಇಚ್ಛೆಯಿದೆ. ಅವರನ್ನು ಕರೆತರುತ್ತೀರೇನು ? "

" ಹೊ, ಕರೆತರುವೆ. " ಸ್ವಲ್ಪ ವಿಚಾರ ಮಾಡಿ ಮತ್ತೆ ನುಡಿದ " ನಿಶ್ಚಯವಾಗಿ ಬರುತ್ತಾಳೆ, ನಾನು ಸಾಯುತ್ತಲಿದ್ದೇನೆ ಎಂದು ತಿಳಿದರೆ--- "

ಶಾಂತಿ ಅವನ ಬಾಯಿಯಮೇಲೆ ಕೈಯಿಟ್ಟು, " ನಿಮ್ಮ ಕಾಲಿಗೆ ಬೀಳುತ್ತೇನೆ, ಇಂತಹ ಮಾತು ಆಡಬೇಡಿರಿ. ಅವರು ಇಲ್ಲಿಗೆ ಬಂದರೆ ನನ್ನ ದುಃಖವೆಲ್ಲ ಹೋಗುವುದು, " ಎಂದಳು.

ಶಾಂತಿ ಉತ್ಸಾಹದಿಂದ ಪ್ರಸನ್ನಳಾಗಿದ್ದಳು. ಒಂದು ಮಾತು ಹೇಳಿದಳವಳು. ಅದರ ಪರಿಣಾಮವೇನು ಸುರೇಂದ್ರನ ಮೇಲಾಗ ಲಿಲ್ಲ. ಅದು ಅವನಿಗೆ ತಿಳಿಯಲಿಲ್ಲ. ಅವಳು ಆಡಿದ ಮಾತಿನಿಂದಲೇ ಅವನಿಗೆ ಆನಂದವಾಯಿತು. " ನೀನೇ ಹೋಗಿ ಅಕ್ಕಾಜಿಯನ್ನು ಕರೆದುಕೊಂಡು ಬಾ. ಏನು, ಹೇಗೆ ಮಾಡುತ್ತೀ ? "

ಶಾಂತಿ ತಲೆಹಾಕಿ ತನ್ನ ಒಪ್ಪಿಗೆಯನ್ನು ಸೂಚಿಸಿದಳು.

" ಅವರು ಬಂದರೆ ನೋಡಿಕೊಳ್ಳುವರು. ನನ್ನ ಕಷ್ಟವಾದರೂ ತಪ್ಪೀತು." ಹೇಳುತ್ತಿದ್ದಂತೆ ಅವಳ ಕಣ್ಣುಗಳಲ್ಲಿ ನೀರು ಹರಿಯಿತು !

ಮರುದಿನ ತೊತ್ತಿನ ಕೂಡ ಮಥುರಬಾಬುವಿಗೆ ಹೇಳಿಕಳುಹಿದಳು: ಬಂಗಲೆಯಲ್ಲಿ ಅದಾವಳನ್ನೋ ತಂದಿರಿಸಿದ್ದೀರಲ್ಲ— ಅವಳನ್ನು ಈಗಿಂದೀಗಳೇ ಹೊರಹೊರಡಿಸಿರಿ, ಇಲ್ಲವಾದರೆ ನಿಮ್ಮ ಕೆಲಸ ಹೋದೀತು, ಎಂದು.

ಹಾಗೆಯೆ ತನ್ನ ಗಂಡನಿಗೂ ಸಾರಿಹೇಳಿದಳು: " ಏನೇ ಇರಲಿ, ನೀವಿನ್ನು ಮನೆಬಿಟ್ಟು ಹೋದಿರೆಂದರೆ ನಾನು ತಲೆಯೊಡೆದುಕೊಂಡು ಜೀವಕೊಡುತ್ತೇನೆ. "

" ಹೀಗೇನು! ಆದರೆ ಆ ಮಂದಿ---"

" ನಾನು ಆ ಮಂದಿಯ ವ್ಯವಸ್ಥೆ ಮಾಡುವೆ " ಎಂದು ಶಾಂತಿ ದಾಸಿಯನ್ನು ಪುನಃ ಕೂಗಿ ಕರೆದು, " ಆ ದುಷ್ಟ ಜನರು ನಮ್ಮ ಮನೆಯೊಳಗೆ ಬಂದುಗಿಂದಾರು, ಜೋಕೆ, ಎಂದು ಕಾವಲುಗಾರರಿಗೆ ತಿಳಿಸು '' ಎಂದು ಆಜ್ಞಾಪಿಸಿದಳು.

ಏನೂ ಉಪಾಯಗಾಣದೆ ಮಥುರಬಾಬು ' ಎಲೋಕೇಶಿ 'ಯನ್ನು ಊರಿಂದ ಹೊರಡಿಸಿದ. ಗೆಳೆಯರ ತಂಡ ಅತ್ತಿತ್ತ ಚದರಿಹೋಯಿತು. ಆ ಬಳಿಕ ಅವನು ಜಹಾಗಿರಿಯ ಕಡೆ ಲಕ್ಷ್ಯ ಹಾಕತೊಡಗಿದ.

ಸುರೇಂಪ್ರನಾಥ ಕಲಕತ್ತೆಗೆ ಹೋಗಬೇಕಾಗಲಿಲ್ಲ. ಎದೆನೋವು ತನಗೆ ತಾನೇ ಒಂದಿಷ್ಟು ಕಡಿಮೆಯಾಯಿತು. ಕಲಕತ್ತೆಗೆ ಹೋಗಬೇಕೆಂಬ ಹುರುಪು ಶಾಂತಿಗೂ ಮೊದಲಿನಂತೆ ಉಳಿಯಲಿಲ್ಲ ಇಲ್ಲಿದ್ದೇ ತನ್ನ ಸ್ವಾಮಿಗೆ ಏನೇನು ಉಪಾಯಗಳನ್ನು ಮಾಡಬೇಕೋ ಅವನ್ನೆಲ್ಲ ಮಾಡುವುದರಲ್ಲಿ ತೊಡಗಿದಳು. ಕಲಕತ್ತೆಯಿಂದ ಒಬ್ಬ ಡಾಕ್ಟರನ್ನು ಕರೆಯಿಸಿಕೊಂಡು, ಸುರೇಂದ್ರನ ಪ್ರಕೃತಿಯನ್ನು ತೋರಿಸಿದಳು. ಇನ್ನು ಕೆಲವು ತಜ್ಞರೂ ಅವನನ್ನು ಪರೀಕ್ಷಿಸಿದರು. ಎಲ್ಲ ವಿಷಯವನ್ನು ಕೇಳಿಕೊಂಡು ತಿಳಿದುಕೊಂಡರು; ಔಷಧದ ಯೋಜನೆ--ಮಾಡಿದರು. ' ಇವರ ಹೃದಯ ಶಾರೀರಿಕವಾಗಲಿ ಮಾನಸಿಕವಾಗಲಿ ಯಾವ ಶ್ರಮವನ್ನೂ ತಡೆದುಕೊಳ್ಳುವ ಸ್ಥಿತಿಯಲ್ಲಿಲ್ಲ, ಜೋಕೆಯಿಂದ ಇರಬೇಕು ' ಎಂದು ಸಾರಿ ಹೇಳಿದರು.

ಆಡಳಿತಗಾರ ಬಾಬುವಿಗೆ ಒಳ್ಳೆಯ ಸಂಧಿ ಸಿಕ್ಕಂತಾಯಿತು. ಅವನ ಆಳಿಕೆ ಕಡುತರವಾಯಿತು. ಊರೂರಲ್ಲಿ ಹಾಹಾಕಾರ ಎದ್ದಿತು. ಆಗಾಗ ಆ ಗೋಳು ಶಾಂತಿಯ ಕಿವಿಗೆ ತಲುಪುತ್ತಿತ್ತು; ಗಂಡನಿಗೆ ಅದನ್ನು ಹೇಳಲು ಅಂಜಿಕೊಂಡು ಸುಮ್ಮನಿರುತ್ತಿದ್ದಳು.

## ೯. ಅಣ್ಣನ ಮನೆಯಲ್ಲಿ ಅಕ್ಕಾಜಿ

ಕಲಕತ್ತೆಯ ವಾಡೆಯಲ್ಲಿ ಬ್ರಜಬಾಬುಗಳು ಈಗ ಇಲ್ಲ. ಅವರ ಸ್ಥಳದಲ್ಲಿ ಶಿವಚಂದ್ರ ಒಡೆಯನಾಗಿದ್ದಾನೆ. ಮಾಧವಿ ಈಗಲೂ ಆ

ಮನೆಯಲ್ಲಿಯೆ ಇದ್ದಾಳೆ. ಆದರೆ ಮನೆಯ ಆಡಳಿತದ ಸೂತ್ರಗಳು ಅವಳ ಕೈಯಿಂದ ಹೋಗಿವೆ. ಅವನ್ನು ಹೊಸ ಗೃಹಿಣಿ ಹಿಡಿದಿದ್ದಾಳೆ. ಅಣ್ಣ ಶಿವಚಂದ್ರನಿಗೆ ಆಕೆಯಲ್ಲಿ ಅಕ್ಕರತೆ ಉಂಟು, ಆದರ ಉಂಟು. ಆದರೂ ಇನ್ನು ಮುಂದೆ ಅಲ್ಲಿರುವುದಕ್ಕೆ ಮಾಧವಿಗೆ ಮನಸಿಲ್ಲ. ವಾಡೆಯಲ್ಲಿಯ ಆಳುತೊತ್ತುಗಳು, ಸರಕಾರ, ಕರಣಿಕರು, ಎಲ್ಲರೂ ಆಕೆಯನ್ನು ' ಅಕ್ಕಾಜಿ ' ಎಂದೇ ಈಗಲೂ ಕರೆಯುತ್ತಾರೆ. ಬೊಕ್ಕಸದ ಕೀಲಿಕೈ ಮಾತ್ರ ಬೇರೆಯವರ ಕೈಯಲ್ಲಿ ಎಂಬುದು ಅವರಿಗೆ ತಿಳಿದಿವೆ. ಹೀಗಿದ್ದರೂ ಶಿವಚಂದ್ರನ ಹೆಂಡತಿ ಮಾಧವಿಯನ್ನು ಕಡೆಗಣಿಸುತ್ತಿದ್ದಳೆಂದಾಗಲಿ ಅನಾದರಿಸುತ್ತಿದ್ದಳೆಂದಾಗಲಿ ಅಲ್ಲ. ಆದರೆ ಅತ್ತಿಗೆಯ ವರ್ತನದ ಅರ್ಥ ಮಾಧವಿಗಾಗಿದೆ: ಅವಳನ್ನು ಕೇಳದೆ ತಾನೇನಾದರೂ ಮಾಡುವುದು ಅವಳಿಗೆ ಸೇರುವುದಿಲ್ಲ ಎಂದು.

ಹಿಂದೆ ತಂದೆ ಯಜಮಾನನಾಗಿದ್ದ; ಇಂದು ಅಣ್ಣನ ಕಾಲ ಆರಂಭವಾಗಿದೆ. ಮನೆಯ ಕೆಲಸಬೊಗಸೆಗಳಲ್ಲಿಯೂ ಬದಲಿಕೆಯಾಗಿದೆ. ಮಾಧವಿಯ ವಿಷಯದಲ್ಲಿ ಹಿಂದಕ್ಕಿದ್ದಂತೆ ಈಗಲೂ ಆದರವಿದೆ. ಆದರೆ ಆಗ ಆದರ ಔದಾರ್ಯದಿಂದ ಒಡಗೂಡಿತ್ತು, ಈಗ ಅದಿಲ್ಲ. ತಂದೆಯ ಆದರದಲ್ಲಿ ಆ ಕುಟುಂಬದ ಸರ್ವಸ್ವ ಅವಳೇ ಆಗಿದ್ದಳು; ಅಣ್ಣನ ಆದರದಲ್ಲಿ ಕುಟುಂಬದೊಳಗಿನ ಒಬ್ಬ ಸಾಮಾನ್ಯ ಸದಸ್ಯಳಾಗಿದ್ದಾಳೆ.

ಇಲ್ಲಿ ನಾವು ಶಿವಚಂದ್ರನಿಗಾಗಲಿ ಅವನ ಹೆಂಡತಿಗಾಗಲಿ ದೋಷ ಹೊರಿಸುತ್ತೇವೆಂದೋ, ಪರ್ಯಾಯದಿಂದ ಅವರನ್ನು ಆಡಿಕೊಳ್ಳುತ್ತೇವೆಂದೋ ನಿಮಗೆ ಯಾರಿಗಾದರೂ ಎನಿಸುತ್ತಿದ್ದರೆ, ಅದು ತಪ್ಪು. ಸಂಸಾರದಲ್ಲಿ ಇಂದಿನವರೆಗೆ ನಡೆದುಬಂದಿರುವ ನಿಯಮ, ರೀತಿ ನೀತಿ ಇವುಗಳನ್ನು ಬರೀ ಹೇಳಿಕೊಂಡು ಹೋಗುತ್ತಿದ್ದೇವೆ ಅಷ್ಟೆ. ಮಾಧವಿಯ ಹಣೆಬರೆಹವೇ ಕೆಟ್ಟದು. ಅದರಲ್ಲಿ ಯಾರದೂ ಏನೂ ತಪ್ಪಿಲ್ಲ. ಆದರೆ ಅದು ಹಾಗಿದೆಯೆಂದು ತಮ್ಮ ಅಧಿಕಾರವನ್ನು ಬಿಡುತ್ತಾರೆ ಯಾರು ? ಗಂಡನ ಆಸ್ತಿಪಾಸ್ತಿಯ ಮೇಲೆ ಹೆಂಡತಿಯ ಅಧಿಕಾರವಿಲ್ಲ ಎಂದು ಯಾರು ಅಲ್ಲ[illegible] ಹೆಂಡ

ತಿಗೆ ಈ ಸಣ್ಣ ವಿಷಯವೂ ಗೊತ್ತಿಲ್ಲದಿದ್ದೀತೆ ? ಶಿವಚಂದ್ರ ಮಾಧವಿಗೆ ಅಣ್ಣ, ನಿಜ, ಆದರೆ ಅವಳಿಗೆ ಅವನ ಹೆಂಡತಿ ಯಾರು ? ಪರರಿಗಾಗಿ ಯಾರು ತಮ್ಮ ಅಧಿಕಾರವನ್ನು ಬಿಡುವರು ? ಮಾಧವಿಗೆ ಇದೆಲ್ಲ ತಿಳಿಯುತ್ತಿತ್ತು. ಅತ್ತಿಗೆ ಸಣ್ಣಾಕೆಯಿದ್ದಾಗ, ಬ್ರಜಬಾಬುಗಳು ಬದುಕಿದ್ದಾಗ ಮಾಧವಿ ಅವಳನ್ನೂ ಪ್ರಮೀಲೆಯನ್ನೂ ಎರಡು ಕಣ್ಣುಗಳಿಂದ ಕಾಣುತ್ತಿರಲಿಲ್ಲ. ಆದರೆ ಈಗಿನ ಮಾತು ಬೇರೆ. ಅವಳು ಮಾನವಂತೆಯೆಂದು ಎಲ್ಲರಿಗಿಂತ ನಮ್ರಳು; ಕೇಳಿಕೊಳ್ಳುವ ರೂಢಿಯೇ ಇಲ್ಲವೆಂದು ಅವಳು ಮಾತಾಡುತ್ತಲೇ ಇರಲಿಲ್ಲ. ತನ್ನದು ಯಾವುದೂ ನಡೆಯದಿರುವಲ್ಲಿ ತಲೆಯೆತ್ತಿಕೊಂಡು ನಡೆಯುವುದು ಅವಳಿಂದ ಆಗದ ಮಾತು. ಏನು ದುಃಖವಾದರೂ ಮಾಧವಿ ಸುಮ್ಮನೆ ನುಂಗಿಕೊಳ್ಳುತ್ತಿದ್ದಳು; ಅಣ್ಣನ ಮುಂದೆ ಉಸಿರೆತ್ತುತ್ತಿರಲಿಲ್ಲ.

ವಾದಿಯ ಬಲದಿಂದ ತನ್ನ ಅಧಿಕಾರವನ್ನು ಗಟ್ಟಿಯಾಗಿರಿಸಿಕೊಳ್ಳಲೆಳಸುವುದು ಮಾಧವಿಗೆ ಎಂದೂ ಸೇರದು. ಸಾಮಾನ್ಯ ಹೆಂಗುಸರ ಹಾಗೆ ಕಿಟಿಕಿಟಿ ಮಾಡುವುದಾಗಲಿ ಜಗಳಾಡುವುದಾಗಲಿ ಅವಳಿಗೆ ಬಲು ಹೇಸಿಕೆ.

" ಅಣ್ಣಾ, ನಾನು ನನ್ನ ಅತ್ತೆಯ ಮನೆಗೆ ಹೋಗುತ್ತೇನೆ " ಎಂದು ಮಾಧವಿ ಶಿವಚಂದ್ರನನ್ನು ಕರೆದು ನುಡಿದಳು.

ಶಿವಚಂದ್ರನಿಗೆ ವಿಸ್ಮಯವೆನಿಸಿತು. " ಅದೇಕೆ ಮಾಧವಿ ? ಅಲ್ಲಿ ಇದ್ದಾರೆಯಾದರೂ ಯಾರು ? " ಎಂದ.

" ಅತ್ತೆಯವರ ಹತ್ತಿರ ಕಾಶಿಯೊಳಗೆ ಅವರ ತಂಗಿಯ ಮಗ ಇದ್ದಾನೆ. ಅವನನ್ನು ಕರೆದುಕೊಂಡು ಹೋಗಿ ಇರಬೇಕೆನ್ನುತ್ತೇನೆ. "

ಪಾವನ ಜಿಲ್ಲೆಯ ಗೋಲಾಗ್ರಾಮದಲ್ಲಿ ಮಾಧವಿಯ ಅತ್ತೆಮನೆ. ಶಿವಚಂದ್ರ ಕಿಂಚಿತ್ ನಕ್ಕು, " ಹಾಗೆಂದು ಯಾರು ಹೇಳಿದರು ? ಅಲ್ಲಿ ನಿನಗೆ ಬಹಳ ಕಷ್ಟವಾದೀತು " ಎಂದ.

" ಏನು ಕಷ್ಟ ಅಣ್ಣಾ ? ಮನೆ ಈವೊತ್ತೇ ಏನು ಬೀಳುವ ಹಾಗಿಲ್ಲ, ಎಂಟು ಹತ್ತು ಬಿಘೆ ಭೂಮಿಯಿದೆ. ಒಬ್ಬ ವಿಧವೆಗೆ ಅಷ್ಟು ಸಾಕಾಗದೇನು ? "

" ಹೆಚ್ಚುಕಡಿಮೆಯ ವಿಷಯವಲ್ಲ, ದುಡ್ಡಿನ ಚಿಂತೆಯೂ ಇಲ್ಲ. ಆದರೆ ಅಲ್ಲಿ ನಿನಗೆ ಕಷ್ಟವಾಗುವುದು ಎಂದು ಹೇಳಿದೆ. "

" ಕಷ್ಟ ಏನೂ ಇಲ್ಲ. "

ಶಿವಚಂದ್ರನಿಗೆ ಕೆಟ್ಟೆನಿಸಿತು. " ಅಲ್ಲ, ನೀನು ಏಕೆ ಹೋಗ ಬೇಕೆನ್ನುತ್ತಿ ? ನನಗೆ ಎಲ್ಲವನ್ನೂ ಸ್ಪಷ್ಟವಾಗಿ ಇಪ್ಪದ್ದು ಹೇಳಲ್ಲ. ನಾನೆಲ್ಲ ತಕ್ಕ ನಿರ್ಬಂಧ ಮಾಡುತ್ತೇನೆ " ಎಂದು ನುಡಿದ.

ಹೆಂಡತಿಯ ಬಾಯಿಯಿಂದ ತಂಗಿಯ ಬಗ್ಗೆ ಕೆಲವು ದೂರು ಗಳನ್ನು ಕೇಳಿದ್ದ. ಅದೀಗ ಅವನಿಗೆ ನೆನವಾಗಿರಬಹುದೆಂದು ತೋರು ತ್ತದೆ.

ನಾಚಿಕೆಯಿಂದ ಮಾಧವಿಯ ಮುಖ ಕೆಂಪಾಯಿತು. " ಅಣ್ಣಾ, ನಿನ್ನ ಮನಸಿನೊಳಗೆ ಇಂತಹ ವಿಚಾರ ಏಕೆ ಬರುತ್ತದಣ್ಣ? ನಾನೇನು ಜಗ ಳವಾಡಿ ಮಬಿಟ್ಟು ಹೋಗುತ್ತಿದ್ದೇನೆಯೆ ?" ಎಂದು ಅವಳು ನುಡಿದಳು.

ಶಿವಚಂದ್ರನೂ ನಾಚಿಕೊಂಡ. ಕೂಡಲೆ ಹೇಳಿದ: " ಛೆ ಛೆ, ಹಾಗಲ್ಲ. ನಾನೆಲ್ಲಿ ಹಾಗೆಂದೆ ? ಈ ಮನೆ ಈಗಿಷ್ಟು ದಿವಸ ನಿನ್ನದೇ ಆಗಿದೆ. ಈಗೇಕೆ ನಿನಗೆ ಹೋಗಬೇಕೆಂದು ಎನಿಸುತ್ತಿದೆ ? "

ಇಬ್ಬರ ನೆನಪಿನಲ್ಲಿಯೂ ಬ್ರಜಬಾಬುಗಳು ಪ್ರವೇಶಿಸಿದರು, ಇಬ್ಬರ ಕಣ್ಣುಗಳಲ್ಲಿಯೂ ನೀರು ಹೊರಹೊರಟಿತು. ಕಣ್ಣೊರಸಿ ಕೊಂಡು " ಅದು ಹೋಗಲಿ ಬಿಡು. ನಿನ್ನ ಮಗನ ಮುಂಜಿಗೆ ನನ್ನ ಕರೆಯಲಿಕ್ಕೆ ಬಾ. ಈವೊತ್ತು ಹೋಗುತ್ತೇನೆ " ಎಂದಳು.

" ಅದೋ ಎಂಟು ಹತ್ತು ವರ್ಷಗಳ ಮುಂದಿನ ಮಾತು ! "

" ಬದುಕಿ ಉಳಿದರೆ ಬರುತ್ತೇನೆ. "

ಏನೇನು ಹೇಳಿದರೂ ಮಾಧವಿ ಅಲ್ಲಿ ಇರಲಿಕ್ಕೆ ಹೂಂ ಎನ್ನಲಿಲ್ಲ. ಅವಳು ಹೊರಡುವ ಏರ್ಪಾಡಿನಲ್ಲಿ ತೊಡಗಿದಳು. ತನ್ನ ಅತ್ತಿಗೆಗೆ ಸಂಸಾರವನ್ನು ಒಪ್ಪಿಸಿದಳು. ಆಳು ತೊತ್ತುಗಳನ್ನು ಕರೆದು ಹರಸಿದಳು. ಹೊರಡುವ ದಿನ ಶಿವಚಂದ್ರ ತಂಗಿಯ ಹತ್ತಿರ ಬಂದ. ಅವನ ಕಣ್ಣಲ್ಲಿ ನೀರು ತುಂಬಿತ್ತು. " ಮಾಧವೀ, ನಿನ್ನ ಅಣ್ಣ ನಿನಗೆಂದೂ ಏನೂ ಆಡಿಲ್ಲವಷ್ಟೇ ! " ಎಂದ.

ಮಾಧವಿ ನಕ್ಕಳು. " ಇದೇನಣ್ಣ, ಹೀಗೇಕೆನ್ನುತ್ತಿ ? "

" ಹಾಗಲ್ಲ, ಎಂದಾದರೂ ಸ್ವಾಧೀನ ತಪ್ಪಿ ಬಾಯಿಂದ ಮಾತು ಜಾರಿದ್ದರೆ— "

" ಛೀ. ಅದೇನಿಲ್ಲ ಅಣ್ಣಾ; ನಿಜವಾಗಿ ಅಣ್ಣ. "

" ಹಾಗಾದರೆ ಹೋಗಿಬಾ, ತಂಗೀ. ನಿಮ್ಮ ಮನೆಗೆ ನೀನು ಹೋಗುವುದಕ್ಕೆ ನಾನೇನು ಈಗ ಅಡ್ಡಿ ಮಾಡುವುದಿಲ್ಲ. "

## ೧೦. ಸುರೇಂದ್ರನ ಜಮೀನುದಾರಿಕೆಯಲ್ಲಿ ಅಕ್ಕಾಜಿ

ಮಾಧವಿ ಮುಂಚೆ ಕಾಶಿಗೆ ಹೋದಳು. ಅತ್ತೆಯ ತಂಗಿಯ ಮಗನನ್ನು ಕರೆದುಕೊಂಡು ಅಲ್ಲಿಂದ ತಮ್ಮ ಗೋಲಾಗ್ರಾಮಕ್ಕೆ ಹೋದಳು. ಏಳು ವರುಷಗಳ ತರುವಾಯ ಒಂದು ದಿನ ಅವಳು ತನ್ನ ಗಂಡನ ಮನೆಯನ್ನು ಪ್ರವೇಶಿಸಿದಳು.

ಗೋಲಾಗ್ರಾಮದ ಚಟರ್ಜಿಮಹಾಶಯನಿಗೆ ಮಾಧವಿಯ ಬರವು ಒಂದು ಕುತ್ತವೇ ಆಯಿತು. ಚಟರ್ಜಿ ಜೋಗೇಂದ್ರನ ತಂದೆಯ ಪರಮ ಸ್ನೇಹಿತ. ಅದಕ್ಕೇ ತನ್ನ ಕೊನೆಗಾಲದಲ್ಲಿ ಜೋಗೇಂದ್ರ ತನ್ನ ಇದ್ದ ಬಿದ್ದ ಚರಾಚರ ಆಸ್ತಿಯನ್ನೆಲ್ಲ ಆತನಿಗೆ ಒಪ್ಪಿಸಿದ್ದ. ಜೋಗೇಂದ್ರನಾಥ ಇದ್ದಾಗಲೂ ಅವನ ಹೊಲಮನೆಗಳನ್ನು ಚಟರ್ಜಿಯೇ ನೋಡಿ

ಕೊಳ್ಳುತ್ತಿದ್ದ. ಆ ಕಡೆ ಜೋಗೇಂದ್ರ ಅಷ್ಟು ಗಮನ ಕೊಡುತ್ತಿರಲಿಲ್ಲ. ತನ್ನ ಮಾವನ ವಿಪುಲ ಆಸ್ತಿಯನ್ನು ಕಂಡೋ ಏನೋ, ತನ್ನ ಪಿತ್ರಾರ್ಜಿತ ವಾದ ಕಿರುಕುಳ ಆಸ್ತಿಯೆಂದರೆ ಅವನಿಗೆ ಲಕ್ಷ್ಯವೇ ಇಲ್ಲ. ಅವನು ತೀರಿಕೊಂಡ ಬಳಿಕಂತೂ ಚಟರ್ಜಿಮಹಾಶಯ ಆ ಆಸ್ತಿಯನ್ನು ತನ್ನ ದಾಗಿಯೇ ಉಪಭೋಗಿಸುತ್ತಿದ್ದ. ವಿಧವೆಯಾದ ಮಾಧವಿ ಇಷ್ಟು ದಿನಗಳ ಮೇಲೆ ತಿರುಗಿ ಬಂದುದರಿಂದ ಅವನ ನಿಯಮಬದ್ಧ ಸಂಸಾರ ದಲ್ಲಿ ಬಹಳ ಗಲಿಬಿಲಿಯುಂಟಾಯಿತು. ಮಾಧವಿ ಮಹಾ ಅವಿಚಾರ ಮಾಡಿದಳೆಂದೇ ಚಟರ್ಜಿಯ ಅಭಿಪ್ರಾಯ. ಅವಳು ಕೇವಲ ದುರ್ಬುದ್ಧಿಯಿಂದಲೇ ಹೀಗೆ ಮಾಡುತ್ತಿದ್ದಾಳೆಂದು ಅವನು ನಿಶ್ಚಿತ ವಾಗಿ ತಿಳಿದುಕೊಂಡ. ಅತ್ಯಂತವಾದ ವೈರಾಗ್ಯದ ಸೋಗು ಹಾಕಿ ಕೊಂಡು ಅವನು ಮಾಧವಿಯ ಬಳಿಗೆ ಬಂದು ಹೇಳಿದ: " ತಂಗೀ, ನಿಮ್ಮ ಎರಡು ಬಿಘೆ ಹೊಲವಿತ್ತಲ್ಲ, ಅದು ಹತ್ತು ವರ್ಷಗಳ ಕಂದಾಯ ನಿಂತುದಕ್ಕಾಗಿ ಹರಾಜಿಗೆ ಹೊರಟಿದೆ. "

ಮಾಧವಿ ಸಂತೋಷಕುಮಾರನನ್ನು ( ಅವಳು ಸಂಗಡ ಕರೆದು ಕೊಂಡು ಬಂದಿದ್ದ ಹುಡುಗನನ್ನು ) ಕರೆದಳು. " ನಿಂತ ತೆರಿಗೆಯ ಬಗ್ಗೆ ಯೋಚನೆ ಬೇಡ. ಇಕಾ, ನೂರು ರೂಪಾಯಿ ಕೊಟ್ಟಿದ್ದಾರೆ " ಎಂದು ಹೇಳಿ ಕೊಡಲು ಹೇಳಿ ಕಳುಹಿದಳು. ಅರ್ಥಾತ್, ಈ ನೂರು ರೂಪಾಯಿಗಳಿಂದ ಚಟರ್ಜಿಮಹಾಶಯನಿಗೆ ತನ್ನ ಬೇರೆ ಕೆಲಸಕ್ಕೆ ಉಪಯೋಗವಾಯಿತು.

ಹಾಗೆ ಸಹಜವಾಗಿ ಬಿಟ್ಟುಬಿಡುವ ಹೆಣ್ಣಲ್ಲ ಮಾಧವಿ. ಸಂತೋಷ ಕುಮಾರನ ಮುಖಾಂತರ ಚಟರ್ಜಿಗೆ ನಿರೋಪವನ್ನು ಕಳುಹಿದಳು: " ಕೇವಲ ಎರಡೇ ಬಿಘೆ ಭೂಮಿಯಿಂದ ಅತ್ತೆಮನೆಯ ಪ್ರಪಂಚ ನಡೆಯುತ್ತಿರಲಿಲ್ಲ. ಅದರ ಹೊರತು ಇನ್ನುಳಿದ ಹೊಲಗದ್ದೆಗಳು ಯಾರ ಕಡೆಗಿವೆ ? "

ಚಟರ್ಜಿಮಹಾಶಯ ಬಹಳ ಸಿಟ್ಟುಗೊಂಡ. ಅವನು ನೆಟ್ಟಗೆ ಮಾಧವಿಯ ಮನೆಗೆ ಬಂದ. " ಕೆಲವು ಜಮೀನು ಮಾರಿಹೋಗಿವೆ,

ಉಳಿದ ಚೂರು ಚಾರು ಒತ್ತೆಬಿದ್ದಿವೆ. ಈಗ ಎಂಟು ಹತ್ತು ವರ್ಷವಾಯಿತು; ಜಮೀನುದಾರರ ತೆರಿಗೆ ಕೊಡದಿದ್ದರೆ ಹೊಲಮನೆ ಉಳಿಯುವುದೆಂತು ?" ಎಂದ.

ಮಾಧವಿ ಕೇಳಿದಳು: "ಹೊಲದ ಹುಟ್ಟುವಳಿ ಏನೂ ಬರಲಿಲ್ಲವೇನು ? ಅದರೊಳಗಿಂದ ತೆರಿಗೆ ಕೊಟ್ಟರಾಗುತ್ತಿರಲಿಲ್ಲವೆ ? ಹಾಗಿದ್ದರೂ ಯೋಗ್ಯಕಾರಣಕ್ಕಾಗಿ ಅವು ಮಾರಿಹೋಗಿದ್ದರೆ ಅವನ್ನು ಮಾರಿದವರು ಯಾರು ? ಈಗ ಅವು ಯಾರ ವಶದಲ್ಲಿವೆ ? ಹೇಳಿರಿ, ಹೇಗಾದರೂ ಮಾಡಿ ಅವನ್ನು ಬಿಡಿಸಿಕೊಳ್ಳಬಹುದು. ಕಾಗದ ಪತ್ರಗಳು ಎಲ್ಲಿವೆ ?"

ಚಟರ್ಜಿಮಹಾಶಯ ಅರ್ಥಾತ್ ಏನೇನೋ ಹಾರಿಸಿ ಹಾರಿಸಿಕೊಂಡು ಉತ್ತರಕೊಟ್ಟ. ಆದರೆ ಮಾಧವಿಯ ಸಮಾಧಾನವಾಗಲಿಲ್ಲ. ಚಟರ್ಜಿ ಬಡಬಡಿಸಿದ, ಏನೇನೋ ಒದರಾಡಿದ. ಬಳಿಕ ನಾಮಾವಳಿಯನ್ನು ( ನಾಮಾವಳಿ ಎಂದರೆ ರಾಮನಾಮದ ಮುದ್ರೆಯುಳ್ಳ ಒಂದು ಪಂಜೆ ) ಸೊಂಟಕ್ಕೆ ಕಟ್ಟಿದ; ಉಪ್ಪರಣೆಯನ್ನು ಕೊರಳಿಗೆ ಸುತ್ತಿಕೊಂಡ; ತಲೆಯ ಮೇಲೆ ಕೊಡೆಯನ್ನು ಹಿಡಿದುಕೊಂಡು ಹೊರಟ--ಲಾಲತಾಗ್ರಾಮದ ಕಡೆಗೆ. ಅಲ್ಲಿ ಜಮೀನುದಾರರ ಚಾವಡಿಯುಂಟು. ಇದೇ ಲಾಲತಾಗ್ರಾಮದಲ್ಲಿ ಸುರೇಂದ್ರನಾಥನ ವಾಡೆ, ಮಥುರಬಾಬುವಿನ ಆಡಳಿತದ ಚಾವಡಿ ಇರುವುದು. ಬ್ರಾಹ್ಮಣ ( ಚಟರ್ಜಿ ) ಎಂಟು ಹತ್ತು ಹರದಾರಿ ನಡೆದುಹೋಗಿ, ಮಥುರಬಾಬುವಿನ ಚಾವಡಿಯಲ್ಲಿ ಕಾಲಿಡುತ್ತಲೇ ಅಳಲು ಆರಂಭಿಸಿದ. "ಮಹಾರಾಯ, ಉಳಿಸು ಉಳಿಸು. ಬ್ರಾಹ್ಮಣ ಬೀದಿಯೊಳಗೆ ಬಿಕ್ಕೆ ಬೇಡಿ ಬಾಳಬೇಕಾಗಿ ಬಂತು !"

ಮಥುರಬಾಬು: "ಬಹಳ ಜನರ ಸ್ಥಿತಿ ಹಾಗಿದೆ."

ಚಟರ್ಜಿ "ಮಥುರಬಾಬು, ( ಮುಖ ತಿರುವಿ ) ಏನು ಮಾಡುತ್ತೀರಿ ? ಮಹಾರಾಯಾ, ಕಾಪಾಡಿರಿ." ಎಂದ.

ವಿಧೂ ಚಟರ್ಜಿ ಮಾಧವಿಯಿಂದೆತ್ತಿದ ನೂರು ರೂಪಾಯಿಗಳನ್ನು ಮಥುರಬಾಬುವಿಗೆ ಕಾಣಬರುವಂತೆ ಕೈಯಲ್ಲಿ ಹಿಡಿದುಕೊಂಡು "ತಾವು ಧರ್ಮಾವತಾರರು! ತಾವು ರಕ್ಷಿಸದಿದ್ದರೆ ಪೂರಾ ಮುಳುಗಿ ಹೋಗುತ್ತೇನೆ" ಎಂದು ನುಡಿದ.

"ಒಳ್ಳೆಯದು. ನೀನು ಎಂಬುದಾದರೂ ಏನು ?"

"ಗೋಲಾಗ್ರಾಮದಲ್ಲಿ ರಾಮತನು ಸನ್ಯಾಳರ ವಿಧವೆ ಸೊಸೆ ಇಪ್ಪ ವರ್ಷಗಳ ಮೇಲೆ ಈಗ ತಿರುಗಿ ಬಂದು ನನ್ನ ಸರ್ವಸ್ವವನ್ನೂ ಅಪಹರಿಸಲು ಹವಣಿಸುತ್ತಿದ್ದಾಳೆ."

ಮಥುರಬಾಬು ಕೇಳಿದ: "ಏನು ? ಆಕೆ ನಿನ್ನ ಸರ್ವಸ್ವವನ್ನು ಅಪಹರಿಸಬೇಕೆಂದು ಮಾಡಿದ್ದಾಳೋ, ನೀನೇ ಆಕೆಯ ಸರ್ವಸ್ವವನ್ನು ಎತ್ತಿಹಾಕಬೇಕೆಂದು ಬಗೆದಿರುವೆಯೋ ? ಇದರಲ್ಲಿ ಯಾವುದು ಸತ್ಯ ?

ಬ್ರಾಹ್ಮಣ ಕೈಜೋಡಿಸಿ, ಮಥುರಬಾಬುವಿನ ಕೈಯೊತ್ತಿ "ಈಗ ಹತ್ತು ವರ್ಷಗಳಿಂದ ನಾನು ಸರಕಾರಕ್ಕೆ ತೆರಿಗೆ ತೆರುತ್ತ ಬಂದಿದ್ದೇನೆ." ಎಂದ.

"ಭಲೆ, ಹೊಲ ಉಣ್ಣುತ್ತೀ, ತೆರಿಗೆ ಕೊಡಲಿಕ್ಕೆ ಬೇಡವೊ ?"

"ನಿಮ್ಮ ಪಾದದ ಆಣೆ—"

ಮಥುರಬಾಬುವಿಗೆ ಸರಿಯಾಗಿ ಅರ್ಥವಾಯಿತು. "ವಿಧವೆಯನ್ನು ಮೋಸಗೊಳಿಸಲು ಸಂಚುನಡೆಸಿದಹಾಗೆ ತೋರುತ್ತದೆ" ಎಂದ.

ಬ್ರಾಹ್ಮಣ ಏನೂ ಮಾತನಾಡಲಿಲ್ಲ. ಹಾಗೆಯೆ ನೋಡುತ್ತ ನಿಂತ.

"ಭೂಮಿ ಎಷ್ಟು ಬಿಘೆ ಇದೆ ?" ಮಥುರಬಾಬು ಕೇಳಿದ.

"ಇಪ್ಪತ್ತೈದು ಬಿಘೆ."

ಮಥುರಬಾಬು ಲೆಕ್ಕಹಾಕಿ ಹೇಳಿದ: "ಏನಿಲ್ಲೆಂದರೂ ಮೂರು ಸಾವಿರ ರೂಪಾಯಿ. ಜಮೀನುದಾರರ ಚಾವಡಿಗೆ ಕಾಣಿಕೆ ಎಷ್ಟು ಕೊಡುತ್ತಿ ?"

“ ತಾವು ಅಪ್ಪಣೆ ಕೊಡಿಸಿದ ಹಾಗೆ—ಮುನ್ನೂರು. ”

“ ಮೂರು ನೂರು ಕೊಟ್ಟು ಮೂರು ಸಾವಿರದ ಹೊಲ ಹೊಡೆಯ ಬೇಕೆನ್ನುತ್ತೀಯೇನು ? ನನ್ನ ಕೈಯಿಂದೇನೂ ಅದಾಗಲಿಕ್ಕಿಲ್ಲ. ”

ಬ್ರಾಹ್ಮಣ ಕಣ್ಣಲ್ಲಿ ನೀರು ತಂದ. “ ಅಪ್ಪಣೆಯಾದರೂ ಎಷ್ಟು ಹಣಕ್ಕಾಗುತ್ತದೆ ? ” ಎಂದ.

“ ಒಂದು ಸಾವಿರ ಕೊಟ್ಟೀಯಾ ? ”

ಆ ಬಳಿಕ ಇಬ್ಬರೊಳಗೂ ಗುಟ್ಟಾಗಿ ಮಾತುಕತೆ ನಡೆಯಿತು. ಅವರ ಪರಿಣಾಮವಿಷ್ಟು: ಜೋಗೇಂದ್ರನಾಥನ ವಿಧವೆಯ ಮೇಲೆ ದಾವೆ ಯಾಯಿತು—ಹತ್ತು ವರುಷ ಭೂಮಿಯ ಕಂದಾಯ ಕೊಟ್ಟಿಲ್ಲವೆಂದು. ಸಮನ್ಸು ಹೊರಟಿತು; ಆದರದು ಮಾಧವಿಗೆ ಮುಟ್ಟಲಿಲ್ಲ. ಕೊನೆಗೆ ಏಕ ಪಕ್ಷೀಯ ತೀರ್ಮಾನವಾಯಿತು. ಒಂದೂವರೆ ತಿಂಗಳ ಮೇಲೆ ಹುಕುಮುನಾಮೆಯ ಬಜಾವಣೆಗಾಗಿ ತನ್ನ ಭೂಮಿಕಾಣಿಗಳು ಹರಾ ಜಾಗುತ್ತಿವೆಯೆಂದು ಮಾಧವಿಯ ಕಿವಿಗೆ ಸುದ್ದಿ ಬಂದಿತು !

## ೧೧. ಮಾಧವಿ ಕೇಳಿದ ಸುರೇಂದ್ರನ ಕೀರ್ತಿ

ಮಾಧವಿ ನೆರೆಮನೆಯವಳನ್ನು ಕರೆದು ಕೇಳಿದಳು: “ ನಿಮ್ಮ ದೇಶವೆಂದರೇನು ಮೊಗಲಾಯಿಯೋ ಏನು ? ”

“ ಏಕೆ, ಹೀಗೇಕೆ ಆಡುತ್ತೀರಿ ? ”

“ ಅಲ್ಲದಿದ್ದರೆ ಏನು ? ಒಬ್ಬ ಮನುಷ್ಯ ನನ್ನ ಸರ್ವಸ್ವವನ್ನೂ ನುಂಗಬೇಕೆಂದು ಕಾಯಕ ನಡೆಸಿದ್ದಾನೆ— ನಿಮಗೆ ಕಾಣುತ್ತಿಲ್ಲವೆ ? ”

ಅವಳೆಂದಳು: “ ನಾವೇನು ಮಾಡಲಿಕ್ಕಾಗುತ್ತದೆ ? ಜಮೀನು ದಾರ ಲಿಲಾವು ಮಾಡಿಸಿದರೆ, ನಾವು ಬಡ ಪ್ರಜೆಗಳು ಏನು ಮಾಡ ಬಲ್ಲೆವು ? ”

" ಅದೇನೋ ಸರಿ. ಅಲ್ಲ, ನಮ್ಮ ಮನೆಮಾರುಗಳ ಹರಾಜು ನಡೆಸಿದ್ದಾರೆ; ನನಗೆ ಒಂದು ಚೂರು ಕೂಡ ತಿಳಿಸಬಾರದೆ? ಇವ ಎಂಥವ ನವ್ವ ನಿಮ್ಮ ಜಮೀನುದಾರ ! "

ಅವಳು ಎಲ್ಲ ಸಂಗತಿಯನ್ನೂ ವಿಶದವಾಗಿ ಹೇಳಿದಳು—ಇಂತಹ ಪೀಡಕನಾದ ಜಮೀನುದಾರನನ್ನು, ಇಂತಹ ಅತ್ಯಾಚಾರಿಯನ್ನು ಯಾರೂ ಎಲ್ಲಿಯೂ ಕಂಡಿರಲಾರರು. ಇನ್ನೂ ಹಲವು ವಿಷಯಗಳನ್ನು, ಜನಗಳು ಏನೇನು ಆಡಿಕೊಳ್ಳುತ್ತಿದ್ದರೋ ಅವೆಲ್ಲವನ್ನೂ ಅವಳು ಹೇಳಿದಳು.

" ಜಮೀನುದಾರ ಬಾಬುಗಳನ್ನು ಹೋಗಿ ಕಂಡರೆ ನೆಟ್ಟಗಾಗಲಿಕ್ಕಿಲ್ಲವೆ ? " ಎಂದು ಮಾಧವಿ ಅಂಜುತ್ತಂಜುತ್ತ ನುಡಿದಳು.

ಸಂತೋಷಕುಮಾರನಿಗಾಗಿ ಮಾಧವಿ ಹಾಗೆ ಮಾಡಲೂ ಸಿದ್ಧಳಾದಳು. ಆ ನೆರೆಮನೆಯವಳು ಏನೂ ಮಾತನಾಡಲಿಲ್ಲ. ನಾಳೆ ತನ್ನ ಅಕ್ಕನ ಮಗನನ್ನು ಚೆನ್ನಾಗಿ ಕೇಳಿಕೊಂಡು ಬಂದು ಏನೆಂಬುದನ್ನು ಹೇಳುತ್ತೇನೆ ಎಂದು ಅವಳು ಹೊರಟುಹೋದಳು.

ಆಕೆಯ ಅಕ್ಕನ ಮಗ ಈವ್ರೊಳಗಾಗಿ ನಾಲ್ಕಾರು ಸಾರೆ ಲಾಲತಾಗ್ರಾಮಕ್ಕೆ ಹೋಗಿ ಬಂದವ. ಅವನಿಗೆ ಅಲ್ಲಿಯ ಸ್ಥಿತಿಗತಿ, ಜಮೀನುದಾರ ಮಹಾಶಯರ ವಿಷಯ ಹೆಚ್ಚಾಗಿ ಗೊತ್ತು. ಎಲೋಕೇಶಿಯ ಆಗಮನದ ವರೆಗಿನ ಸುದ್ದಿಯನ್ನು ಅವನು ಕೇಳಿದ್ದ. ' ರಾಮುತನುಗಳ ವಿಧವೆ ಸೊಸೆ ಜಮೀನುದಾರನನ್ನು ಕಾಣಲು ಹೋಗಬೇಕೆಂದು ಎನ್ನುತ್ತಾಳೆ ' ಎಂಬ ವಿಷಯವನ್ನು ಅಬಚಿ ತೆಗೆಯುತ್ತಲೇ ಅವನು ಗಂಭೀರ ಮುದ್ರೆಯಿಂದ " ಅವಳ ವಯಸು ಎಷ್ಟು ? " ಎಂದು ಕೇಳಿದ.

" ಇಪ್ಪತ್ತೊಂದು ಇಪ್ಪತ್ತೆರಡು ವರ್ಷದವಳಿರಬಹುದು. "

ಅವನು ತಲೆ ತೂಗಿ ಕೇಳಿದ: " ನೋಡಲಿಕ್ಕೆ ಹೇಗಿದ್ದಾಳೆ ? '

" ಚಿನ್ನದ ಪುತ್ಥಳಿಯ ಹಾಗಿದ್ದಾಳೆ. "

ನಸುನಗೆ ಕೂಡಿದ ಸ್ವರದಲ್ಲಿ ಅವನು ಹೇಳಿದ: " ಆಕೆ ಜಮೀನುದಾರನನ್ನು ಕಂಡರೆ ಕೆಲಸ ಕೈಗೂಡುವಂತಿದೆ. ಆದರೆ, ಅವಳು

ಈಗಿಂದೀಗ ರಾತ್ರಿಯೇ ಒಂದು ದೋಣಿಯನ್ನು ಬಾಡಿಗೆ ಮಾಡಿಕೊಂಡು ತಮ್ಮ ಅಪ್ಪನ ಮನೆಗೆ ಹೋಗುವುದು ಒಳ್ಳೆಯದೆಂದು ನನಗಂತೂ ತೋರುತ್ತದೆ. ”

“ ಅದೇನು ? ”

“ ನೀನು ಹೇಳಲಿಲ್ಲವೇ, ನೋಡಲಿಕ್ಕೆ ಆಕೆ ಚಿನ್ನದ ಪುತ್ತಳಿಯಾಗಿದ್ದಾಳೆ ಎಂತ ! ”

“ ಎಂದರೇನು ಅದಕ್ಕೂ ಇದಕ್ಕೂ ಏನು ಸಂಬಂಧ ? ” ಎಂದು ಅವಳು ಆಶ್ಚರ್ಯದಿಂದ ಕೇಳಿದಳು.

“ ಎಂದರೆ, ನೋಡಲಿಕ್ಕೆ ಅಷ್ಟೊಂದು ಚೆಲುವೆಯಾಗಿದ್ದಮೇಲೆ ಸುರೇಂದ್ರರಾಯ ಜಮೀನುದಾರನ ಕೈಯಲ್ಲಿ ಉಳಿಯುವುದಿಲ್ಲ ! ”

ಅಬಜಿ ಗಲ್ಲದ ಮೇಲೆ ಕೈಯಿಟ್ಟುಕೊಂಡು ಎಂದಳು: “ ಇದೇನು ಹೇಳುತ್ತೀ ನೀನು ? ”

ಅವನು ಸ್ವಲ್ಪ ನಕ್ಕ. “ ಇರುವುದೇ ಹಾಗೆ ಅದು. ಊರ ಮಂದಿಗೆಲ್ಲಾ ಗೊತ್ತು ಅದು, ” ಎಂದ.

“ ಹಾಗಾದರೆ ಜಮೀನುದಾರರನ್ನು ಕಾಣಲು ಹೋಗುವುದು ಒಳ್ಳೆಯದಲ್ಲ ಎನ್ನುವೆಯಾ ? ”

“ ಅರ್ಥಾತ್. ”

“ ಎಂದಮೇಲೆ ಎಲ್ಲ ಆಸ್ತಿ ಕಳೆದುಕೊಂಡು ಕೂಡುವುದೇ ಅಲ್ಲವೆ ? ”

“ ಚಟರ್ಜಿಮಹಾಶಯರು ಬದುಕಿರುವವರೆಗೆ ಆಸ್ತಿಪಾಸ್ತಿಗಳ ಆಶೆ ಬಿಟ್ಟ ಹಾಗೆಯೆ. ಹೀಗಿರುತ್ತಿರಲಿಕ್ಕೆ, ಒಳ್ಳೆಯ ಮನೆತನದ ಹೆಣ್ಣುಮಗಳು, ಧರ್ಮವನ್ನಾದರೂ ಏಕೆ ಬಿಡಬೇಕು ? ”

ಮರುದಿನ ಮಾಧವಿಗೆ ಅವಳು ಎಲ್ಲ ವಿಷಯವನ್ನು ಹೇಳಿದಳು. ಅದನ್ನು ಕೇಳಿ ಮಾಧವಿ ಚಕಿತಳಾದಳು. ದ್ದಿನಾಂತದಿನವೆಲ್ಲ ಅವಳ ಮನಸು ಸುರೇಂದ್ರರಾಯನ ವಿಚಾರಗಳಿಂದ ಕಲಕುಮುಲಕಾಗಿದ್ದಿತು.

ಮಾಧವಿಗೆ ಸುರೇಂದ್ರ ಎಂಬ ಹೆಸರು ತೀರ ಗುರುತಿನದು; ಆದರೆ ಆ ಸುರೇಂದ್ರನ ನಡತೆಗೂ ಈ ಸುರೇಂದ್ರನ ನಡತೆಗೂ ಎಷ್ಟೊ ಹೋಲಿಕೆಯಿಲ್ಲ. ಈ ಹೆಸರು ಅವಳ ಎದೆಯೊಳಗೆ ಸುಳಿದಾಡುತ್ತಲಿತ್ತು, ಎಷ್ಟೋ ದಿನ. ಅಲ್ಲಿಂದ ಐದು ವರುಷಗಳು ಸಂದು ಹೋದವು. ಈವೊತ್ತಿಗೆ ಅದು ಮರೆತುಕೂಡ ಹೋಗಿತ್ತು. ಈಗ ಐದು ವರುಷಗಳ ಮೇಲೆ ಅದು ತೆರೆಗಳನ್ನು ಸರಿಸಿ ನೆನಪಿನ ರಂಗಕ್ಕೆ ಬಂತು.

ಆದಿನ ರಾತ್ರಿ ಮಾಧವಿಗೆ ಕನಸಿನಲ್ಲಿ ಬಹಳ ಕಷ್ಟವಾಯಿತು. ಹಿಂದಿನ ಸಂಗತಿಗಳು ಹಲವು ಸಾರೆ ನೆನಪಿನಲ್ಲಿ ಕುಣಿದವು. ಎಷ್ಟೋ ಬಾರಿ ಅವಳ ಕಣ್ಣುಗಳು ನೀರನ್ನು ಕರೆದವು. ಸಂತೋಷಕುಮಾರ ಮನಸಿನೊಳಗೇ ಬೆದರಿಕೊಂಡು ಅವಳ ಮೋರೆ ನೋಡುತ್ತ "ಅತ್ತೆವ್ವ, ನಾನು ಅವ್ವನ ಹತ್ತಿರ ಹೋಗುತ್ತೇನೆ" ಎಂದು ಮೆಲ್ಲನೆ ನುಡಿದ.

ಇದೇ ಮಾತು ಮಾಧವಿಯ ಮನಸಿನಲ್ಲಿ ಬಹಳ ಸಾರೆ ಬಂದು ಹೋಯಿತು. ಏಕೆ? ಇಲ್ಲಿ ಇರುವುದಕ್ಕೆ ಅನುಕೂಲವಿಲ್ಲದ ಬಳಿಕ ಕಾಶಿಗೆ ಹೋಗದೆ ಬೇರೆ ಹಾದಿಯಿಲ್ಲ. ಸಂತೋಷನ ಸಲುವಾಗಿ ಜಮೀನುದಾರರನ್ನು ಕಾಣಬೇಕೆಂದು ಆಕೆ ಮಾಡಿದ್ದಳು. ಈಗ ಅದೂ ಶಕ್ಯವಿಲ್ಲವೆಂದಾಯಿತು. ನೆರೆಹೊರೆಯ ಮಂದಿ ಅಂಜಿಸುತ್ತಿದ್ದರು. ಅಂತೂ ಆಕೆ ಹೋದ ಹೋದಲ್ಲಿ ಏನಾದರೂ ಒಂದು ಸಂಕಟ ಕಾಯ್ದುಕೊಂಡೇ ಇರುತ್ತಿತ್ತು. ಹರಯ, ಚೆಲುವಿಕೆ ಇವೆರಡು ಆಕೆಯನ್ನು ಬಿಡದ ಹಗೆಗಳು. ಏನು ನನ್ನ ಕೆಟ್ಟ ಹಣೆಬರಹವೊ—ಈ ದೇಹಕ್ಕೆ ಈ ತೆರದ ಉಪಾಧಿಗಳು, ಎಂದವಳು ಯಾವಾಗಲೂ ಕುದಿಯುವಳು. ಕಳೆದ ಏಳು ವರುಷ ಇಂತಹ ವಿಚಾರ ಅವಳ ಮನಸಿನೊಳಗೆ ಎಂದೂ ಹುಟ್ಟಿರಲಿಲ್ಲ,—ಯಾರೂ ಹುಟ್ಟಗೊಟ್ಟಿರಲಿಲ್ಲ.

ಗಂಡ ಸತ್ತ ಮೇಲೆ ತನ್ನ ತಂದೆಯ ಮನೆಯಲ್ಲಿರುತ್ತಿದ್ದಾಗ ಎಲ್ಲರೂ 'ಅಕ್ಕಾಜಿ' ಎನ್ನುತ್ತಿದ್ದರು; ಇಲ್ಲವೆ 'ಅವ್ವಾ' ಎನ್ನುತ್ತಿದ್ದರು. ಈ ಆದರದ ಕರೆಗಳಿಂದ ಮಾಧವಿಗೆ ಪ್ರೌಢತ್ವವೇ

ಬಂದಿತ್ತು. ಈ ರೂಪ ಈ ಯೌವನ ಆಗ ಅವಳನ್ನು 'ಅಕ್ಕಾಜಿ' ಪದಕ್ಕೆ ಒಯ್ಯುತ್ತಿದ್ದವು, ತಾಯ್ತನದ ಪ್ರೇಮ ಪರಿಶ್ರಮಗಳಲ್ಲಿ ತೊಡಗಿಸುತ್ತಿದ್ದವು. ಆಗ ಈ ಬಗೆಯ ವಿಚಾರಗಳಿಗೆ ಮನಸಿನೊಳಗೆ ಎಡೆಯೇ ಇರುತ್ತಿರಲಿಲ್ಲ. ಈಗ ಕೂಡ ಎಡೆಯಾಗುತ್ತಿರಲಿಲ್ಲ; ಆದರೆ ಮಂದಿ ಈ ವಿಷಯದ ಅರಿವು ತಂದುಕೊಟ್ಟಿತು ಅವಳಿಗೆ. ಮಾಧವಿ ನಾಚಿಕೆಯಿಂದ ನಸುನಕ್ಕು ತನ್ನಷ್ಟಕ್ಕೆ ತಾನು ಎಂದುಕೊಂಡಳು: "ಇಲ್ಲಿಯ ಜನಗಳು ಕುರುಡರೋ ಏನು ದನಗಳೋ!"

ಮಾಧವಿಯ ಈ ತಿಳಿವಳಿಕೆ ತಪ್ಪೇ ಸರಿ. ಎಲ್ಲರ ಮನಸು ಇಪ್ಪತ್ತೊಂದಿಪ್ಪತ್ತೆರಡು ವರ್ಷಗಳಲ್ಲಿ ಎಲ್ಲಿ ಮುಪ್ಪಾಗಿರುತ್ತದೆ?

ಮುಂದೆ ಮೂರು ದಿವಸಗಳ ಮೇಲೆ ಜಮೀನುದಾರನ ಪೇದೆಗಳು ಬಂದು ಮಾಧವಿಯ ಮನೆಯ ಬಾಗಿಲಲ್ಲಿ ತಳವೂರಿದರು; ಡಂಗುರ ಹೊಯ್ದು ಊರ ಜನರಿಗೆ ಅರಿಕೆ ಮಾಡಿದರು. ಆಗ ಸುರೇಂದ್ರನಾಥ ಹೊಸದೊಂದು ಕೀರ್ತಿಯನ್ನು ಕಟ್ಟಿಕೊಂಡ,—ಮಾಧವಿ ಸಂತೋಷಕುಮಾರನ ಕೈಹಿಡಿದುಕೊಂಡು, ತೊತ್ತನ್ನು ಮುಂದಿಟ್ಟು ಕೊಂಡು ಹೊರಹೊರಟು ಹೋಗಿ ದೋಣಿಯನ್ನೇರಿದಳು.

"ಸೋಮರಾಪುರಕ್ಕೆ ನಾವು ನಡೆಯಿಸು" ಎಂದು ಮಾಧವಿ ಅಂಬಿಗರಿಗೆ ಹೇಳಿದಳು. ಅವಳ ತಂಗಿ ಪ್ರಮೀಲೆಯನ್ನು ಆ ಊರಿಗೆ ಕೊಟ್ಟಿತ್ತು. ಆಕೆಯನ್ನು ನೋಡಿಕೊಂಡು ಹೋಗೋಣವೆಂದು ಅವಳ ಮನಸು. ಸೋಮರಾಪುರ ಗೋಲಾಗ್ರಾಮದಿಂದ ಹದಿನೈದು ಹರದಾರಿ. ಪ್ರಮೀಲೆ ಅತ್ತೆಯ ಮನೆಗೆ ಬಂದು ಒಂದು ವರ್ಷವಾಗಿತ್ತು. ಆ ಹುಡಗಿ ಯಾವಾಗಲಾದರೂ ಹೋದರೆ ತವರುಮನೆಗೆ ಹೋದಾಳು; ಆದರೆ ತಾನು ಅಲ್ಲೆಲ್ಲಿ ಇರುವಳು? ಆದುದರಿಂದ ಒಮ್ಮೆ ತಂಗಿಯನ್ನು ಕಂಡುಕೊಂಡು ಹೋದರಾಯಿತು ಎಂದು ಬಗೆದಿದ್ದಳು.

ಮುಂಜಾನೆಯ ಪ್ರಹರದಲ್ಲಿ, ಹೊತ್ತು ಮೂಡುವ ಹೊತ್ತಿಗೆ ದೋಣಿಯನ್ನು ಬಿಟ್ಟ ಅಂಬಿಗ. ಪ್ರವಾಹದ ಇದಿರು ದಿಕ್ಕಿಗೆ ನಾವು ಹೋಗುತ್ತಿದ್ದುದರಿಂದ ಅದರ ಗತಿ ಮಂದವಾಗಿತ್ತು. ಗಾಳಿಯೂ ಅನುಕೂಲವಾಗಿರಲಿಲ್ಲ. ಆದುದರಿಂದ ಇನ್ನೂ ಸಾವಕಾಶವಾಗಿ

ಮಂಥರಗತಿಯಿಂದ ಹುಲ್ಲು ನಡುಗಡ್ಡೆಗಳೊಳಗಿಂದ, ಗಿಡಗಂಟಿಗಳ ಜೊಂಪದಿಂದ ತಪ್ಪಿಸಿಕೊಳ್ಳುತ್ತ ನಾವು ಸಾಗಿತ್ತು. ಸಂತೋಷಕುಮಾರ ಬಲು ಹಿಗ್ಗಿನಲ್ಲಿದ್ದ. ಅವನು ಕೈಚಾಚಿ ಚಾಚಿ ಗಿಡದ ಎಲೆ-ಹೂಗಳನ್ನು ಹರಿದುಕೊಳ್ಳಲು ಹವಣಿಸುತ್ತಿದ್ದ.

"ಗಾಳಿ ನಿಲ್ಲದಿದ್ದರೆ ನಾವು ಸೋಮರಾಪುರವನ್ನು ಸೇರಲಿಕ್ಕೆ ನಾಳೆ ಮಧ್ಯಾಹ್ನವಾದೀತು" ಎಂದ ನಾವಾಡಿ.

ಮಾಧವಿಗೆ ಇಂದು ಏಕಾದಶಿ. ಆದರೆ ಸಂತೋಷನಿಗಾಗಿ ಎಲ್ಲಿಯಾದರೂ ಒತ್ತಟ್ಟಿಗೆ ಒಲೆ ಹೂಡಿ ಏನಾದರೂ ಕುಚ್ಚಿಹಾಕಬೇಕಲ್ಲವೆ ?

"ದಿಂಡಿ ಪಾಝುರಗಂಜಿಗೆ ತಲುಪಿದೆವೆಂಪರೆ ಸರಿಹೋಗುವುದು. ಅಲ್ಲಿ ಎಲ್ಲ ಪದಾರ್ಥಗಳೂ ಸಿಕ್ಕುವವು." ಎಂದು ಅಂಬಿಗ ಹೇಳಿದ.

"ಹಾಗೆ ಮಾಡಪ್ಪ. ಹತ್ತು ಹನ್ನೊಂದರ ಹೊತ್ತಿಗೆ ಹುಡುಗನಿಗೆ ಊಟ ಸಿಕ್ಕರೆ ಸಾಕು" ಎಂದು ನುಡಿದಳು ದಾಸಿ.

## ೧೨. ಅಕ್ಕಾಜಿ ಮತ್ತು ಶಾಂತಿ

ಕಾರ್ತಿಕಮಾಸ ಮುಗಿಯುವುದರಲ್ಲಿತ್ತು. ಸುರೇಂದ್ರನಾಥನ ಮನೆಯಲ್ಲಿ ಉಪ್ಪರಿಗೆಯ ಕಿಡಕಿಯಿಂದ ಮುಂಜಾನೆಯ ಬಿಸಿಲು ಒಳಗೆ ಬಿದ್ದುದರಿಂದ ಮನಸಿಗೆ ಪ್ರಸನ್ನತೆಯುಂಟಾಗುತ್ತಿತ್ತು. ಕಿಡಕಿಯ ಬಳಿಯಲ್ಲಿ ಮೇಜಿನ ಒಂದು ಪಕ್ಕದಲ್ಲಿ, ಬಟ್ಟೆಯಲ್ಲಿ ಕಟ್ಟಿದ ದೊಡ್ಡ ದೊಡ್ಡ ಕಡತಗಳನ್ನೂ ಕಾಗದ ಪತ್ರಗಳ ಒಟ್ಟಿಲನ್ನೂ ಇಟ್ಟುಕೊಂಡು ಕುಳಿತಿದ್ದ ಸುರೇಂದ್ರನಾಥ. ತೆರಿಗೆಯ ಲೆಕ್ಕ, ಆಯವ್ಯಯ, ತಡೆದು ನಿಂತ ವ್ಯಾಜ್ಯಗಳು, ಅರ್ಜಿಗಳು ಮೊದಲಾದವನ್ನು ಒಂದೊಂದಾಗಿ ತಿರುವಿಹಾಕುತ್ತಿದ್ದ. ಇವೆಲ್ಲವನ್ನು ನೋಡುತ್ತ ಕುಳಿತುಕೊಳ್ಳುವುದು

ಒಂದು ಬಗೆಯಿಂದ ಅಗತ್ಯವೂ ಇತ್ತು. ಹೊತ್ತೂ ಹೋಗುತ್ತಿದ್ದಿಲ್ಲ. ಈ ವಿಷಯವಾಗಿ ಶಾಂತಿ ಅದೆಷ್ಟೋ ಸಲ ಅವನೊಡನೆ ವಾದಿಸಿದ್ದಳು. ಕದತಗಳನ್ನು ನೋಡುವುದರಿಂದ ಎದೆಬೇನೆಯೇನೂ ಹೆಚ್ಚಾಗುತ್ತಿರುವುದಿಲ್ಲ; ಅಲ್ಲದೆ, ನೋಡಿದ ಮಾತ್ರಕ್ಕೆ ಇಂದೇ ಪರಸ್ಥಳಕ್ಕೆ ಹೋಗಬೇಕಾದ ಕಾರಣವೂ ಇಲ್ಲ—ಎಂದು ಸುರೇಂದ್ರ ಅವಳಿಗೆ ಸಮಾಧಾನ ಹೇಳುತ್ತಿದ್ದ. ಅಂತೂ ಶಾಂತಿ ಇದನ್ನೆಲ್ಲ ಒಪ್ಪಿಕೊಂಡಿದ್ದಳು.

ಇತ್ತೀಚೆಗೆ ಗಂಡನ ಮೇಲೆ ಶಾಂತಿಯ ವರ್ಚಸ್ಸು ಮುದ್ರಿಸಿತ್ತು. ಆಕೆಯ ಒಂದು ಮಾತೂ ಅಮಾನ್ಯವಾಗುತ್ತಿರಲಿಲ್ಲ. ಎಷ್ಟೋ ದಿನಗಳಿಂದ ಸುರೇಂದ್ರ ಗೆಳೆಯರ ನೆರವಿಯನ್ನು ನೆರವಿಕೊಂಡು ಹೊತ್ತು ಗಳೆಯುತ್ತ ಶಾಂತಿಯನ್ನು ನೋಯಿಸುತ್ತಿಲ್ಲ. ಅವಳ ಇಚ್ಛೆಯ ಮೇರೆಗೆ ಅವನು ಮನೆಯಿಂದ ಹೊರಹೊರಡುತ್ತಿದ್ದಿಲ್ಲ ಕೂಡ. ಡಾಕ್ಟರರ ಸಲಹೆಯನ್ನು ನಡೆಸುವುದರಲ್ಲಿ ಶಾಂತಿ ಅತೀವ ಎಚ್ಚರಪಡುತ್ತಿದ್ದಳು.

ಶಾಂತಿ ಹತ್ತಿರವೇ ಕುಳಿತು ಬಣ್ಣದ ಪಟ್ಟಿಗಳಿಂದ ಕಾಗದಗಳನ್ನು ಜೋಡಿಸಿ ಕಟ್ಟುತ್ತಿದ್ದಳು. ಸುರೇಂದ್ರನಾಥ ಒಂದು ಕಾಗದವನ್ನು ಓದುತ್ತಿದ್ದಂತೆಯೇ ಒಮ್ಮಿಗಿಲೆ ಮುಖ ಮೇಲೆತ್ತಿ “ ಶಾಂತಿ ” ಎಂದು ಕೂಗಿದ.

ಅವಳು ತುಸ ದೂರ ಹೋಗಿದ್ದಳು. ತಕ್ಷಣ ತಿರುಗಿ ಬಂದು “ ಏನು ? ಕರೆದಿರಾ ? ” ಎಂದು ಕೇಳಿದಳು.

“ ಹೌದು. ನಾ ಸ್ವಲ್ಪ ಚಾವಡಿಗೆ ಹೋಗಿಬರುತ್ತೇನೆ. ”

“ ಬೇಡ. ಏಕೆ, ಏನು ಬೇಕಾಗಿದೆ ? ”

“ ನನಗೇನೂ ಬೇಕಾಗಿಲ್ಲ. ಮಥುರಬಾಬುವನ್ನು ಒಂದು ಮಾತು ಕೇಳಬೇಕಾಗಿದೆ. ”

“ ನಾನವನನ್ನು ಕರೆಸುತ್ತೇನೆ. ನೀವೇನೂ ಅಲ್ಲಿಗೆ ಹೋಗುವುದು ಬೇಡ. ಅಲ್ಲ, ಈ ಹೊತ್ತಿನಲ್ಲಿ ಅವ ಏತಕ್ಕೆ ಬೇಕು ? ”

" ಅವನಿಗೆ ತಿಳಿಸು: ಮಾರ್ಗಶಿರ ಮಾಸದಿಂದ ನಿನ್ನನ್ನು ಕೆಲಸ ದಿಂದ ತೆಗೆದುಹಾಕಿದೆ, ಎಂದು."

ಶಾಂತಿಗೆ ವಿಸ್ಮಯವೇನೋ ಆಯಿತು. ಆದರೆ ಒಳಗೊಳಗೇ ಸಂತೋಷವಾಗದಿರಲಿಲ್ಲ. ಅವಳು " ಅದೇನು ಅಂತಹ ತಪ್ಪು ಮಾಡಿದ ? " ಎಂದು ಕೇಳಿದಳು.

" ತಪ್ಪೇನೆಂಬುದನ್ನು ಈಗಳೇ ಸರಿಯಾಗಿ ಹೇಳಲು ಬರು ವಂತಿಲ್ಲ. ಆದರೆ ಭಯಂಕರ ಅತ್ಯಾಚಾರವನ್ನಂತೂ ಮಾಡಿದ್ದಾನೆ. "

ಬಳಿಕ ನ್ಯಾಯಾಸ್ಥಾನದ ಸರ್ಟಿಫಿಕೇಟುಗಳನ್ನೂ ಕಾಗದಪತ್ರ ಗಳನ್ನೂ ಮಗುಚಿ ನೋಡಿ ಸುರೇಂದ್ರ ನುಡಿದ: " ಇದೋ ನೋಡಿ ದೆಯಾ ? ಗೋಲಾಗ್ರಾಮದ ವಿಧವೆಯೊಬ್ಬಳ ಹೊಲಗಳನ್ನೆಲ್ಲಾ ಯಾವ ನಿರ್ಬಂಧವೂ ಇಲ್ಲದೆ ಹರಾಜು ಮಾಡಿಸಿದ್ದಾನೆ. ಒಂದಿಷ್ಟಾ ದರೂ ನನ್ನನ್ನು ಕೇಳಬಾರದೆ ? "

ಶಾಂತಿಗೆ ಕೆಡಕೆನಿಸಿತು. " ಪಾಪ, ವಿಧವೆ ! ಹೀಗಾಗಬಾರ ದಿತ್ತು. ಅಲ್ಲ, ಹರಾಜು ಮಾಡಿಸುವುದಕ್ಕೆ ಕಾರಣ ? " ಎಂದಳು.

" ಹತ್ತು ವರ್ಷಗಳ ತೆರಿಗೆ ನಿಂತಿತ್ತು. ಅದಕ್ಕಾಗಿ ಒಂದೂವರೆ ಸಾವಿರಕ್ಕೆ ದಾವೆಯಾಗಿತ್ತು. "

ದುಡ್ಡಿನ ವಿಷಯ ಕೇಳಿ ಮಥುರಬಾಬುವಿನ ಮೇಲಿನ ಶಾಂತಿಯ ಸಿಟ್ಟು ಸ್ವಲ್ಪ ಇಳಿಯಿತು. ಅವಳು ನಸುನಕ್ಕು " ಎಂದ ಮೇಲೆ ಆಡಳಿತಗಾರರ ತಪ್ಪೇನು ಇದರಲ್ಲಿ ? ಇಷ್ಟು ಹಣವನ್ನು ಸುಮ್ಮನೆ ಬಿಟ್ಟುಬಿಡುವುದು ಹೇಗೆ ? " ಎಂದಳು.

ಸುರೇಂದ್ರ ವಿಚಾರದಲ್ಲಿ ಬಿದ್ದ. ಶಾಂತಿ ಮತ್ತೆ ಕೇಳಿದಳು: " ಇಷ್ಟು ಹಣವನ್ನು ಬಿಟ್ಟುಬಿಡಬೇಕೆ ? "

" ಬಿಡದಿದ್ದರೆ ಮಾಡಬೇಕೇನು ? ಆಸರವಿಲ್ಲದ ವಿಧವೆಯನ್ನು ಹೊಲ ಕಸಿದುಕೊಂಡು ಮನೆಯಿಂದ ಹೊರಪಡಿಸುವುದೇ ? ನಿನಗೆ ಗೆ ನಿಸುವುದು ? "

ಈ ಘಟನೆಯೊಳಗಿನ ಅಂತರ್ಗತ ಜ್ವಾಲೆಯಿಂದ ಶಾಂತಿಯ ಹೃದಯ ಹೊತ್ತಿ ಹುರಿಗಡಲೆಯಾಯಿತು. ನಿಸ್ತೇಜಳಾಗಿ ಕೆಡಕೆನಿಸಿ ಕೊಂಡು "ಇಲ್ಲ, ಮನೆಯಿಂದ ಹೊರಮಡಿಸಬೇಕೆಂದು ನಾನು ಹೇಳುವುದಿಲ್ಲ. ನಿಮ್ಮ ದುಡ್ಡು, ನೀವು ದಾನಮಾಡುವವರು; ಅದಕ್ಕೆ ನಾನೇಕೆ ಅಡ್ಡಬರಲಿ ?" ಎಂದು ಅವಳೆಂದಳು.

ಸುರೇಂದ್ರ ನಕ್ಕು "ಅಲ್ಲ, ಹಾಗಲ್ಲ ಶಾಂತಿ; ನನ್ನ ದುಡ್ಡೆಂದರೆ ನಿನ್ನದಲ್ಲವೇನು ? ನೀನೇ ನೋಡು, ನನ್ನ ಪಶ್ಚಾತ್ ನೀ— "

"ಇದೇನು, ಹೀಗೆ ಮಾತಾಡುವಿರಿದು ?"

"—ನೀನು ನನ್ನ ಇಷ್ಟವನ್ನು ನಡೆಸಬಹುದೇ ?"

ಶಾಂತಿಯ ಕಣ್ಣಲ್ಲಿ ನೀರು ಬಂತು. ಏಕೆ ಬರಲಿಕ್ಕಿಲ್ಲ? ಮೊದಲೇ ಸುರೇಂದ್ರನ ಪ್ರಕೃತಿ ನೆಟ್ಟಗಿಲ್ಲ.

"ಅಂಥ ಮಾತನ್ನೇಕೆ ತೆಗೆಯುತ್ತಿದ್ದೀರಿ ?" ಎಂದಳು ಶಾಂತಿ.

"ನಿನಗೆ ಒಳಿತೆನಿಸುವುದನ್ನೇ ಮಾತಾಡುತ್ತೇನೆ. ನನ್ನ ಇಷ್ಟ ವನ್ನು ನಿನಗೆ ತಿಳಿಸಬಾರದೋ?"

ಶಾಂತಿ ಕಣ್ಣೊರಸಿಕೊಂಡು ತಲೆಹಾಕಿದಳು.

ತುಸ ಹೊತ್ತು ತಡೆದು ಸುರೇಂದ್ರ "ನಮ್ಮ ಅಕ್ಕಾಜಿಯ ಹೆಸರು— "

ಕಣ್ಣಮೇಲಿನ ಸೆರಗು ತೆಗೆದು ಶಾಂತಿ ಗಂಡನ ಮೋರೆಯನ್ನು ನೋಡತೊಡಗಿದಳು.

ಒಂದು ಕಾಗದವನ್ನು ಅವಳ ಮುಂದೆ ಹಿಡಿದು ಸುರೇಂದ್ರ "ಇದು ನೋಡು, ನಮ್ಮ ಅಕ್ಕಾಜಿಯ ಹೆಸರು— ಇದು ನೋಡು, ಮಾಧವೀ ದೇವಿ— ಆಕೆಯ ಮನೆಮಾರು ಹೋದವು !" ಎಂದ.

ಒಂದು ಕ್ಷಣದೊಳಗೆ ಅನೇಕ ವಿಚಾರಗಳು ಶಾಂತಿಯ ಮನದಲ್ಲಿ ತುಂಬಿದವು. ಅವಳೆಂದಳು: "ಅಂತೆಯೇ ನನಗೆನಿಸುತ್ತಿದೆ— ಎಲ್ಲವನ್ನೂ ಹಿಂದಿರುಗಿಸಬೇಕೆಂದು ನಿಮ್ಮಿಷ್ಟವಲ್ಲವೆ ?"

ಸುರೇಂದ್ರ ತುಸ ನಕ್ಕು "ಅಂತೆಯೇ ಎಲ್ಲವನ್ನೂ ಹಿಂದಿರುಗಿಸಬೇಕೆನ್ನುತ್ತೇನೆ" ಎಂದ.

ಮಾಧವಿಯ ವಿಷಯ ಹೊರಡುತ್ತಲೆ ಶಾಂತಿಗೆ ಸ್ವಲ್ಪ ಕೆಟ್ಟೆನಿಸಿತು. ಅವಳಿಗೆ ಮನಸಿನೊಳಗೆ ಮತ್ಸರವೆನಿಸುತ್ತಿದ್ದರೂ ಇರಬಹುದು. ಅವಳೆಂದಳು: "ಆಕೆ ನಿಮ್ಮ ಅಕ್ಕಾಜಿಯೆಂಬುದು ಏತರಿಂದ ? ಬರೀ ಮಾಧವಿ ಎಂಬ ಹೆಸರಿದೆ. ಬರೀ ಹೆಸರಿನಿಂದ ಇಷ್ಟೊಂದೂ ?"

"ಅಕ್ಕಾಜಿಯ ಹೆಸರನ್ನು ಸನ್ಮಾನಿಸಬೇಡವೆ ?"

"ಅಷ್ಟು ಮಾಡಿರಿ. ಆದರೆ ಇದರಿಂದ ಅವಳಿಗೇನಾಗುವುದು ? ಇದು ಅವಳಿಗೆ ತಿಳಿಯಲಿಕ್ಕಿಲ್ಲ ಕೂಡ."

"ಅದೇನೋ ಸರಿ. ಆದರೆ ನಾನು ಅವಳ ಹೆಸರನ್ನು ಅವಮಾನಿಸಲೆ ?"

"ಈ ಹೆಸರಿನವರು ನೂರು ಮಂದಿ ಇರಬಹುದು !"

"ನೀನು ದುರ್ಗಾ ಎಂದು ಹೆಸರನ್ನು ಬರೆದು ಕಾಲಿಂದ ತುಳಿಯಬಲ್ಲೆಯಾ ?"

"ಛೆ! ಎಂದಿಗೂ ಆಗಲಿಕ್ಕಿಲ್ಲ. ಆದರೆ ಅದೇನು ದೇವರ ಹೆಸರೇ ?"

ಸುರೇಂದ್ರನಾಥ ನಕ್ಕ—"ಒಳ್ಳೆಯದು. ಇದು ದೇವರ ಹೆಸರಿನ ಹರಾಜಲ್ಲ; ಬಿಡು. ನೀನೊಂದು ಕೆಲಸ ಮಾಡುವೆಯಾದರೆ ಐದು ಸಾವಿರ ರೂಪಾಯಿ ಕೊಡುತ್ತೇನೆ ನೋಡು."

"ಏನು ಕೆಲಸ ?" ಶಾಂತಿ ಉತ್ಸುಕತೆಯಿಂದ ಕೇಳಿದಳು.

ಗೋಡೆಯ ಮೇಲೆ ಸುರೇಂದ್ರನ ಭಾವಚಿತ್ರವೊಂದಿತ್ತು. ಆಕಡೆ ಬೆರಳುಮಾಡಿ "ಈ ಭಾವಚಿತ್ರವನ್ನು—"

" ಏನು ? "

" ನಾಲ್ಕು ಜನ ಬ್ರಾಹ್ಮಣರ ಹೆಗಲಮೇಲೆ ಹೊರಿಸಿಕೊಂಡು ಹೋಗಿ, ಹೊಳೆಯ ದಡದಲ್ಲಿ ಇದಕ್ಕೆ ನಿನ್ನಿಂದ ಅಗ್ನಿಸಂಸ್ಕಾರಮಾಡ ಲಿಕ್ಕಾದೀತೋ ? "

ಆಘಾತವಾದರೆ ಕ್ಷಣಾರ್ಧದಲ್ಲಿ ಮೊದಲು ರಕ್ತವೆಲ್ಲ ಲುಪ್ತ ವಾಗುವುದು; ಹಾವು ಕಡಿದವರ ಮುಖ ನೀಲಿ-ಕಪ್ಪು ಆಗುವುದು; ಶಾಂತಿಯ ಅವಸ್ಥೆ ಹಾಗೆಯೆ ಆಯಿತು. ಮುಖದಲ್ಲಿ ರಕ್ತ ಮೆಲ್ಲ ಮೆಲ್ಲನೆ ಮತ್ತೆ ಹರಿಯಿತು. ಬಳಿಕ ಕಳವಳದ ದೃಷ್ಟಿಯಿಂದ ಗಂಡನ ಮುಖವನ್ನು ನೋಡಿ ಅವಳು ಮುಖ ತಗ್ಗಿಸಿದಳು. ಈ ಅಕ್ಕಾಜಿ ಯಾವಳೇ ಇರಲಿ, ಇನ್ನು ಅವಳ ವಿಷಯವಾಗಿ ಒಂದು ಶಬ್ದವನ್ನೂ ಮಾತಾಡಕೂಡದೆಂದು ಆಣೆ ಮಾಡಿದಳು. ಮನೆಯೊಳಗೆ ಹೋಗಿ ಕದವಿಕ್ಕಿಕೊಂಡು ಬಹಳ ಹೊತ್ತಿನತನಕ ಅವಳು ಅಳುತ್ತ ಬಿದ್ದು ಕೊಂಡಳು. ಇಂತಹ ಕಟುಭಾಷಣವನ್ನು ಇಡೀ ಆಯುಷ್ಯದಲ್ಲಿಯೇ ಕೇಳಿರಲಿಲ್ಲ ಶಾಂತಿ.

ಸುರೇಂದ್ರನಾಥ ತುಸ ಹೊತ್ತು ಸ್ತಬ್ಧವಾಗಿ ಕುಳಿತಿದ್ದ. ಆ ಮೇಲೆ ಮನೆಯಿಂದ ಹೊರಬಿದ್ದು ಚಾವಡಿಗೆ ಹೋದ. ಅಲ್ಲಿ ಮಥುರ ಬಾಬು ಸಿಕ್ಕಿದ. " ಗೋಲಾಗ್ರಾಮದಲ್ಲಿ ಯಾರ ಸೊತ್ತಿನ ಹರಾ ಜಾಯಿತು ? " ಎಂದು ಕೇಳಿದ.

" ಕೈಲಾಸವಾಸಿ ರಾಮತನು ಸನ್ಯಾಲರ ಸೊಸೆಯದು. "

" ಏತಕ್ಕಾಗಿ ? "

" ಹತ್ತು ವರ್ಷದ ತೆರಿಗೆ ನಿಂತಿತ್ತು. "

" ತೆಗೆ ನೋಡೋಣ, ಎಲ್ಲಿದೆ ಖಾತೆ. "

ಮಥುರಬಾಬು ಮೊದಲು ತಡವರಿಸಿದ—ಅವನಿಗೆ ತಟ್ಟನೆ ಏನೆಂದು ಹೊಳೆಯಲಿಲ್ಲ. ಅನಂತರ ಹೇಳಿದ: " ಕಾಗದ ಪತ್ರಗಳು ಇನ್ನೂ ಪಾವನದಿಂದ ಬಂದಿಲ್ಲ. "

" ತರಲಿಕ್ಕೆ ಆಳನ್ನಟ್ಟು. ವಿಧವೆಗೆ ಇರಲಿಕ್ಕೆ ಸ್ಥಳವನ್ನು ಕೂಡ ಉಳಿಸಲಿಲ್ಲವಲ್ಲವೆ ? "

" ಇಲ್ಲವೆಂದು ತೋರುತ್ತದೆ. "

" ಹಾಗಾದರೆ ಅವಳಿನ್ನೆಲ್ಲಿ ಇದ್ದಾಳು ? "

ಮಥುರಬಾಬು ದಿಟ್ಟತನದಿಂದ ಉತ್ತರವಿತ್ತ: " ಇಷ್ಟು ದಿನ ವಿದ್ದಲ್ಲಿ ಇದ್ದಾಳೆಂದು ನನಗೆನಿಸುತ್ತದೆ. "

" ಇಷ್ಟು ದಿನ ಎಲ್ಲಿದ್ದಳು ? "

" ಕಲಕತ್ತೆಯಲ್ಲಿ ತಂದೆಯ ಮನೆಯೊಳಗೆ. "

" ತಂದೆಯ ಹೆಸರೇನು, ಗೊತ್ತಿದೆಯೊ ? "

" ಹೂಂ, ಬ್ರಜಲಾಲ ಲಾಹಿರಿ. "

" ಆ ವಿಧವೆಯ ಹೆಸರು ? "

" ಮಾಧವಿ. "

ಇದು ಕಿವಿಗೆ ಬೀಳುತ್ತಲೆ ಸುರೇಂದ್ರ ನಿಂತಲ್ಲಿಯೆ ಕುಸಿದ. ಮಥುರಬಾಬು ಅವನ ಈ ಪಾಡನ್ನು ಕಂಡು ಗಾಬರಿಯಾಗಿ ಕೇಳಿದ: " ಏಕೆ ಏನಾಗುತ್ತದೆ ? "

" ಏನೂ ಇಲ್ಲ " ಸುರೇಂದ್ರನಾಥ ಹೇಳಿದ.

ಒಬ್ಬ ಆಳನ್ನು ಕೂಗಿ " ಒಂದು ಒಳ್ಳೆಯ ಕುದುರೆಗೆ ತಡಿ ಹಾಕಲು ಹೇಳು. ನಾನು ಈಗಿಂದೀಗಲೇ ಗೋಲಾಗ್ರಾಮಕ್ಕೆ ಹೋಗ ಬೇಕು. ಆ ಊರು ಇಲ್ಲಿಂದೆಷ್ಟು ದೂರವಿದೆ, ನೀನೇನಾದರೂ ಬಲ್ಲೆಯಾ ? " ಎಂದು ಒಂದುಸಿರಿನಲ್ಲಿ ನುಡಿದ.

" ಹತ್ತು ಹರದಾರಿ ಆದೀತು. "

" ಈಗ ಒಂಬತ್ತು ಹೊಡೆದಿದೆ. ಒಂದರೊಳಗೆ ಅಲ್ಲಿಗೆ ಹೋಗ ಬಹುದು. "

ಕುದುರೆ ಬಂತು. ಅದನ್ನೇರಿ ಕುಳಿತು ಕೇಳಿದ: "ಯಾವ ಕಡೆಗೆ ?"

"ಉತ್ತರಕ್ಕೆ, ಮುಂದೆ ಪಶ್ಚಿಮಕ್ಕೆ."

ಚಮ್ಮಟಿಗೆಯನ್ನು ಕಟಿಯುತ್ತಲೇ ಕುದುರೆ ನಾಗಾಲೋಟದಿಂದ ಓಡಿತು.

ಈ ಸುದ್ದಿ ತಿಳಿಯುತ್ತಲೇ ಶಾಂತಿ ದೇವರ ಕೋಣೆಗೆ ಹೋಗಿ ತಲೆ ನೆಲಕ್ಕೆ ಗಟ್ಟಿಸಿದಳು.

"ದೇವರೇ, ನಿನ್ನ ಸಂಕಲ್ಪ ಹೀಗಿದ್ದಿತೇ ? ಇನ್ನು ಅವರು ಸುರಕ್ಷಿತವಾಗಿ ತಿರುಗಿ ಬರುವರಷ್ಟೇ ?"

ಆಮೇಲೆ ಇಬ್ಬರು ಪೇದೆಗಳು ಕುದುರೆಯೇರಿ ಗೋಲಾಗ್ರಾಮಕ್ಕೆ ಹೊರಟರು. ಅವರು ಹೋಗುವುದನ್ನು ಕಿಡಕಿಯೊಳಗಿಂದ ನೋಡಿ ಮೆಲ್ಲಮೆಲ್ಲನೆ ಕಣ್ಣೊರಸಿಕೊಂಡಳು. "ತಾಯಿ ದುರ್ಗೇ, ನಿನಗೆ ಜೋಡು ಕೋಣಗಳನ್ನು ಬಿಡಿಸುವೆ, ನೀನು ಬಯಸಿದುದನ್ನು ಕೊಡುವೆ, ಅವರನ್ನು ಸುಖರೂಪವಾಗಿ ಮನೆಗೆ ತಂದು ಮುಟ್ಟಿಸು. ನನ್ನ ಎದೆಯನ್ನು ಒಡೆದು ರಕ್ತವನ್ನು ಸುರಿಯುವೆ, ನೀನು ಬೇಡಿದಷ್ಟು ಹನಿಸುವೆ;—ತಾಯೊ ದುರ್ಗೆ, ನಿನ್ನ ನೀರಡಿಕೆ ಹಿಂಗುವಂತೆ ರಕ್ತವನ್ನು ಕುಡಿಸುವೆ!" ಎಂದು ಬೇಡಿಕೊಂಡಳು.

## ೧೩. ಅಕ್ಕಾಜಿ ಸಿಕ್ಕಿದಳು

ಗೋಲಾಗ್ರಾಮ ಇನ್ನೂ ಎರಡು ಹರದಾರಿಯಿತ್ತು. ಕುದುರೆ ಖುರದ ತನಕ ಬೆವರಿನಿಂದ ತೋಯ್ದಿತ್ತು. ದೂಳು ಹಾರಿಸುತ್ತ ಖುರಗಳ ತಾಳ ಬಾರಿಸುತ್ತ ಜೀವದ ಪರಿವೆಯಿಲ್ಲದೆ ಓಡುತ್ತಿತ್ತು. ನೆತ್ತಿಯ ಮೇಲೆ ನಡುಹಗಲ ಮಾರ್ತಂಡ ಉರಿಯುತ್ತಿದ್ದ.

ಸುರೇಂದ್ರ ಕುದುರೆಯ ಮೇಲೇನೊ ಕುಳಿತಿದ್ದ. ಅವನ ಮೈ ನಡುಗುತ್ತಿತ್ತು. ಶರೀರದೊಳಗಿನ ನರನರಗಳೆಲ್ಲ ಹರಿದು ಹೋಗಿ ಬೀಳುವವೋ ಎಂದೆನಿಸುತ್ತಿತ್ತು ! ಇಷ್ಟೇ ಅಲ್ಲ, ಎರಡು ಮೂರು ನೆತ್ತರ ಹನಿಗಳು ದೂಳಿಡಿದ ಅಂಗಿಯ ಮೇಲೆ ಬಿದ್ದವು. ಸುರೇಂದ್ರ ಕೈಯಿಂದಲೇ ಬಾಯಿ ಒರಸಿಕೊಂಡ. ಒಂದು ಹೊಡೆದಿದ್ದಿಲ್ಲವಿನ್ನೊ ಗೋಲಾಗ್ರಾಮುವನ್ನು ತಲುಪಿದ.

“ ಇದೇ ಏನು ಗೋಲಾಗ್ರಾಮು ? ” ಎಂದು ಹಾದಿಯ ಪಕ್ಕದಲ್ಲಿದ್ದ ಒಂದು ಅಂಗಡಿಯಲ್ಲಿ ಕೇಳಿದ.

“ ಹೌದು. ”

“ ರಾಮತನು ಸನ್ಯಾಳರ ಮನೆ ಯಾವುದು ?”

“ ಈಕಡೆ. ”

ಕುದುರೆ ಮತ್ತೆ ಹೊರಟಿತು. ತುಸ ಹೊತ್ತಿನಲ್ಲಿಯೇ ತನಗೆ ಬೇಕಾದ ಮನೆಯ ಎದುರಿನಲ್ಲಿ ಹೋಗಿ ನಿಂತ. ಬಾಗಿಲಲ್ಲಿಯೇ ಒಬ್ಬ ಪೇದೆ ನಿಂತಿದ್ದ. ಒಡೆಯ ಬಂದುದನ್ನು ಕಾಣುತ್ತಲೇ ಎದ್ದು ವಂದನೆ ಸಲ್ಲಿಸಿದ.

“ ಮನೆಯಲ್ಲಿ ಯಾರು ಇದ್ದಾರೆ ?” ಸುರೇಂದ್ರ ಕೇಳಿದ.

“ ಯಾರೂ ಇಲ್ಲ. ”

“ ಯಾರೂ ಇಲ್ಲ ? ಎಲ್ಲಿ ಹೋದರು ?”

“ ಹೊತ್ತುಂಟಲೇ ದೋಣಿ ಮಾಡಿಕೊಂಡು ಹೊರಟುಹೋಗಿದ್ದಾರೆ. ”

“ ಹೊಳೆಯ ದಂಡೆಗುಂಟ ದಾರಿಯುಂಟೋ ? ಕುದುರೆ ಹೋಗಬಹುದೋ ? ”

“ ಗೊತ್ತಿಲ್ಲ—ಇರಲಿಕ್ಕಿಲ್ಲ. ”

ಕುದುರೆ ಮತ್ತೆ ಹೊರಟಿತು. ಎರಡು ಹರದಾರಿ ಹೋದಮೇಲೆ ದಾರಿಯಿಲ್ಲದಾಯಿತು. ಕುದುರೆಯನ್ನು ಅಲ್ಲಿಯೆ ಬಿಟ್ಟುಬಿಟ್ಟು ಸುರೇಂದ್ರ ಕಾಲುನಡಿಗೆಯಿಂದ ಹೊರಟ. ಅಂಗಿಯ ಮೇಲೆ ರಕ್ತದ ಕಲೆಗಳು ಹೆಚ್ಚಾಗಿದ್ದವು. ತುಟಿಯಿಂದ ರಕ್ತ ತಟಕಿಕ್ಕುತ್ತಲೇ ಇತ್ತು! ಅವನು ಹೊಳೆಯ ಪಾತ್ರದವರೆಗಿಳಿದು ಬೊಗಸೆಯಿಂದ ನೀರು ಕುಡಿದ. ಜೀವದ ಪರಿವೆಯಿಲ್ಲದೆ ಮುಂದೆ ಓಡತೊಡಗಿದ. ಕಾಲಲ್ಲಿ ಸತುವು ಇಲ್ಲ. ಮೈಯೆಲ್ಲ ಬೆಮತು ರಮುರಾಡಿಯಾಗಿದೆ. ನಡುನಡುವೆ ನೆತ್ತರಿನ ತಟಕುಗಳು ! ಎದೆಯ ಮೇಲೆ ನೆತ್ತರ ಚಿಮುಕಿಸಿರುವಂತೆ ಆಗಿತ್ತು.

ಕೊನೆಯ ಹೊತ್ತು ಬಂದಿತು. ಕಾಲು ಏಳಲೊಲ್ಲವು. ಹುಟ್ಟಿ ಇಷ್ಟು ದಿನವಾದ ಬಳಿಕ ಈದಿನವೇ ನಿದ್ದೆ ಬರುತ್ತಿದೆಯೋ ಏನೋ—ಅಂತಿಮ ಶಯ್ಯೆಯಲ್ಲಿ ಪರಮ ವಿಶ್ರಾಂತಿಯನ್ನು ಪಡೆಯುವ ಆಸೆಯಿಂದಲೋ ಎಂಬಂತೆ ಗಾಳಿತುಂಬಿರುವವನಂತೆ ಅವನು ಸಾಗಿದ್ದ. ದೇಹದಲ್ಲಿರುವ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ ಒಮ್ಮೆ ವೆಚ್ಚ ಮಾಡಿ, ಕೊನೆಗೆ ಹಾಸಿಗೆ ಆಸರಹೊಂದಬೇಕು, ಒಂವರಿ ಮತ್ತೆ ಏಳುವುದೇ ಬೇಡ--ಎಂತಲೋ ಏನೋ.

ನದಿಯ ದಂಡೆಯ ಸಮೀಪದಲ್ಲಿಯೆ—ಅದು ದೋಣಿಯೇ ಅಲ್ಲವೆ ?

ಅಂಬಿಗ ಕೊಂಬೆಗಳನ್ನು ಮುರಿದು ಹಾದಿ ಮಾಡುತ್ತಲಿದ್ದ. " ಅಕ್ಕಾಜೀ ! " ಸುರೇಂದ್ರ ಕೂಗಿದ.

ಗಂಟಲು ಒಣಗಿ ಹೋದುದರಿಂದ ಶಬ್ದ ಹೊರಗೆ ಬರಲಿಲ್ಲ. ನೆತ್ತರಿನ ಎರಡು ತೊಟ್ಟುಗಳು ಮಾತ್ರ ಹೊರಬಿದ್ದವು.

" ಅಕ್ಕಾಜೀ !-- "

ಈಗಲೂ ನೆತ್ತರ ಹನಿಗಳೇ ಹೊರಟವು.

ಅಂಬಿಗ ನಾವನ್ನು ನಿಲ್ಲಿಸುತ್ತಿದ್ದ. ಅಷ್ಟರಲ್ಲಿ ಸುರೇಂದ್ರ ಬಂದು ತಲುಪಿದ. " ಅಕ್ಕಾಜೀ ! "

ಇಡೀ ದಿನ ಉಪವಾಸ. ಮೇಲೆ ಮನಸಿಗೆ ನೋವು.—ಆದುದರಿಂದ ಮಾಧವಿ ಹೆಣವಾಗಿ ಸಂತೋಷಕುಮಾರನ ಹತ್ತಿರ ಇದೀಗ ಕಣ್ಣುಮುಚ್ಚಿಕೊಂಡು ಮಲಗಿದ್ದಳು. ಅವಳ ಕಿವಿಯೊಳಗೆ ಒಮ್ಮಿಂದೊಮ್ಮೆಲೆ ಈ ಶಬ್ದ ಬಿತ್ತು. ಈ ಮುಂಚಿನ ಗುರುತಿನ ಸ್ವರದಿಂದ ಯಾರೂ ಕೂಗುತ್ತಿಲ್ಲವೆಂದೆನಿಸಿತು. ಮಾಧವಿ ಎದ್ದು ಕುಳಿತಳು. ನಾವಿನಿಂದ ಹೊರಗೆ ನೋಡಿದಳು. ಮೈಯಂತ ಮೈಯೆಲ್ಲ ದೂಳು ಮುಸುಕಿದೆ—"ಉಪಾಧ್ಯಾಯ ಮಹಾಶಯರೋ ಏನು ?"

"ನಾವಾಡಿಗನಿಗೆ ನಾವನ್ನು ಬೇಗನೆ ದಂಡೆಗೊಯ್ಯಲು ಹೇಳವ್ವ."

ಸುರೇಂದ್ರನಾಥ ಹಾಗೆಯೆ ನೆಲದ ಮೇಲೆ ಬಿದ್ದಿದ್ದ. ಎಲ್ಲರೂ ಕೂಡಿ ಅವನನ್ನೆತ್ತಿ ದೋಣಿಯಲ್ಲಿ ಹಾಕಿದರು. ಅವನ ಕಣ್ಣಿಗೆ ನೀರು ಹಚ್ಚಿದರು. ಬಾಯೊಳಗೆ ನೀರು ಹಾಕಿದರು. ಒಬ್ಬ ಅಂಬಿಗ ಅವನನ್ನು ಗುರುತಿಸಿದ. "ಲಾಲತಾಗ್ರಾಮದ ಜಮೀನುದಾರರು" ಎಂದ.

ಮಾಧವಿ ತನ್ನ ಕೊರಳೊಳಗಿನ ಬಂಗಾರದ ಸರವನ್ನು ತೆಗೆದು ಅಂಬಿಗನ ಕೈಯಲ್ಲಿತ್ತು "ಲಾಲತಾಗ್ರಾಮಕ್ಕೆ ಇಂದಿನ ರಾತ್ರಿಯಲ್ಲಿಯೇ ನಮ್ಮನ್ನು ಮುಟ್ಟಿಸುತ್ತೀರಾ ? ಎಲ್ಲರಿಗೂ ಒಂದೊಂದು ಹಾರವನ್ನು ಕೊಡುತ್ತೇನೆ" ಎಂದಳು.

ಬಂಗಾರದ ಸರವನ್ನು ನೋಡುತ್ತಲೆ ಅವರೊಳಗಿನಮೂವರು ಒಲ್ಲಿಯನ್ನು ಹೆಗಲಮೇಲೆ ಹಾಕಿಕೊಂಡು ಎಂದರು: "ಅವ್ವನವರೇ, ಬೆಳುದಿಂಗಳ ದಿನ ಐತೆ. ಚುಮುಚುಮು ಬೆಳಗಾಗುವದರೊಳಗೆ ಮುಟ್ಟಿಸುತ್ತೇವೆ."

ಸಂಜೆಯನಂತರ ಸುರೇಂದ್ರನಿಗೆ ಎಚ್ಚರ ಹುಟ್ಟಿತು. ಕಣ್ಣು ತೆರೆದು ಅವನು ಮಾಧವಿಯ ಮೋರೆಯ ಕಡೆ ನೋಡಿದ. ಆಗ ಅವಳು ಮುಖದಮೇಲೆ ಸೆರಗು ಎಳೆದಿರಲಿಲ್ಲ. ಒಂದು ಸ್ವಲ್ಪ ಹಣೆ ಮಾತ್ರ ಮರೆಯಾಗಿತ್ತು. ಸುರೇಂದ್ರನ ತಲೆಯನ್ನು ತೊಡೆಯಮೇಲೆ ತೆಗೆದುಕೊಂಡು ಮಾಧವಿ ಕುಳಿತಿದ್ದಳು. ಕೆಲಹೊತ್ತು ಅವಳ ಕಡೆ ನೋಡುತ್ತಿದ್ದು ಸುರೇಂದ್ರ ಕೇಳಿದ:

" ನೀವು ಅಕ್ಕಾಜಿ ? "

ಮಾಧವಿ ಅವನ ತುಟಿಯಮೇಲಿನ ನೆತ್ತರನ್ನು ಸೆರಗಿನಿಂದ ಒರಸಿದಳು; ಬಳಿಕ ತನ್ನ ಕಣ್ಣು ಒರಸಿಕೊಂಡಳು.

" ನೀವು ಅಕ್ಕಾಜಿ ? "

" ನಾನು ಮಾಧವಿ. "

ಸುರೇಂದ್ರನಾಥ ಕಣ್ಣುತಿಕ್ಕಿಕೊಳ್ಳುತ್ತ ಮೃದುಸ್ವರದಿಂದ ನುಡಿದ: " ಅದೇ ಎಂದೆ. "

ವಿಶ್ವದಲ್ಲಿ ವ್ಯಾಪಿಸಿದ್ದ ಶಾಂತಿಯೆಲ್ಲವೂ ಆ ತೊಡೆಯಲ್ಲಿಯೇ ಮನೆಮಾಡಿದ್ದಿತೋ ಏನೊ. ಇಂದು ಇಷ್ಟು ದಿನಗಳ ಮೇಲೆ ಇಷ್ಟೊಂದು ಪ್ರಯಾಸದಿಂದ ಸುರೇಂದ್ರನಿಗೆ ಪ್ರಾಪ್ತವಾಗಿದ್ದಿತು. ನಸುನಗೆಸೂಸಿ ಎಂದ: " ಅಕ್ಕಾಜೀ ! ಯಾವ ಕಷ್ಟ—- "

ನೌಕೆ ಸರಸರ ಹೋಗುತ್ತಿತ್ತು. ಆರರ ಹೊತ್ತು. ಸುರೇಂದ್ರನ ಮೋರೆಯ ಮೇಲೆ ತಿಂಗಳ ಕಿರಣ ಬಿದ್ದಿತ್ತು. ನಯನತಾರೆಯ ತಾಯಿ —ಮಾಧವಿಯ ದಾಸಿ— ಒಂದು ಮುರಿದ ಬೀಸಣಿಕೆಯನ್ನು ಹಿಡಿದು ಮೆಲ್ಲಮೆಲ್ಲನೆ ಗಾಳಿಹಾಕುತ್ತಿದ್ದಳು.

" ಎತ್ತ ಹೊರಟಿರುವಿರಿ ? " ಎಂದು ಸುರೇಂದ್ರನಾಥ ಮೆಲುದನಿಯಲ್ಲಿ ಕೇಳಿದ.

" ಪ್ರಮೀಲೆಯ ಅತ್ತೆಯ ಮನೆಗೆ. "

" ಛೆ ಛೆ, ಇಂತಹ ಸ್ಥಿತಿಯೊಳಗೆ ಬೀಗರು ಬಿಜ್ಜರ ಮನೆಗೆ ಏತಕ್ಕೆ ಹೋಗಬೇಕು ?"

## ೧೪.

ತನ್ನ ರಾಜವಾಡೆಯಲ್ಲಿ, ತನ್ನ ಶಯ್ಯಾಗೃಹದಲ್ಲಿ ಅಕ್ಕಾಜಿಯ ತೊಡೆಯ ಮೇಲೆ ತಲೆಯಿಟ್ಟು ಸುರೇಂದ್ರ ಮೃತ್ಯುಶಯ್ಯೆಯ ಮೇಲೆ

ಮಲಗಿದ್ದ. ಅವನ ಕಾಲುಗಳನ್ನು ತನ್ನ ತೊಡೆಯಮೇಲಿಟ್ಟುಕೊಂಡು ಶಾಂತಿ ಕಂಬನಿಯಿಂದ ತೊಳೆಯುತ್ತಿದ್ದಳು. ಪಾವನ ಜಿಲ್ಲೆಯೊಳಗಿನ ಎಲ್ಲ ವೈದ್ಯ— ಡಾಕ್ಟರರು ಬಂದುಹೋದರು. ಯಾರ ಪ್ರಯತ್ನಕ್ಕೂ ಸುರೇಂದ್ರನ ರಕ್ತಸ್ರಾವ ನಿಲ್ಲಲಿಲ್ಲ. ಐದು ವರುಷಗಳ ಹಿಂದೆ ಕಲಕತ್ತೆಯಲ್ಲಾಗಿದ್ದ ಅಪಘಾತದ ಮೂಲಕವೇ ಇಂದು ರಕ್ತ ಸೋರತೊಡಗಿತ್ತು.

ಮಾಧವಿಯ ಅಂತರ್ಯಾಮಿಯ ಸ್ಥಿತಿಯನ್ನು ಸರಿಯಾಗಿ ಹೇಳಲಿಕ್ಕೆ ಬರುವುದಿಲ್ಲ. ಅದು ನನಗೆ ಕೂಡ ಚೆನ್ನಾಗಿ ತಿಳಿದಿರುವುದಿಲ್ಲ. ಐದು ವರ್ಷಗಳ ಹಿಂದಿನ ಚಿತ್ರಗಳು ಆಕೆಯ ಕಣ್ಣುಮುಂದೆ ಕಟ್ಟಿರುವ ಸಂಭವವಿದೆ: ಸುರೇಂದ್ರನನ್ನು ಮನೆಯಿಂದ ಓಡಿಸಲು ತಾನು ಹೇಗೆ ಕಾರಣಳಾದೆ, ಆದರೆ ಅವನನ್ನು ತಿರುಗಿ ತಂದಿಟ್ಟುಕೊಳ್ಳುವುದು ಮಾತ್ರ ಆಗದೆ ಹೋಯಿತು, ಎಂಬ ವಿಚಾರ ಅವಳ ಮನಸನ್ನು ಹಿಡಿದಿರಬೇಕು. ಆದರೂ ಇಂದು ಐದು ವರುಷಗಳಮೇಲೆ ಸುರೇಂದ್ರನಾಥ ಅವಳನ್ನು ತಿರುಗಿ ಕರೆದೊಯ್ಯಲು ಶಕ್ತನಾದ.

ಸಂಜೆಯಾಗಿತ್ತು. ದೀಪದ ಉಜ್ವಲ ಪ್ರಕಾಶ ಬಿದ್ದಿತ್ತು. ಸುರೇಂದ್ರ ಮಾಧವಿಯ ಮೋರೆಯನ್ನು ನೋಡಿದ. ಕಾಲದಿಸೆಯಲ್ಲಿ ಶಾಂತಿ ಕುಳಿತಿದ್ದಳು.

ಶಾಂತಿಗೆ ಕೇಳಿಸಬಾರದೆಂದು ತನ್ನ ಮಾಧವಿಯ ಮುಖವನ್ನು ತನ್ನ ಹತ್ತಿರಕ್ಕೆ ತೆಗೆದುಕೊಂಡು ಸುರೇಂದ್ರನೆಂದ: " ಅಕ್ಕಾಜೀ, ನೀನು ನನ್ನನ್ನು ಹೊರಹೊರಡಿಸಿದ ಅಂದಿನಾ ದಿನದ ನೆನಪು ನನಗಾಗುತ್ತಿದೆ. ನನ್ನಿಂದಾಗಿ ನಿಮಗೂ ಹೋಗಬೇಕಾಗಿ ಬಂತು ನಿಜ. ಆದರೆ ನಾನು ಹುಡುಕಿ ತಂದೆ, ಹುಡುಕಿ ತಂದೆ, ಆದರೆ— ! "

ಕ್ಷಣಾರ್ಧದಲ್ಲಿ ಮಾಧವಿಗೆ ಮೂರ್ಛೆ ಬಂತು; ಸುರೇಂದ್ರನ ಹೆಗಲ ಹತ್ತಿರ ತಲೆಯಿಟ್ಟು ಬಿದ್ದಳು.

ಎಚ್ಚತ್ತು ನೋಡಿದಾಗ ಎಲ್ಲೆಲ್ಲಿಯೂ ಆಕ್ರಾಂತ !

೧—೮—೧೯೩೯

# ನೆರವು

ಶ್ರೀ. ಜಿ. ಕೆ. ಕೇಳಕರ
ಒಡೆಯರು ಸ್ವದೇಶಿ ಪೇಪರ ಮಾರ್ಟ, ಧಾರವಾಡ. ೧೦-೦-೦

,, ಎಸ್. ಎಸ್. ರಾಮಮೂರ್ತಿ ಬಿ.ಎ.ಬಿ.ಎಲ್.
ಎಮ್.ಎಲ್.ಸಿ. ವಿರಾಜಪೇಟೆ. ೧೦-೦-೦

,, ಚಿದಂಬರರಾವ ಸರದೇಶಪಾಂಡೆ, ಮುನವಳ್ಳಿ. ೧೦-೦-೦

,, ಎನ್. ಆರ್. ಗೋಪಾಲಕೃಷ್ಣ ಬಿ.ಎ.ಬಿ.ಎಲ್.
ಪಬ್ಲಿಕ್ ಪ್ರಾಸಿಕ್ಯೂಟರ, ಮಡಿಕೇರಿ. ೧೦-೦-೦

ಪ್ರೊ. ಕೆ. ಜಿ. ಕುಂದಣಗಾರ ಎಂ.ಎ. ಕೊಲ್ಲಾಪುರ. ೧೦-೦-೦

ಶ್ರೀ. ದೇಸಾಯಿ ನಾಗೇಶರಾಯರು, ಅಮರಗೋಳ. ೧೦-೦-೦

,, ದೇಸಾಯಿ ಕೃಷ್ಣರಾಯರು ಬೆಳಗಲಿ, ಹುಬ್ಬಳ್ಳಿ. ೧೦-೦-೦

,, ರಾಯದುರ್ಗ ಕೃಷ್ಣರಾಯರು, ಧಾರವಾಡ. ೧೦-೦-೦

,, ಗುಡಿಹಾಳ ಹನುಮಂತರಾವ ದೇಶಪಾಂಡೆ
ಹಾಯಕೋರ್ಟ ವಕೀಲ, ರಾಯಚೂರ. ೫-೦-೦

,, ಜಿ. ಎನ್. ಕಲಮದಾನಿ, ಹುಬ್ಬಳ್ಳಿ. ೫-೦-೦

ಮೆಸರ್ಸ ಅಂಕೋಲಾ ಕಿರಾಣಿ ಸ್ಟೋರ್ಸ, ಧಾರವಾಡ. ೫-೦-೦

ಶ್ರೀ. ಬಿ. ಎ. ಪಾಟೀಲ, ಇಟಗಿ. ೫-೦-೦

,, ಎಲ್. ವಿ. ನಾಯಕ, ರಾಮದುರ್ಗ. ೫-೦-೦

ಶ್ರೀ. ಹಳಪೇಟ ಚಿಂತಾಮಣಿರಾಯರು, ಧಾರವಾಡ. ೫-೦-೦

,, ಜಿ. ಜಿ. ಪದಕಿ, ಎಂ.ಎ.ಬಿ.ಟಿ. ವಿಜಾಪುರ. ೫-೦-೦

ಶ್ರೀ. ಆರ್. ವಿ. ಬೆಟಗೇರಿ, ಅಮರಗೋಳ. ೫-೦-೦

,, ವಿ. ಬಿ. ಹನಸಿ, ಅಮರಗೋಳ. ೫-೦-೦

,, ಕೆ. ಎಸ್. ಕುಲಕರ್ಣಿ, ಶಿರಕೋಳ. ೫-೦-೦

,, ಲಂಡೋಜ ಶಿವಪ್ಪಗೌಡರು, ಬೇಗೂರ. ೫-೦-೦

,, ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ.ಎಸ್.ಸಿ. ಧಾರವಾಡ. ೫-೦-೦

,, ಬೆಳವಡಿ ಗೋಪಾಳರಾಯರು, ಬೆಳವಡಿ. ೫-೦-೦

,, ಎಂ. ಶ್ರೀನಿವಾಸನ್ ಬಿ.ಎ. ಹಾಸನ. ೫-೦-೦

**ಈ ಮಹನೀಯರು ಲಲಿತ ಸಾಹಿತ್ಯ ಮಾಲೆಯ ಆರಂಭದಲ್ಲಿ ಪೋಷಣೆಯಿತ್ತು ಸಹಾಯ ಮಾಡಿದ್ದಾರೆ. ಇವರೆಲ್ಲರಿಗೆ ನಮ್ಮ ಕೃತಜ್ಞತೆಯ ವಂದನೆಗಳು.**


# ಜಯಂತಿ

ಸಂಪಾದಕರು : ಶ್ರೀ. ಬೆಟಗೇರಿ ಕೃಷ್ಣಶರ್ಮರು

**ಕನ್ನಡ ನಾಡು ನುಡಿಗಳ ಸರ್ವತೋಮುಖ ಉನ್ನತಿಯನ್ನು ಪ್ರಚೋದಿಸುವ ಸುಲಲಿತ ಮಾಸ ಪತ್ರಿಕೆ.**

— ವಾರ್ಷಿಕ ಚಂದಾ ಮೂರು ರೂಪಾಯಿ

**ಜಯಂತಿ** ಧಾರ..

# ದಿ ಯುನೈಟೆಡ್ ಕರ್ನಾಟಕ ಇನ್ಸ್ಯುರನ್ಸ ಕಂಪನಿ, ಲಿಮಿಟೆಡ್

ಮುಖ್ಯ ಕಾರ್ಯಾಲಯ : **ಧಾರವಾಡ.**

- ಭರದಿಂದ ಬೆಳೆಯುತ್ತಿರುವ ಉತ್ತರ ಕರ್ನಾಟಕದ ಪ್ರಥಮ ವಿಮಾ ಸಂಸ್ಥೆ.
- ಸರಕಾರದ ಆಧಾರ ಪತ್ರಗಳಲ್ಲಿ (Govt. Papers) ರೂ. ೧,೩೧,೬೦೦ ಗಳನ್ನು ತೊಡಗಿಸಿದೆ.
- ಪಾಲಿಸಿದಾರರ ಜೀವವಿಮಾ ಸಿಧಿ ರೂ. ೧,೦೦,೦೦೦
- ಮರಣಹೊಂದಿದವರ ವಾರಸದಾರರಿಗೆ ಸಲ್ಲಿಸಿದ ಪಕ್ಕಿನ ಹಣ ರೂ. ೪,೦೦೦
- ಅಖಂಡ ಕರ್ನಾಟಕದವರ ಆದರಾಭಿಮಾನದ ಸಂಸ್ಥೆ.
- ಪ್ರತಿಯೊಬ್ಬ ಕನ್ನಡಿಗನು ಪಾಲಿಸಿಯನ್ನೂ ಪಾಲನ್ನೂ ಪಡೆಯಲು ಯೋಗ್ಯವಾದ ಸಂಸ್ಥೆ.
- ಕಾರ್ಯಕುಶಲರಿಗೆ ಪೂರ್ಣ ಲಾಭ. ಏಜಂಟರಾಗಬಯಸುವವರು ಬರೆಯುವುದು.

**ಎಸ್. ಗೋವರ್ಧನರಾವ್**

ಮ್ಯಾನೇಜರ

ಮುಂಬಯಿ ಸಂಘಟನಾ ಕಚೇರಿ :

೧೦ ಬಿಸ್ಮಿಲ್ಲಾ ಬಿಲ್ಡಿಂಗ, ಬಿ.ಬಿ.ಸಿ.ಆಯ್. ಸ್ಟೇಶನದ ಎದುರು

ದಾದರ, ಮುಂಬಯಿ

# ಲಲಿತ ಸಾಹಿತ್ಯ ಮಾಲೆ

**ವರುಷಕ್ಕೆ ನೂರು ನೂರು ಪುಟದ ಆರು ಪುಸ್ತಕ**
**ವಾರ್ಷಿಕ ಚಂದಾ ಅಂಚೆ ಸೇರಿ ಮೂರು ರೂಪಾಯಿ**

# ಚಿಗುರು

**ಲಲಿತ ಸಾಹಿತ್ಯ ಮಾಲೆಯ ಮೊದಲನೆಯ ಹೊತ್ತಗೆ**

ದಿವಂಗತೆ ಸೌ. ಗೌರಮ್ಮನವರ

ಎರಡನೆಯ ಕಥಾ ಮಂಜರಿ.

**'ಕನ್ನಡನುಡಿ'ಯಲ್ಲಿ ಶ್ರೀ. ಸಿ. ಕೃ. ಅವರು**
ಹೀಗೆ ಬರೆದಿದ್ದಾರೆ:

"ನೀತಿಯ ನೆಲೆಗಟ್ಟಿನ ಮೇಲೆ ಸುಧಾರಣೆಯ ಸರಸ ಪ್ರೇಮದ ಕಟ್ಟಡ ಕಟ್ಟಿದ್ದಾರೆ. 'ಕಂಬನಿ' ಎಂದು ಗೌರಮ್ಮನವರ ಇನ್ನೊಂದು ಕಥಾಸಂಗ್ರಹಕ್ಕೆ ಹೆಸರು. ನಿಜವಾಗಿಯೂ ಅವರ ಎಲ್ಲ ಕತೆಗಳಲ್ಲಿಯೂ 'ಕಂಬನಿ' ಕರುಣರಸ ಇದೆ. ಈ ಪುಸ್ತಕಕ್ಕೆ ಮುನ್ನುಡಿ ಬರೆದ ಶ್ರೀ. ಬೇಂದ್ರೆಯವರು ಹೇಳಿದ ಹಾಗೆ 'ಆಕ್ರೋಶಕ್ಕಿಳಿಯದೆ ಕಾರುಣ್ಯದ ಹದ ತರಬಲ್ಲ ಈ ಕತೆಗಾರ್ತಿಯ ಕೌಶಲದ ಧ್ವನಿ ಹೃದಯಕ್ಕೆ ಮುಟ್ಟಿದಾಗ ತಂಗಿ ಗೌರಮ್ಮನವರ ನಿಧನದಿಂದ ಕನ್ನಡಕ್ಕೆ ಆದ ಹಾನಿ ಅಷ್ಟಿಷ್ಟಲ್ಲ ಎಂದು ಮತ್ತೆ ತೋರುತ್ತದೆ.'"

ಪುಟ ಸಂಖ್ಯೆ ೧೧೨+೬. ● ಬೆಲೆ ಹದಿನಾಲ್ಕು ಆ

ಮನೋಹರ ಗ್ರಂಥ ಭಾಂಡಾರ, ಧಾರವಾಡ

ಕನ್ನಡ ಪುಸ್ತಕಾಲಯ, ಬೆಳಗಾವಿ.